20 June 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಿರೀಕ್ಷೆಯ ಮಟ್ಟ
ಕಡಿಮೆಯಾದಷ್ಟು,
ನಮ್ಮದಿಯ ಮಟ್ಟ
ಜಾಸ್ತಿಯಾಗುತ್ತಾ ಬರುತ್ತದೆ!

▸▸ ಸ್ನೇಹಾ ಆನಂದ್

info.varthaman@gmail.com



ಆರ್‌ಟಿಸಿ ಗೊಂದಲ ಸರಿಪಡಿಸುವಲ್ಲಿ ಅಧಿಕಾರಿ, ಜನಪ್ರತಿನಿಧಿಗಳ ನಿರ್ಲಕ್ಷ್ಯ — ಪುಟ ಸಂ. 2



ಸುರಕ್ಷತೆ ಇರದ ರೆಸ್ಟೋರೆಂಟ್ ತೆರವುಗೊಳಿಸಿ — ಪುಟ ಸಂ. 3



ವಿದ್ಯುತ್ ಖಾಸಗೀಕರಣ ವಿರೋಧಿಸಿ ರೈತರ ಪ್ರತಿಭಟನೆ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 203 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಮೇಕೆದಾಟು ವಿರುದ್ಧ ತ.ನಾಡು ನಿರ್ಣಯ

### ವಿಧಾನಸಭೆಯಲ್ಲಿ ಸಿಎಂ ವಿಜಯ್ ಮಂಡನೆ ಅನುಮತಿ ನೀಡದಂತೆ ಕೇಂದ್ರಕ್ಕೆ ಒತ್ತಾಯ



**ಚೆನ್ನೈ:** ಕರ್ನಾಟಕ ನಿರ್ಮಿಸಲು ಉದ್ದೇಶಿಸಿರುವ ಮೇಕೆದಾಟು ಅಣೆಕಟ್ಟು ಯೋಜನೆಗೆ ತಾಂತ್ರಿಕ ಮತ್ತು ಪರಿಸರ ಅನುಮತಿ ಸೇರಿದಂತೆ ಯಾವುದೇ ಅನುಮೋದನೆ ನೀಡದಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ತಮಿಳುನಾಡು ವಿಧಾನಸಭೆ ಶುಕ್ರವಾರ ಸರ್ವಾನುಮತದಿಂದ ಅಂಗೀಕರಿಸಿತು. ಮುಖ್ಯಮಂತ್ರಿ ಜೋಸೆಫ್ ವಿಜಯ್ ನಿರ್ಣಯ ಮಂಡಿಸಿದರು.

ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಅಣೆಕಟ್ಟು ನಿರ್ಮಿಸುವ ಕರ್ನಾಟಕ ಸರ್ಕಾರದ ನಿರ್ಧಾರ ಏಕಪಕ್ಷೀಯ ಕ್ರಮವಾಗಿದೆ. ಮೇಕೆದಾಟು ಯೋಜನೆಗೆ ಸಂಬಂಧಿಸಿದ ಪ್ರಸ್ತಾವನೆ ಕಾವೇರಿ ಜಲ ವಿವಾದ ನ್ಯಾಯಮಂಡಳಿಯ 2007ರ ಅಂತಿಮ ತೀರ್ಪು ಮತ್ತು ಸುಪ್ರೀಂ ಕೋರ್ಟ್‌ನ 2018ರ ಆದೇಶವನ್ನು ನಿರ್ಲಕ್ಷಿಸಿದೆ. ಅಲ್ಲದೇ ಜಲಾನಯನ ರಾಜ್ಯಗಳ ಒಪ್ಪಿಗೆ ಅಥವಾ ಕೇಂದ್ರ ಸರ್ಕಾರದ ಅನುಮೋದನೆ ಇಲ್ಲದೆ ಇದನ್ನ ಅನುಸರಿಸಲಾಗಿದೆ. ಇಂತಹ ಕ್ರಮವು ಸ್ವೀಕಾರಾರ್ಹವಲ್ಲ ಎಂದು ವಿಜಯ್ ಮಂಡಿಸಿದ ನಿರ್ಣಯದಲ್ಲಿ ತಿಳಿಸಿದರು.

ಕಾವೇರಿ ಜಲಾನಯನ ಪ್ರದೇಶ ನೀರಿನ ಕೊರತೆ ಇರುವ ಪ್ರದೇಶವಾಗಿದೆ. ಲಭ್ಯವಿರುವ ನೀರನ್ನ ಈಗಾಗಲೇ ರಾಜ್ಯಗಳ ನಡುವೆ ಹಂಚಿಕೆ ಮಾಡಲಾಗಿದೆ ಎಂದು ನ್ಯಾಯಮಂಡಳಿ ಮತ್ತು ಸುಪ್ರೀಂ ಕೋರ್ಟ್ ಎರಡೂ ಗಮನಿಸಿವೆ. ಜಲಾನಯನ ಪ್ರದೇಶದಲ್ಲಿ ಯಾವುದೇ ಹೊಸ ಯೋಜನೆ ಕೈಗೊಳ್ಳಬಾರದು ಹಾಗೂ ಜೊತೆಗೆ ಹೆಚ್ಚುವರಿ ಪ್ರಮಾಣದ ನೀರನ್ನು ಬಳಸಿಕೊಳ್ಳಲು ಅವಕಾಶ ನೀಡಬಾರದು ಎಂದು ನಿರ್ಣಯ ಒತ್ತಿಹೇಳಿದೆ.

ಕಾವೇರಿ ನೀರಿನ ಸಮಸ್ಯೆ ತಮಿಳುನಾಡು ಮತ್ತು ಕರ್ನಾಟಕದ ನಡುವಿನ ಅತ್ಯಂತ ಸೂಕ್ಷ್ಮ ವಿಷಯವಾಗಿದೆ. ಕಾವೇರಿ ಜಲಾನಯನ ಪ್ರದೇಶದ ಯಾವುದೇ ಸ್ಥಳದಲ್ಲಿ ಇತರ ಜಲಾನಯನ ರಾಜ್ಯಗಳ ಒಪ್ಪಿಗೆಯಿಲ್ಲದೇ ಹಾಗೂ ಕೇಂದ್ರ ಸರ್ಕಾರದ ಅನುಮೋದನೆಯಿಲ್ಲದೇ ಅಣೆಕಟ್ಟು ಅಥವಾ ಹೊಸ ನೀರು ಸಂಗ್ರಹ ಯೋಜನೆ ಕೈಗೊಳ್ಳಬಾರದು. ಈ ರೀತಿ ಕರ್ನಾಟಕ

ಪುಟ 2ಕ್ಕೆ





# ಜಿಟಿಡಿ ವಿರುದ್ಧ ಕಠಿಣ ಕ್ರಮ

## ಅಡ್ಡ ಮತದಾನ ಮಾಡಿದವರ ವಿವರ ಗೊತ್ತಿದೆ: ಎಚ್.ಡಿ.ಕುಮಾರಸ್ವಾಮಿ

**ಮೈಸೂರು:** ಈ ಬಾರಿ ಶಾಸಕ ಜಿ.ಟಿ.ದೇವೇಗೌಡ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ನಿರ್ಧಾರಕ್ಕೆ ಬಂದಿದ್ದೇನೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ವಿಚಾರದಲ್ಲಿ ಜಿಟಿಡಿ ವಿರುದ್ಧ ಕಿಡಿಕಾರಿದರು. ಜಿ.ಟಿ. ದೇವೇಗೌಡರು ಯಾವ್ಯಾವಾಗ ಯಾವ್ಯಾವ ರೀತಿ ಆಟ ಕಟ್ಟಿದ್ದಾರೆ ಎಂಬುದು ನನಗೆ ಗೊತ್ತಿದೆ. ಅವರ ಎಲ್ಲಾ ಪೂರ್ವಾಪರ ಗೊತ್ತಿದ್ದೇ ಈ ಬಾರಿ ಕಠಿಣ ನಿರ್ಧಾರಕ್ಕೆ ಬಂದಿದ್ದೇನೆ. ಅವರ ಬಗ್ಗೆ ನನ್ನ ಬಳಿ ಚರ್ಚೆ ಮಾಡಲೇಬೇಡಿ ಎಂದು ಹೇಳಿದರು.

ಸುದ್ದಿಗಾರರು ಶಾಸಕ ಜಿ.ಟಿ.ದೇವೇಗೌಡರ ವಿಚಾರ ಪ್ರಸ್ತಾಪಿಸುತ್ತಿದ್ದಂತೆಯೇ ಅಸಮಾಧಾನ ವ್ಯಕ್ತಪಡಿಸಿದ ಕುಮಾರಸ್ವಾಮಿ, ಆ ವ್ಯಕ್ತಿಯ ಹೆಸರನ್ನು ನನ್ನ ಮುಂದೆ ಪ್ರಸ್ತಾಪಿಸಬೇಡಿ. ಅದೆಲ್ಲಾ ಮುಗಿದು ಹೋದ ಕಥೆ. ಅವರು ಒಂದು ಕಾಲಲ್ಲ, ಎರಡು ಕಾಲುಗಳನ್ನೂ ಹೊರಗಡೆ ಇಟ್ಟಿದ್ದಾರೆ. ಅವರ ಬಗ್ಗೆ ನಾನು ಈ ಹಿಂದೆ ಏನು ಹೇಳಿದ್ದೇನೆಯೋ ಅದೇ ಅಂತಿಮ. ಅವರ ವಿಚಾರದಲ್ಲಿ ನನ್ನ ನಿಲುವು ಬಹಳ ಸ್ಪಷ್ಟವಾಗಿದೆ ಎಂದು ಹೇಳಿದರು.

ದೊಡ್ಡಗೌಡರು (ಎಚ್.ಡಿ.ದೇವೇಗೌಡ) ಹೇಳಿದರೂ ಪಕ್ಷದ ಹಿತದೃಷ್ಟಿಯಿಂದ ನನ್ನ ನಿಲುವನ್ನು ಈ ಬಾರಿ ಬದಲಾಯಿಸುವುದಿಲ್ಲ. ಮುಂಬರುವ ಚುನಾವಣೆಯಲ್ಲಿ ಟಿಕೆಟ್ ವಿಚಾರದಲ್ಲಿ ಅಂತಿಮ ನಿರ್ಣಯ ಮಾಡುವುದು ನಾನೇ. ಇದರ ಬಗ್ಗೆ ಯಾವ ಗೊಂದಲವೂ ಬೇಡ ಎಂದು ಜಿಟಿಡಿಗೆ ಟಿಕೆಟ್ ನೀಡದಿರುವ ಬಗ್ಗೆ ಸ್ಪಷ್ಟಪಡಿಸಿದರು.

ದೊಡ್ಡಗೌಡರಿಗೆ ಜಿಟಿಡಿ ಮೇಲೆ ಪ್ರೀತಿ, ವ್ಯಾಮೋಹ ಇರುವುದು ಸತ್ಯ. ಆ ವ್ಯಾಮೋಹವನ್ನೇ ಜಿಟಿಡಿ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಮುಂದೆ ಇದಕ್ಕೆ ನಾನು ಅವಕಾಶ ಕೊಡುವುದಿಲ್ಲ ಎಂದರು.

ನಮ್ಮ ಶಾಸಕರ ನಿಷ್ಠೆ ಪರೀಕ್ಷೆಗಾಗಿಯೇ ನಾನು ವಿಧಾನ ಪರಿಷತ್ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೆ ಎಂದು ಕೇಂದ್ರ ಸಚಿವ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಕ್ಷದಲ್ಲಿರುವ ಹಿತಶತ್ರುಗಳು ಯಾರು ಎಂಬುದನ್ನು ನಾನು ಪತ್ತೆ ಮಾಡಬೇಕಿತ್ತು. ನನಗೆ ಈಗ ಎಲ್ಲದಕ್ಕೂ ಉತ್ತರ ಸಿಕ್ಕಿದೆ. ಯಾರನ್ನು ಅತಿಯಾಗಿ ನಂಬಬಾರದು ಎಂಬ ಪಾಠವನ್ನು ಈ ಫಲಿತಾಂಶ ನನಗೆ ಕಲಿಸಿದೆ ಎಂದು ತಿಳಿಸಿದರು.

ಅಡ್ಡ ಮತದಾನ ನನಗೆ ಆಘಾತ ತಂದಿಲ್ಲ. ಇದರ ನಿರೀಕ್ಷೆ ನನಗೆ ಇತ್ತು. ಯಾರು ಅಡ್ಡ ಮತದಾನ ಮಾಡಿದ್ದಾರೆ ಎಂಬ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಯಾವ ಕಾರಣಕ್ಕೆ ಅವರು ಅಡ್ಡ ಮತದಾನ ಮಾಡಿದ್ದಾರೆ ಎಂಬುದೂ ನನಗೆ ಗೊತ್ತಿದೆ. ಪಕ್ಷ ಬಿಡುವ ಚರ್ಚೆಯ ಹಂತದವರೆಗೂ ಅವರೆಲ್ಲರೂ ಚರ್ಚೆ ನಡೆಸಿಯೇ ಅಡ್ಡ ಮತದಾನ ಮಾಡಿದ್ದಾರೆ ಎಂದು ಹೇಳಿದರು.

ಪುಟ 2ಕ್ಕೆ



### ಬಿಡದಿ ಟೌನ್‌ಶಿಪ್ ವಿರುದ್ಧ ಹೋರಾಟ ನಿಲ್ಲಲ್ಲ: ಎಚ್‌ಡಿಕೆ




**ಮೈಸೂರು:** ಬಿಡದಿ ಟೌನ್‌ಶಿಪ್ ವಿರೋಧಿಸಿ ನನ್ನ ಹೋರಾಟ ನಿರಂತರವಾಗಿರುತ್ತದೆ. ಕಾನೂನಾತ್ಮಕ ಹೋರಾಟವನ್ನೂ ಮಾಡುತ್ತೇನೆ. ರೈತರ ಜೊತೆಯೂ ಇರುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ನಗರದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ನನ್ನ ಅವಧಿಯಲ್ಲಿ ಬಿಡದಿ ಟೌನ್‌ಶಿಪ್ ಸೇರಿದಂತೆ ಐದು ಟೌನ್‌ಶಿಪ್ ನಿರ್ಮಾಣಕ್ಕೆ ನಿರ್ಧಾರ ಮಾಡಿದ್ದು ಸತ್ಯ. ಆ ವೇಳೆ ಅದರ ಬಗ್ಗೆ ಚರ್ಚೆಗಾಗಿ ಸ್ಥಳೀಯ ರೈತರನ್ನು ಕರೆಸಿಕೊಂಡಿದ್ದೆ. ರೈತರ ವಿರೋಧ ತಿಳಿದ ಮೇಲೆ ನಾನು ಆ ಪ್ರಸ್ತಾಪ ಕೈಬಿಟ್ಟಿದ್ದೆ. ಈಗ ಅದು ನನ್ನ ಕೂಸು ಎಂದು ಪ್ರಚಾರ ಮಾಡುತ್ತಿದ್ದಾರೆ. ಇದರಿಂದ ನನಗೆ ಬೇಸರವೇನೂ ಇಲ್ಲ ಎಂದರು. ನೈಸ್ ರಸ್ತೆ ನಿರ್ಮಾಣ ಯೋಜನೆಯನ್ನು ಎಚ್.ಡಿ.ದೇವೇಗೌಡರ ಕೂಸು ಎಂದರು. ಆದರೆ, ಲಾಭ ಮಾಡಿಕೊಂಡವರು ಯಾರೋ. ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ನನ್ನ ಬಗ್ಗೆ ಯಾರು ಏನೇ ಹೇಳಿದರೂ ರೈತರ ಭೂಮಿ ಲೂಟಿ ಮಾಡಲು ನಾನು ಬಿಡುವುದಿಲ್ಲ. ಮುಂದಿನ ಸದನದಲ್ಲಿ ಎಲ್ಲ ದಾಖಲೆ ಬಿಡುಗಡೆ ಮಾಡು ತ್ತೇನೆ ಎಂದರು. ನಾನು ರಾಷ್ಟ್ರ ರಾಜಕಾರಣ ಇರುವುದು ತಾತ್ಕಾಲಿಕ. ನನಗೆ ರಾಜ್ಯವೇ ಶಾಶ್ವತ. ರಾಜ್ಯ ರಾಜಕಾರಣಕ್ಕೆ ಬರಬೇಕಾಗಿಲ್ಲ ಎಂದು ಹೇಳಿದರು.

### ಮನೆ ಹಣ ತಂದು ರಾಜಕೀಯ ಮಾಡಲು ಸಾಧ್ಯವೇ?: ಎಚ್‌ಡಿಕೆ

**ಮೈಸೂರು:** ಚುನಾವಣೆ ಸಂದರ್ಭದಲ್ಲಿ ಮನೆಯಿಂದ ಹಣ ತಂದು ರಾಜಕೀಯ ಮಾಡಲು ಸಾಧ್ಯವೇ? ಆಲೂಗೆಡ್ಡೆ ಬೆಳೆದ ದುಡ್ಡಲ್ಲಿ ಪಕ್ಷವನ್ನು ನಡೆಸಲಿಕ್ಕಾಗುತ್ತದೆಯೇ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದುವರೆಗೆ ನಮ್ಮೊಂದಿಗೇ ಇದ್ದು, ಈಗ ಕಾಂಗ್ರೆಸ್‌ನಲ್ಲಿರುವವರು ನನ್ನ ಬಂಡವಾಳವನ್ನೆಲ್ಲಾ ಬಿಚ್ಚಿಡುತ್ತೇನೆ ಎಂದು ಹೇಳಿದ್ದಾರೆ. ಬಿಚ್ಚಿಡಲಿ ನೋಡೋಣ ಎಂದು ಸವಾಲು ಹಾಕಿದರು.

ರಾಜ್ಯದಲ್ಲಿ ಲಾಟರಿ ನಿಷೇಧಿಸದಂತೆ ಕೋಟ್ಯಂತರ ರೂಪಾಯಿ ಸುರಿಯಲು ಬಂದಿದ್ದರು. ಪಾಪದ ಹಣದಿಂದ ರಾಜಕೀಯ ಮಾಡುವುದಿಲ್ಲ ಎಂದು ಅಧಿಕಾರಿಗೆ ಬೈದು ಕಳಿಸಿದ್ದೆ. ಆದರೆ, ವಿಧಾನಪರಿಷತ್, ರಾಜ್ಯಸಭಾ ಚುನಾವಣೆಗಳ ಸಂದರ್ಭದಲ್ಲಿ ಟಿಕೆಟ್ ಕೊಡುವಾಗ ಪಕ್ಷಕ್ಕೆ

ಪುಟ 2ಕ್ಕೆ



## ದಲಿತರು ಏಕೆ ಪ್ರಶ್ನಿಸಬಾರದು?: ಜಿಗಜಿಣಗಿ ವಿರುದ್ಧ ಪ್ರಿಯಾಂಕ್ ಕಿಡಿ

**ಬೆಂಗಳೂರು:** ದಲಿತರು ಯಾಕೆ ಆರ್‌ಎಸ್‌ಎಸ್ ಬಗ್ಗೆ ಪ್ರಶ್ನೆ ಮಾಡಬಾರದು? ದಲಿತರು ಈ ಸಮಾ ಜದ, ಸಂವಿಧಾನದ ಭಾಗವಲ್ಲವೇ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ ಬಿಜೆಪಿ ಸಂಸದ ರಮೇಶ್ ಜಿಗಜಿ ಣಗಿ ಹೇಳಿಕೆಗೆ ಆಕ್ರೋಶದಿಂದ ಪ್ರತಿಕ್ರಿಯಿಸಿದರು. ನಾನು ಯಾವುದನ್ನು ಪ್ರಶ್ನೆ ಮಾಡಬೇಕು, ಪ್ರಶ್ನೆ ಮಾಡಬಾರದು ಎಂದು ಹೇಳುವುದಕ್ಕೆ ಅವರು ಯಾರು? ನನಗೆ ವೈಯಕ್ತಿಕ ಅಧಿಕಾರವಿದೆ. ಗೃಹ ಸಚಿವರಾಗಿ ನಾನು ಏನು ಕೇಳುತ್ತಿದ್ದೇನೆ ಎಂಬುದು



ನನಗೆ ಸ್ಪಷ್ಟವಾಗಿದೆ ಎಂದು ಕಿಡಿಕಾರಿದರು. ಬಿಜೆಪಿಯಲ್ಲಿ ದಲಿತರು ಆರ್‌ಎಸ್‌ಎಸ್‌ಗೆ ಗುಲಾಮರಾಗಿದ್ದಾರೆ. ಇಷ್ಟು ದೊಡ್ಡ ಸಂಘಟನೆ ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದ ಮೇಲೆ ಅದರ ಕಾರ್ಯಚಟುವಿಕೆಗಳ ಬಗ್ಗೆ ಸರ್ಕಾ ರಕ್ಕೆ ವಿವರ ನೀಡಬೇಕಾದ್ದು ಅಗತ್ಯ. ನಾನು ಯಾರಿಗೂ ಕ್ಯಾರೇ ಮಾಡಲ್ಲ. ನಾನು ದಲಿತನಾಗಲಿ, ಏನೇ ಆಗಲಿ ಮೋಹನ್ ಭಾಗವತ್ ಅವರಷ್ಟೇ ಅಧಿಕಾರ ಹೊಂದಿದ್ದೇನೆ ಎಂದರು. ಗೃಹ ಸಚಿವನಾಗಿ ಮೋಹನ್ ಭಾಗವತ್ ಅವರನ್ನು ಪ್ರಶ್ನೆ ಮಾಡಿದ್ದೇನೆ. ಅವರು ನನಗೆ ಉತ್ತರ ಕೊಡಲಿ. ಬೇರೆಯವರು ಏಕೆ ಮಾತನಾಡಬೇಕು. ಅದು ಬಿಟ್ಟು ಸೋಷಿಯಲ್ ಮೀಡಿಯಾದಲ್ಲಿ ಹೇಳುವುದು ಏಕೆ? ಅಧಿಕೃತವಾಗಿ ಲೆಟರ್ ಹೆಡ್‌ನಲ್ಲಿ ಉತ್ತರ ಕೊಡಲಿ ಎಂದರು.

## ಬೆನ್ನಿಗೆ ಇರಿದವರ ವಿರುದ್ಧ ಕಠಿಣ ಕ್ರಮ: ವಿಜಯೇಂದ್ರ

**ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನದ ಮೂಲಕ ಪಕ್ಷಕ್ಕೆ ಹಾಗೂ ಮೈತ್ರಿಗೆ ದ್ರೋಹ ಬಗೆದವರನ್ನು ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ. ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ನಿಶ್ಚಿತ ಎಂದು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು. ಜೆಡಿಎಸ್‌ನಿಂದ ಆರೇಳು ಜನ ಹಾಗೂ ಬಿಜೆಪಿಯಿಂದ ನಾಲ್ಕೈದು ಜನ ಅಡ್ಡ ಮತದಾನ ಮಾಡಿದ್ದಾರೆ. ಈ ಘಟನೆ ನಿಜಕ್ಕೂ ಆಗಬಾರದಿತ್ತು.



ಯರ್ಯಾರು ಬೆನ್ನಿಗೆ ಇರಿದು ಆಟ ಆಡಿದ್ದಾರೆ ಎನ್ನುವ ಸಂಪೂರ್ಣ ಮಾಹಿತಿ ನಮ್ಮ ಬಳಿ ಇದೆ. ಇವತ್ತು ಅಥವಾ ನಾಳೆಯೊಳಗೆ ಇದರ ಸಂಪೂರ್ಣ ಚಿತ್ರಣ ನಮಗೆ ಸಿಗಲಿದೆ. ಇದನ್ನು ಗೌಪ್ಯವಾಗಿ ಇಡುವುದಿಲ್ಲ. ಶೀಘ್ರದಲ್ಲೇ ಹೈಕಮಾಂಡ್ ನಾಯಕರಿಗೆ ಈ ಪಟ್ಟಿಯನ್ನು ಸಲ್ಲಿದಸಲಾಗುವುದು. ಮುಂದಿನ ಕ್ರಮಕ್ಕೆ ಶಿಫಾರಸು ಮಾಡುತ್ತೇನೆ ಎಂದು ತಿಳಿಸಿದರು. ಮೈತ್ರಿ ಪಕ್ಷದ ಅಭ್ಯರ್ಥಿಯ ಸೋಲಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ ನೀಡಿರುವ ಅವರು, ಇದು ಹೆತ್ತ ತಾಯಿಗೆ ಮಾಡಿದ ಮೋಸ. ಪಕ್ಷದ ಚಿಹ್ನೆಯಿಂದ ಗೆದ್ದು ಬಂದು ಪಕ್ಷಕ್ಕೆ ದ್ರೋಹ ಬಗೆದವರ ವಿರುದ್ಧ ವಾಗ್ದಾಳಿ ನಡೆಸಿದರು. ಬಿಜೆಪಿ ಚಿಹ್ನೆ ಯಡಿ ಗೆದ್ದವರು ಪಕ್ಷಕ್ಕೆ ಹೀಗೆ ಅನ್ಯಾಯ ಮಾಡುವುದನ್ನು ಕ್ಷಮಿಸಲು ಸಾಧ್ಯವೇ ಇಲ್ಲ. ಇಂತಹವರನ್ನು ಕ್ಷಮಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಗುಡುಗಿದರು.

## ತ.ನಾಡು ನಿರ್ಣಯ

**ಮೊದಲ ಪುಟದಿಂದ**

ಸರ್ಕಾರ ಸಲಹೆ ನೀಡುವಂತೆ ಸದನ ಒತ್ತಾಯಿಸುತ್ತದೆ ಎಂದು ನಿರ್ಣಯದಲ್ಲಿ ತಿಳಿಸಿದೆ. ತಮಿಳುನಾಡು ಸರ್ಕಾರ ಕೇಂದ್ರ ಜಲ ಆಯೋಗಕ್ಕೆ ಮಧ್ಯಪ್ರವೇಶಿಸುವಂತೆ ಮನವಿ ಮಾಡಿದೆ. ರಾಜ್ಯದ ರೈತರ ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಸಲ್ಲಿಸಿರುವ ವಿವರವಾದ ಯೋಜನಾ ವರದಿಯನ್ನು ಪರಿಶೀಲಿಸಬಾರದು, ಪ್ರಕ್ರಿಯೆಗೊಳಿಸಬಾರದು ಹಾಗೂ ಅನುಮೋದಿಸಬಾರದು ಎಂದು ಆಗ್ರಹಿಸಿದೆ. ಮುಖ್ಯಮಂತ್ರಿ ವಿಜಯ್ ಮಂಡಿಸಿದ ನಿರ್ಣಯವನ್ನು ತಮಿಳುನಾಡು ವಿಧಾನಸಭೆಯ ಎಲ್ಲಾ ಪಕ್ಷಗಳ ಸದಸ್ಯರು ಸರ್ವಾನುಮತದಿಂದ ಅಂಗೀಕರಿಸಿದರು.


**ಕಾವೇರಿ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾನೀನಿನಿ.,
ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ

**ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ 02/2026-27 ದಿನಾಂಕ 17.06.2026**

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಹಾಸನ ಜಿಲ್ಲೆ, ಇವರಿಂದ ಇಂಜಿನಿಯರ್, ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ ಹಾಸನ ಜಿಲ್ಲೆ ಇವರಿಂದ ನೊಂದಾಯಿತವಾಗಿರುವ ನಿಗಧಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಒಟ್ಟು 07 ಸಂಖ್ಯೆಯ ಕಾಮಗಾರಿಗೆ ಟೆಂಡರ್ ಅನ್ನ ಕೆ ಪಿ ಪಿ ಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಯ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ. 5.64 ಲಕ್ಷ ಮತ್ತು ಗರಿಷ್ಠ ರೂ 13.20 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ ಕೆ ಪಿ ಪಿ ಪೋರ್ಟಲ್‌ನಂತೆ ಇರುತ್ತದೆ. ಕೆ ಪಿ ಪಿ ಪಿ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ 17.06.2026 ರಂದು ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕ 24.06.2026 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು https://kppp.karnataka.gov.in/ ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಅನ್ನು ದಿನಾಂಕ 29.06.2026 ರಂದು ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ,
ಹೇ.ಬ.ನಾ ವಿಭಾಗ, ಹೊಳೆನರಸೀಪುರ

ವಾಸಾಸಂಇ/ಹಿಸನಿ/ಹಾಸನ/255/ಕೆಎಸ್‌ಎಂಸಿಎ/2026-27


## ಕೇಂದ್ರ ಸಚಿವರ ರಾಜೀನಾಮೆಗೆ ಆಗ್ರಹ




ಮೈಸೂರು: ನೀಟ್ ರದ್ದು ಪಡಿಸಿ, ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಿ ಎಂಬುದು ಸೇರಿ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಎಐಡಿಎಸ್‌ಓ ಜಿಲ್ಲಾ ಸಮಿತಿ ನಗರದಲ್ಲಿ ಪ್ರತಿಭಟಿಸಿತು.

ನಗರದ ರಾಮಸ್ವಾಮಿ ವೃತ್ತದಲ್ಲಿ ನೀಟ್ ರದ್ದಿಗೆ ಆಗ್ರಹಿಸಿ ನಾಮಫಲಕಗಳನ್ನು ಹಿಡಿದು ನಾನಾ ಘೋಷಣೆ ಕೂಗಿದ ವಿದ್ಯಾರ್ಥಿಗಳು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು. ಪ್ರತಿಭಟನೆಯನ್ನು ಉದ್ದೇಶಿಸಿ ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದ ಕೊಪ್ಪ ಮಾತನಾಡಿ ನೀಟ್ 2026 ಒಂದು ಆಕಸ್ಮಿಕ ಅವಘಡವಲ್ಲ. ಇದು ಓಖಿಂ ಆಡಳಿತದ ಅಡಿಯಲ್ಲಿ ಜರುಗುತ್ತಿರುವ ವೈಫಲ್ಯಗಳ ಕಿರೀಟಕ್ಕೆ ಮತ್ತೊಂದು ಗರಿ. 2022, 2024 ರಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಬಯಲಿಗೆ ಬಂದಿತ್ತು. 2024 ರಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದಲ್ಲಿ ಬಿಹಾರದ ಕೆಲವರನ್ನು ಬಂಧಿಸಿದರೂ ಸೋರಿಕೆ ಮೂಲವನ್ನು ಹಿಡಿಯಲು ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾದುದಕ್ಕೆ ಈ ವರ್ಷದ ಸೋರಿಕೆಯೇ ಪುರಾವೆ ಎಂದರು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಈ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಮೈಸೂರು ಜಿಲ್ಲಾಧ್ಯಕ್ಷೆ ಚಂದ್ರಕಲಾ ಮಾತನಾಡಿದರು. ಎಐಡಿಎಸ್‌ಓ ಜಿಲ್ಲಾ ಸಮಿತಿಯ ಉಪಾಧ್ಯಕ್ಷೆ ಸ್ವಾತಿ, ಜಿಲ್ಲಾ ಕಾರ್ಯದರ್ಶಿ ನಿತಿನ್, ಪದಾಧಿಕಾರಿಗಳಾದ ಚಂದನ ,ಚಂದ್ರಿಕಾ, ಹೇಮಾ, ದಿಶಾ, ಅಂಜಲಿ, ನಂದೀಶ್, ದೀಕ್ಷಿತ ಇತರರು ಹಾಜರಿದ್ದರು.

## ಕೃತಕ ಬುದ್ಧಿಮತ್ತೆ ಕ್ರಾಂತಿಕಾರಿ ಶಕ್ತಿ

ಮೈಸೂರು: ಇಂದಿನ ಡಿಜಿಟಲ್ ಯುಗದಲ್ಲಿ ಕೃತಕ ಬುದ್ಧಿಮತ್ತೆ ಕೇವಲ ತಂತ್ರಜ್ಞಾನವಲ್ಲ, ಅದು ಮಾನವ ಜೀವನದ ಪ್ರತಿಯೊಂದು ಕ್ಷೇತ್ರವನ್ನು ರೂಪಾಂತರಗೊಳಿಸುತ್ತಿರುವ ಕ್ರಾಂತಿಕಾರಿ ಶಕ್ತಿ ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್. ಕೆ.ಲೋಕನಾಥ್ ಹೇಳಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತುವತಿಯಿಂದ ಮಾನಸ ಗಂಗೋತ್ರಿಯ ಸ್ಕೂಲ್ ಆಫ್ ಎಂಜಿನಿಯರಿಂಗ್ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿಜ್ಞಾನ-ತಂತ್ರಜ್ಞಾನ ಕನ್ನಡೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಮಾನವನ ಬುದ್ಧಿಶಕ್ತಿಯನ್ನು ಕಂಪ್ಯೂಟರ್‌ಗಳು ಮತ್ತು ಯಂತ್ರಗಳಲ್ಲಿ ಅನ್ವಯಿಸುವ ವಿಜ್ಞಾನ ಎಐ ಎಂದರು. ಎಐಯನ್ನು ಸರಿಯಾದ ರೀತಿಯಲ್ಲಿ ಬಳಸುವುದು ನಮ್ಮ ಜವಾಬ್ದಾರಿ, ಸರ್ಕಾರ ಕೂಡ ಕಾನೂನು ರೂಪಿಸಬೇಕು. ಸಂಶೋಧಕರು ನೈತಿಕ ಮಾರ್ಗಗಳನ್ನು ಅನುಸರಿಸಬೇಕು ಮತ್ತು ಜನರು ಕೂಡ ಜಾಗೃತರಾಗಬೇಕು. ಕೃತಕ ಬುದ್ಧಿಮತ್ತೆ ಮಾನವನ ಶತ್ರುವಲ್ಲ, ಸಹಾಯಕ. ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡಲ್ಲಿ ಸಮಾಜದ ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಬಹುದು. ಆದರೆ ಇದರಿಂದ ಉದ್ಯೋಗ ಹಾನಿ, ಡೇಟಾ ಗೌಪ್ಯತೆ ಕೆಲವೊಂದು ಸವಾಲುಗಳು ಕೂಡ ಇವೆ ಎಂದು ವಿಶ್ಲೇಷಿಸಿದರು.

ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ಕಾರ್ಯಕ್ರಮ ಉದ್ಘಾಟಿಸಿ, ಕೃತಕ ಬುದ್ಧಿಮತ್ತೆ-ಇತ್ತೀಚಿನ ಬೆಳವಣಿಗೆಗಳು ಕುರಿತು ವಿಚಾರ ಮಂಡಿಸಿದರು.. ಮೈಸೂರು ವಿವಿ ಸ್ಕೂಲ್ ಆಫ್ ಎಂಜಿನಿಯರಿಂಗ್ ನಿರ್ದೇಶಕ ಡಾ. ಎಂ.ಎಸ್. ಗೋವಿಂದೇಗೌಡ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮುಖ್ಯಅತಿಥಿಗಳಾಗಿದ್ದರು. ಹಿರಿಯ



ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು. ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ಪ್ರಾಸ್ತಾವಿಕ ಭಾಷಣ ಮಾಡಿದರು. ಜಿಲ್ಲಾ ಕಸಾಪ ಉಪಾಧ್ಯಕ್ಷರೂ ಆದ ಮೈಸೂರು ಕೇಂದ್ರ ಕಾರಾಗೃಹ ಮತ್ತು ಸುಧಾರಣೆ ಸೇವೆಯ ಸದಸ್ಯ ಜಾಕೀರ್ ಹುಸೇನ್ ಸ್ವಾಗತಿಸಿದರು.

ಮೈಸೂರು ತಾ. ಕಸಾಪ ಅಧ್ಯಕ್ಷ ಎ.ಸಿ.ಮಂಜುನಾಥ್, ಜಿಲ್ಲಾ ಉಪಾಧ್ಯಕ್ಷ ಡೈರಿ ವೆಂಕಟೇಶ್ ಇದ್ದರು. ಕಮಲಾ ಕಾರ್ಯಕ್ರಮ ನಿರೂಪಿಸಿದರು. ಸ್ಕೂಲ್ ಆಫ್ ಎಂಜಿನಿಯರಿಂಗ್ ವಿದ್ಯಾರ್ಥಿನಿಯರು ನಾಡಗೀತೆ ಹಾಡಿದರು.

ಪ್ರಶಸ್ತಿ ಪುರಸ್ಕೃತರು: ಇದೇ ಸಂದರ್ಭದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮೈಸೂರು ವಿವಿ ಸ್ಕೂಲ್ ಆಫ್ ಎಂಜಿನಿಯರಿಂಗ್ ನಿರ್ದೇಶಕ ಡಾ.ಎಂ.ಎಸ್. ಗೋವಿಂದೇಗೌಡ, ಡೈರಿ ವೆಂಕಟೇಶ್, ರಿಷಿ ವಿಶ್ವಕರ್ಮ, ಪ್ರೇಮ ಮಾದಪ್ಪ, ರದೀಉಲ್ಲಾ ಖಾನ್, ನಾಜಿಯಾ ಸುಲ್ತಾನ, ಎನ್. ಲೋಹಿತ್, ಎಚ್.ಕೆ. ಸುಶೀಲಾ, ಸ್ನೇಹಾ, ಗಾಯತ್ರಿ ಯಲ್ಲಪ್ಪಗೌಡ, ಎಂ. ಚಂದ್ರಪ್ಪ, ಕೆ.ಎಂ.ಕಾವ್ಯಾ, ಗಿರಿಜಾ ನಿರ್ವಾಣಿ, ಪ್ರಭಾ, ಎಚ್. ಗಿರೀಶ್, ಶೋಭಾ ನಾಗಶಯನ, ಎಸ್.ನಂದಿನಿ, ಎಂ.ಎ.ಸವಿತಾ, ನಂದಕುಮಾರ್, ಎ.ಜಿ.ದೇವರಾಜ ಗೆ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

# ಭೂಸ್ವಾಧೀನಕ್ಕೆ ಹೆಚ್ಚುವರಿ 5 ಲಕ್ಷ

## ಬಿಡದಿ ಸಮಗ್ರ ನಗರ ಯೋಜನೆ। ಭೂಮಾಲೀಕರಿಗೆ ಗರಿಷ್ಠ ಲಾಭ: ಬಾಲಕೃಷ್ಣ

ರಾಮನಗರ: ಬಿಡದಿ ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಭೂಸ್ವಾಧೀನಕ್ಕೆ ನಿಗಧಿಯಾಗಿರುವ ದರಗಳ ಜೊತೆಗೆ ಭೂಮಿಯ ಅಳತೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಎಲ್ಲ ಮಾಲೀಕರಿಗೂ ಇಡಿಗಂಟು ಮೊತ್ತ 5 ಲಕ್ಷ ರು ಹೆಚ್ಚುವರಿಯಾಗಿ ನೀಡಲು ನಿರ್ಧರಿಸಲಾಗಿದೆ ಎಂದು ಮಾಗಡಿ ಕ್ಷೇತ್ರದ ಶಾಸಕ ಎಚ್.ಸಿ.ಬಾಲಕೃಷ್ಣ ತಿಳಿಸಿದರು.

ನಗರದಲ್ಲಿರುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಭೂಸ್ವಾಧೀನಕ್ಕೆ ಗುರುತಿಸಲಾಗಿರುವ ಭೂಮಿಯ ಮಾಲೀಕರಿಗೆ ಗರಿಷ್ಠ ರೀತಿಯಲ್ಲಿ ಅನುಕೂಲ ಮಾಡಿಕೊಡುವುದು ಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದ ಉದ್ದೇಶ, ಹೀಗಾಗಿ ಇಡಿಗಂಟು ನಿರ್ಧಾರಕ್ಕೆ ಬರಲಾಗಿದೆ ಎಂದರು. 1 ಗುಂಟೆ, 1 ಎಕರೆ ಹೀಗೆ ಎಷ್ಟೇ ಪ್ರಮಾಣದ ಭೂಮಿಯನ್ನು ಸ್ವಾಧೀನಕ್ಕೆ ಒಳಪಟ್ಟರೆ ಅಂತಹ ಮಾಲೀಕರಿಗೆ ಇಡಿಗಂಟು ಮೊತ್ತ 5 ಲಕ್ಷ ರೂ ಸಿಗಲಿದೆ ಎಂದರು. ಹೋರಾಟಗಳಿಗೆ ಹೆದರಿ ಇಡಿಗಂಟು ಮೊತ್ತವನ್ನು ನಿರ್ಧರಿಸಿಲ್ಲ, ಕಾನೂನು ಪ್ರಕಾರವೇ ನಿರ್ಧರಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

### ಒಪ್ಪಿಗೆ ಪತ್ರಕ್ಕೆ ಸಹಿ ಹಾಕಿದ ವಾರದಲ್ಲೇ ಪರಿಹಾರದ ಮೊತ್ತ

ಜಿಬಿಡಿಎ ಬಳಿ ದುಡ್ಡೇ ಇಲ್ಲ ಎಂದು ಟೀಕೆಗಳು ಕೇಳಿ ಬಂದಿವೆ ಎಂದು ಮಾಧ್ಯಮ ಪ್ರತಿನಿಧಿಗಳು ಗಮನ ಸೆಳೆದಾಗ ಪ್ರತಿಕ್ರಿಯಿಸಿದ ಅವರು, ಭೂಸ್ವಾಧೀನಕ್ಕೆ ಒಪ್ಪಿಗೆ ಪತ್ರ ಕೊಟ್ಟ ಒಂದು ವಾರದಲ್ಲೇ




ಅಂತಹ ಭೂಮಾಲೀಕರ ಬ್ಯಾಂಕ್ ಖಾತೆಗೆ ಪರಿಹಾರದ ಮೊತ್ತವನ್ನು ಆರ್.ಟಿ.ಜಿ.ಎಸ್ ಮೂಲಕ ರವಾನಿಸುತ್ತೇವೆ. ಇಂದು ಸಾಂಕೇತಿಕವಾಗಿ 7 ಮಂದಿಗೆ ಚೆಕ್ ವಿತರಣೆಯಾಗುತ್ತದೆ. ಯೋಜನೆಗೆ ಬೇಕಾಗಿರುವ 20 ಸಾವಿರ ಕೋಟಿ ರೂ ಸಿದ್ಧವಿದೆ. ಅಗತ್ಯ ದುಡ್ಡು ಇಲ್ಲದಿದ್ದರೆ, ಯೋಜನೆ ರೂಪಿಸಲು ಸಾಧ್ಯವೇ ಎಂದರು.

### ಶೇರಿಂಗ್‌ಗೆ ಸಮ್ಮತಿಸಲು ಮನವಿ

ಭೂಮಾಲೀಕರು ತಮ್ಮ ಭವಿಷ್ಯದ ದೃಷ್ಟಿಯಿಂದ ಭೂಸ್ವಾಧೀನದ ವಿಚಾರದಲ್ಲಿ ಶೇರಿಂಗ್ ಆಧಾರದಲ್ಲಿ ಒಪ್ಪಿಗೆ ಸೂಚಿಸಲು ಶಾಸಕ ಬಾಲಕೃಷ್ಣ ಭೂಮಾಲೀಕರಿಗೆ ಮನವಿ ಮಾಡಿದರು. ಸಮಗ್ರ ನಗರ ಯೋಜನೆಗೆ ನೈಸ್ ರಸ್ತೆ, ಬೆಂಗಳೂರು – ಮೈಸೂರು ಹೆದ್ದಾರಿ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಿಗೆ ಸಂಪರ್ಕ ಕಲ್ಪಿಸಲಾಗುವುದು. ಇಡೀ ವಿಶ್ವವೇ ಗಮನಿಸುವಂತಹ ನಗರ ಇಲ್ಲಿ ಸೃಷ್ಟಿಯಾಗಲಿದೆ. ಹೀಗಾಗಿ ಭವಿಷ್ಯದ ದೃಷ್ಟಿಯಿಂದ ಶೇರಿಂಗ್ ಪದ್ಧತಿಗೆ ಒಪ್ಪಿಗೆ ಕೊಡಿ ಎಂದರು.

### ರೆಡ್ ಜೋನ್ ರದ್ದಾಗಿದ್ದರೆ, ಇಲ್ಲಿ ಭೂಮಿ ಸಿಗುತ್ತಿರಲಿಲ್ಲ

ಬಿಡದಿ ಹೋಬಳಿ ಬೈರಮಂಗಲ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ವ್ಯಾಪ್ತಿಯಲ್ಲಿ ಸಮಗ್ರ ನಗರ ನಿರ್ಮಿಸುವ ಯೋಜನೆ ಎಚ್.ಡಿ.ಕುಮಾರಸ್ವಾಮಿ ಯವರದ್ದು, ಹೀಗಾಗಿಯೇ ಇಲ್ಲಿರುವ ಭೂಮಿಯನ್ನು ರೆಡ್ ಜೋನ್‌ಗೆ ಪರಿವರ್ತಿಸಿದ್ದರು. ರೆಡ್ ಜೋನ್ ಪಿತಾಮಹ ಎಚ್.ಡಿ.ಕುಮಾರಸ್ವಾಮಿ ಎಂದು ಟೀಕಿಸಿದರು. ಎಚ್.ಡಿ.ಕುಮಾರಸ್ವಾಮಿ ಅವರು ಈ ಯೋಜನೆಯನ್ನು ಪೂರ್ಣಗೊಳಿಸಲಿಲ್ಲ. ರೆಡ್ ಜೋನ್ ಆದ್ದರಿಂದ ಈ ಭಾಗದ ಭೂಮಾಲೀಕರು ಭೂಮಿಯನ್ನು ಅಭಿವೃದ್ಧಿ ಪಡಿಸಲಾಗದೆ, ಭೂಮಿಯನ್ನು ಮಾರಲಾಗದೆ ತೊಂದರೆ ಅನುಭವಿಸುತ್ತಿದ್ದರು. ಕೆಲವರು ಮದುವೆ ಮುಂತಾದ ಕಾರ್ಯಗಳಿಗೆ ಎಂದು 30 ಲಕ್ಷ ದಿಂದ 70 ಲಕ್ಷದವರೆಗೆ ಹಣ ಪಡೆದು ಭೂಮಿಯನ್ನು ಪರಭಾರೆ ಮಾಡಿದ್ದರು. ದಶಕಗಳಿಂದ ತೊಳಲಾಡುತ್ತಿದ್ದ ಭೂಮಾಲೀಕರು ನಮ್ಮ ಬಳಿ ಮುಕ್ತಿ ಕೊಡಿಸಿ ಎಂದು ಮನವಿ ಮಾಡಿದ್ದರಿಂದಲೇ ಇಲ್ಲಿ ಸಮಗ್ರ ನಗರ ನಿರ್ಮಿಸಲು ಕ್ರಮ ತೆಗೆದುಕೊಂಡಿದ್ದೇವೆ. ರೆಡ್‌ಜೋನ್ ತೆರವಾಗಿದ್ದರೆ ಬಹುಶಃ ಈ ಹಿಂದೆಯೇ ಈ ಭೂಮಿಯೆಲ್ಲ ಬಡಾವಣೆಗಳಾಗಿ ಪರಿವರ್ತನೆಯಾಗುತ್ತಿದ್ದವು. ಈ ಯೋಜನೆಗೆ ಭೂಮಿಯೇ ಸಿಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು. ಪತ್ರಿಕಾಗೋಷ್ಠಿಯಲ್ಲಿ ಜಿಬಿಡಿಎ ಅಧ್ಯಕ್ಷ ಗಾಣಕಲ್ ನಟರಾಜ್ ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು. ಭೂಸ್ವಾಧೀನಕ್ಕೆ ಒಪ್ಪಿಗೆ ಸೂಚಿಸಿರುವ 7 ಮಂದಿ ಭೂಮಾಲೀಕರಿಗೆ ಪರಿಹಾರದ ಚೆಕ್‌ಗಳನ್ನು ಸಾಂಕೇತಿಕವಾಗಿ ವಿತರಿಸಿದರು. ಈ ಮೊತ್ತವನ್ನು ಆರ್.ಟಿ.ಜಿ.ಎಸ್. ಮೂಲಕ ಮಾಲೀಕರ ಬ್ಯಾಂಕ್ ಖಾತೆ ತಲುಪಲಿದೆ ಎಂದು ಜಿಬಿಡಿಎ ಅಧ್ಯಕ್ಷ ಗಾಣಕಲ್ ನಟರಾಜ್ ತಿಳಿಸಿದರು.

### ಆತ್ಮಸಾಕ್ಷಿಯ ಹೋರಾಟವೋ, ರಾಜಕೀಯ ಹೋರಾಟವೋ

**ಭೂಸ್ವಾಧೀನ ಪ್ರಕ್ರಿಯೆಯನ್ನು ವಿರೋಧಿಸಿ ಜೆಡಿಎಸ್ ಪ್ರತಿಭಟನೆ ನಡೆಸುತ್ತಿದೆ. ನಾನು ಜೆಡಿಎಸ್‌ನಲ್ಲಿ ಇದ್ದಾಗ ಕುಮಾರಸ್ವಾಮಿ ಅವರು ಇದು ತಮ್ಮ ಕನಸಿನ ಕೂಸು, ಯಾವುದೇ ಕಾರಣಕ್ಕೂ ಯೋಜನೆ ಬಿಡುವುದಿಲ್ಲ ಎಂದು ಹೇಳಿದ್ದರು. ಆದರೆ ಈಗ ಅವರು ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅವರದ್ದು ಆತ್ಮಸಾಕ್ಷಿಯ ಹೋರಾಟವೋ, ರಾಜಕೀಯ ಹೋರಾಟವೋ ಎಂದು ಪ್ರಶ್ನಿಸಿದರು.**

## ನಾಳೆ ಸಂಗೀತ ಸಂಜೆ ಕಾರ್ಯಕ್ರಮ

ಮೈಸೂರು: ಕುವೆಂಪುನಗರದ ಅರುಣರಾಗ ಕ್ರಿಯೇಷನ್ಸ್ ವತಿಯಿಂದ ಗಾಯಕ ದಿವಂಗತ ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯ ನೆನಪಿನಲ್ಲಿ ಜೂ. 21 ರಂದು ಸಂಜೆ 4.30ಕ್ಕೆ ಮೈಸೂರು ಬಿಲ್ಡರ್ ಅಸೋಸಿಯೇಷನ್ ಸಭಾಂಗಣದಲ್ಲಿ ಮರೆಯದ ನೆನಪು ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಿರುವುದಾಗಿ ಸಂಸ್ಥೆಯ ಗುರುರಾಜ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದು ಕರೋಕೆ ಗಾಯನವಾಗಿದೆ. ಖ್ಯಾತ ನಟಿ ಭವ್ಯ ಅವರು ಸಹಾ ಸಂಜೆ 6ಕ್ಕೆ ಹಾಜರಿರುವರು, ಈ ವೇಳೆ ಕನ್ನಡ, ತೆಲುಗು, ತಮಿಳು ಹಾಗೂ ಹಿಂದಿ ಚಿತ್ರಗೀತೆ ಹಾಡಲಾಗುವುದು. ಸಂಗೀತ ಕಲಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಆರು ಮಂದಿ ಕಲಾವಿದರಿಗೆ ಅರುಣ ರಾಗ ಕಲಾಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ನಾಗರಾಜ್ ವಿ. ಭೈರಿ, ಡಾ. ಮಲ್ಲಿಕಾರ್ಜುನ ಸ್ವಾಮಿ, ಅಯೂಬ್ ಖಾನ್. ಅಂಶಿ ಪ್ರಸನ್ನಕುಮಾರ್, ಶ್ರೀನಿವಾಸ್, ವಿಜಯ್‌ಕುಮಾರ್ ಹಾಗೂ ಇನ್ನಿತರರು ವೇದಿಕೆಯಲ್ಲಿರುವರೆಂದರು. ಡಾ. ರೇಖಾ ಅರುಣ್, ಮನಮೋಹನ್ ರಾಜ್ ಇದ್ದರು.



## ಚಂದ್ರು ಯೋಗಕ್ಷೇಮ ವಿಚಾರಿಸಿದ ಹೆಚ್.ಎನ್ ವಿಜಯ್



ಚಾಮರಾಜನಗರ : ತಾಲೂಕಿನ ಮಸಣಾಪುರದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಸಗಣಿ ಬಳಿದು ಹಲ್ಲೆಯಿಂದ ಗಾಯಗೊಂಡು ನಗರದ ಯಡಪುರ ಸಿಮ್ಸ್ ಆಸ್ಪತ್ರೆ ಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವ ಚಂದ್ರುನ್ನು ಮೂಡಾ ಮಾಜಿ ಅಧ್ಯಕ್ಷ ಹರದನಹಳ್ಳಿ ವಿಜಯ್ ಭೇಟಿ ಮಾಡಿ ಸಾಂತ್ವಾನ ಹೇಳಿದರು

ನಂತರ ಅವರ ತಾಯಿಯಿಂದ ಘಟನೆ ಕುರಿತು ಮಾಹಿತಿ ಪಡೆದು, ವೈಯುಕ್ತಿಕ ಧನ ಸಹಾಯ ಮಾಡಿದರು. ಈ ಸಂದರ್ಭದಲ್ಲಿ ಹೆಮ್ಮಾರಗಾಲ ಗಡಿ ಯಜಮಾನ ಸೋಮಣ್ಣ, ಮಂಡ್ಯ ನಾಗರತ್ನ, ಉನ್ನತಿ ಫೌಂಡೇಶನ್ ಕಾರ್ಯದರ್ಶಿ ನಂದಿನಿ ಉಪ್ಪಾರ್, ಗೋಳೂರು ಕಾಳಪ್ಪ, ಮಾಡ್ರಹಳ್ಳಿ ರಂಗಸ್ವಾಮಿ ಹಾಜರಿದ್ದರು.

**ಮೊದಲ ಪುಟದಿಂದ**

## ಜೆಟಿಡಿ ವಿರುದ್ಧ ಕಠಿಣ ಕ್ರಮ

ಹೊರ ಹೋಗುವವರೆಲ್ಲಾ ಹೋಗಲಿ. ನನಗೆ ಪಕ್ಷ ಕಟ್ಟುವುದು ಗೊತ್ತಿದೆ. ಯುವಕರನ್ನು ಕರೆತಂದು ಪಕ್ಷ ಕಟ್ಟುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ರಾಜಕೀಯ ಮಾಡಲು ಸಾಧ್ಯವೇ?

ದೇಣಿಗೆ ತೆಗೆದುಕೊಂಡಿದ್ದೇನೆ. ಅದನ್ನು ಪಕ್ಷ ನಡೆಸಲು ಬಳಸಿದ್ದೇನೆ. ಅದನ್ನೇನೂ ನನ್ನ ಸ್ವಂತಕ್ಕೆ ಬಳಸಿಕೊಂಡಿಲ್ಲ ಎಂದು ಸಮರ್ಥಿಸಿಕೊಂಡರು.

ಮುಖ್ಯಮಂತ್ರಿ ಆಗಿದ್ದಾಗ ಸಹಿ ಮಾರಾಟಕ್ಕೆ ಇಟ್ಟಿರಲಿಲ್ಲ. ಈಗಲೂ ಕೇಂದ್ರದಲ್ಲಿ ಸಚಿವನಾಗಿದ್ದೇನೆ. ಎರಡು ಇಲಾಖೆಗಳನ್ನು ವಿಶ್ವಾಸದಿಂದ ನಡೆಸಿಕೊಂಡು ಹೋಗುತ್ತಿದ್ದೇನೆ. ಅಲ್ಲೂ ನನ್ನ ಸಹಿಯನ್ನು ಮಾರಾಟಕ್ಕಿಟ್ಟಿಲ್ಲ. ನನ್ನ ವಿರುದ್ಧ ಆರೋಪಿಸುವವರಿಂದ ನಾನು ಪ್ರಮಾಣಪತ್ರ ಪಡೆದುಕೊಳ್ಳಬೇಕಿಲ್ಲ ಎಂದು ಹೇಳಿದರು.


ಜನರ ಭಾವನೆಗಳನ್ನು ಧಿಕ್ಕರಿಸಿ, ರಾಜ್ಯವನ್ನು ಹಾಳು ಮಾಡುವ ಕೆಲಸಗಳು ಈ ಸರ್ಕಾರದಲ್ಲಿ ನಡೆಯುತ್ತಿವೆ. ಹೀಗಾಗಿ, ರಾಜ್ಯವನ್ನು ಉಳಿಸಬೇಕಾಗಿದೆ. ನಾನು ಯಾರ ಮೇಲೂ ದ್ವೇಷದಿಂದ ನಡೆದುಕೊಳ್ಳುವುದಿಲ್ಲ ಎಂದು ಹೇಳಿದರು.

# ಆರ್‌ಟಿಸಿ ಗೊಂದಲ ಸರಿಪಡಿಸುವಲ್ಲಿ ಅಧಿಕಾರಿ, ಜನಪ್ರತಿನಿಧಿಗಳ ನಿರ್ಲಕ್ಷ್ಯ

ಎಚ್.ಡಿ.ಕೋಟೆ: ಹತ್ವಾಳು ಗ್ರಾಮದ ಸ.ನಂಬರ್ 24 ರಿಂದ 171ರವರೆಗೆ ಇರುವ 700 ಎಕರೆ ಜಮೀನನ್ನು ರೈತರು ಸಾಗುವಳಿ ಮಾಡುತ್ತಿದ್ದಾರೆ. ಆದರೆ, ಆರ್.ಟಿ.ಸಿ ಕಾಲಂ ನಂಬರ್ 9ರಲ್ಲಿ ಸರ್ಕಾರಿ ಬೀಳು ಭೂಮಿ ಎಂದು ನಮೂದಾಗಿ ರುವುದರಿಂದ, ಜಮೀನಿನ ಮೂಲ ಮಾಲೀಕತ್ವದ ಪ್ರಶ್ನೆ ಉದ್ಭವವಾಗುವಂತೆ ಮಾಡಿರುವುದು ರೈತರನ್ನು ಆತಂಕಕ್ಕೆ ದೂಡಿದೆ.

50-60ವರ್ಷಗಳಿಂದಲೂ ಅದೇ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇವೆ. ಆರ್.ಟಿ.ಸಿಯಲ್ಲಿ ನಮ್ಮ ಹೆಸರಿನ ಜೊತೆ ಸರ್ಕಾರಿ ಬೀಳು ಭೂಮಿ ಎಂದು ನಮೂದಾಗಿದೆ. ಇದರಿಂದ ನಮಗೆ ಯಾವುದೇ ಸರ್ಕಾರಿ ಸೌಲಭ್ಯಗಳು, ಬ್ಯಾಂಕ್ ಗಳಿಂದ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ.

ಪಹಣಿಯಲ್ಲಿ ಸರ್ಕಾರಿ ಬೀಳು ತೆಗೆದು ಹಾಕಿ, ಬದಲಾವಣೆ ಮಾಡಿ ಕೊಡುವಂತೆ ಸಂಬಂಧಪಟ್ಟ ಇಲಾಖೆ, ಸ್ಥಳೀಯ ಶಾಸಕರು, ಅಧಿಕಾರಿಗಳಿಗೆ ಮನವಿ ಮಾಡುತ್ತಾ ಬಂದಿದ್ದರೂ ಏನು ಪ್ರಯೋಜನವಾಗಿಲ್ಲ ಇವರ ನಿರ್ಲಕ್ಷ್ಯದಿಂದ ನಾವು ಕಂಗಾಲಾಗಿದ್ದೇವೆ ಎಂದು




ಚಿಕ್ಕನಂದಿ, ಹತ್ವಾಳು ಗ್ರಾಮದ ರೈತರಾದ ರಾಮಾಚಾರಿ ಸಣ್ಣಸ್ವಾಮಿ, ಸುಬ್ಬಣ್ಣ, ಶಿವಕುಮಾರ್, ರಾಜಣ್ಣ, ಚಿಕ್ಕಶೆಟ್ಟಿ, ಶಿವಪ್ಪ ಅನೇಕರು ಅಳಲು ತೋಡಿಕೊಂಡಿದ್ದಾರೆ.

1991ರಲ್ಲಿ ಅಂದಿನ ಸರ್ಕಾರ, ಕಂದಾಯ ಬಾಕಿಯಿಂದಾದ ಹಾಗೂ ಬೀಳು ಬಿದ್ದ ಜಮೀನುಗಳನ್ನು ಸ್ವಾಧೀನಾನುಭವದಲ್ಲಿರುವ ಹಾಗೂ ಅವರ ವಂಶಸ್ಥರ ಹೆಸರಿಗೆ ನೋಂದಣಿ ಮಾಡಿಕೊಡುವಂತೆ ಆದೇಶ ಹೊರಡಿಸಿತ್ತು. ಆಗಿದ್ದ ಗ್ರಾಮಲೆಕ್ಕಾಧಿಕಾರಿ, ರಾಜಸ್ವನಿರೀಕ್ಷಕರು, ತಹಶೀಲ್ದಾರ್ ಗಳ ಬೇಜವಾಬ್ದಾರಿಯಿಂದಾಗಿ ಆ ಕೆಲಸ ಇಂದಿಗೂ ಕಾರ್ಯರೂಪಕ್ಕೆ ಬಂದಿಲ್ಲ.

2004ರಲ್ಲಿ ಸರ್ಕಾರ 6 ತಿಂಗಳ ಕಾಲಾವಕಾಶ ನೀಡಿ ಮತ್ತೆ ರೆಸ್ಟೋರ್‌ಗೆ ಆದೇಶಿಸಿತ್ತು. ಆದರೆ, ಆಗಿನ ತಹಸೀಲ್ದಾರ್ ಕೂಡ ಕಾರ್ಯರೂಪಕ್ಕೆ ತರುವ ಕೆಲಸ ಮಾಡಲಿಲ್ಲ. ನಂತರದ ದಿನಗಳಲ್ಲಿ ಈ ಕ್ಷೇತ್ರದ ಯಾವ ಚುನಾಯಿತ ಸಂಸದರಾಗಲೀ, ಶಾಸಕರಾಲೀ ಈ ರೈತರ ನೆರವಿಗೆ ಬರಲಿಲ್ಲ. ಸರ್ಕಾರದ ಗಮನ ಸೆಳೆಯಲಿಲ್ಲ. ಹೀಗಾಗಿ ಅವರ ಹೆಸರಿನಲ್ಲಿ ಖಾತೆ ಇದ್ದರೂ ಸರ್ಕಾರಿ ಬೀಳು ಎಂದು ನಮೂದಾಗಿರು ವುದರಿಂದ, ನಮಗೆ ಸರ್ಕಾರದಿಂದ ಯಾವುದೇ ಸೌಲಭ್ಯಗಳು ಸಿಗುತ್ತಿಲ್ಲ.

ಈ ಸಂಬಂಧ ಕರ್ನಾಟಕ ಭೂ ಹಕ್ಕು ವೇದಿಕೆ ರೈತರ ಜೊತೆಗಿನ ಸಂವಾದಕ್ಕೆ ವೇದಿಕೆ ಕಲ್ಪಿಸಿಕೊಟ್ಟಿತ್ತು. ಈ ವೇಳೆ ರೈತರು ತಮ್ಮ ಅಳಲು ಬಿಚ್ಚಿಟ್ಟರು. ಸರ್ಕಾರಿ ಬೀಳು ತೆಗೆದುಹಾಕಿ ಕೊಡುವಂತೆ ತಹಶೀಲ್ದಾರ್, ಉಪವಿಭಾಗಾಧಿಕಾರಿ, ಜಿಲ್ಲಾಧಿಕಾರಿಗೆ ಈ ಹಿಂದೆ ಮನವಿ ಪತ್ರ ಕೊಟ್ಟಿದ್ದೇವೆ. ಆದರೆ, ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಶಾಸಕ ಅನಿಲ್ ಚಿಕ್ಕಮಾದು ಅವರ ಗಮನಕ್ಕೂ ತಂದಿದ್ದೇವೆ. ಅವರು ಕೂಡ ಕ್ರಮ ಕೈಗೊಂಡಿಲ್ಲ ಎಂದು ರೈತ ಸುಬ್ಬಣ್ಣ ಆರೋಪಿಸಿದ್ದಾರೆ.

> **ತಹಶೀಲ್ದಾರ್ ಕಳಿಸಿದ ವರದಿ ಜಿಲ್ಲಾಧಿಕಾರಿ ಕಚೇರಿಯಲ್ಲೋ, ಹುಣಸೂರಿನ ಉಪವಿಭಾಗಾಧಿಕಾರಿ ಕಚೇರಿಯಲ್ಲೋ, ಯಾವ ಮೂಲೆಯಲ್ಲಿ ಬಿದ್ದು ನಿದ್ರಿಸುತ್ತಿವೆಯೋ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳಿಸಿದ್ದಾರೋ, ಇಲ್ಲವೋ ಇದಕ್ಕೂ ಖಚಿತ ಮಾಹಿತಿ ಲಭ್ಯವಿಲ್ಲ. ತಾಲೂಕು ಕಚೇರಿಯಲ್ಲಿ ವಿಚಾರಿಸಿದರೆ ಒಂದೊಂದು ಹೇಳಿಕೆ. ಡಿಸಿಗೆ ಕಳಿಸಿದ್ದೇವೆ ಹುಣಸೂರು ಎಸಿಗೆ ಕಳಿಸಿದ್ದೇವೆ ಅಂತ ಸಬೂಬು ಹೇಳುತ್ತಾರೆ. ನಮಗೂ ತಾಳ್ಮೆ ಇಲ್ಲದಂತಾಗಿದೆ. ಹೀಗಾಗಿ ಶೀಘ್ರದಲ್ಲೇ ತಾಲೂಕು ಕಚೇರಿ ಮುಂದೆ ಅನಿರ್ದಿಷ್ಟಾವಧಿ ಧರಣಿ ಮಾಡುತ್ತೇವೆ.**
>
> **–ಸಣ್ಣಸ್ವಾಮಿ**
> ಹತ್ವಾಳು ಗ್ರಾಮದ ರೈತ

# ಸುರಕ್ಷತೆ ಇರದ ರೆಸ್ಟೋರೆಂಟ್ ತೆರವುಗೊಳಿಸಿ

## ದಟ್ಟಗಳ್ಳಿ ಅಗ್ನಿ ದುರಂತದ ಹಿನ್ನೆಲೆ | ನಿಯಮ ಉಲ್ಲಂಘಿಸುವ ರೂಫ್‌ಟಾಪ್ ಪಬ್, ಬಾರ್‌ಗಳ ಪರವಾನಗಿ ರದ್ದುಗೊಳಿಸಿ | ವಾರದೊಳಗೆ ವರದಿ ನೀಡಲು ಜಿಲ್ಲಾಧಿಕಾರಿ ಸೂಚನೆ

ಮೈಸೂರು: ಇತ್ತೀಚೆಗೆ ನಗರದ ದಟ್ಟಗಳ್ಳಿ ಬಳಿಯ ರೆಸ್ಟೋರೆಂಟ್ ಒಂದರಲ್ಲಿ ನಡೆದ ಭೀಕರ ಅಗ್ನಿ ದುರಂತವನ್ನು ಜಿಲ್ಲಾಡಳಿತ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಜಿಲ್ಲೆಯಲ್ಲಿ ಎರಡು ಅಥವಾ ಮೂರನೇ ಅಂತಸ್ತಿನಲ್ಲಿ ತಾತ್ಕಾಲಿಕ ಕಟ್ಟಡಗಳನ್ನು ನಿರ್ಮಿಸಿಕೊಂಡು, ಯಾವುದೇ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೆ ಸಾರ್ವಜನಿಕರ ಜೀವದ ಜೊತೆ ಚೆಲ್ಲಾಟವಾಡುತ್ತಿರುವ ಬಾರ್ ಅಂಡ್ ರೆಸ್ಟೋರೆಂಟ್‌ಗಳ ವಿರುದ್ಧ ತಕ್ಷಣವೇ ಕಠಿಣ ಕ್ರಮ ಕೈಗೊಂಡು ಒಂದು ವಾರದೊಳಗೆ ವರದಿ ನೀಡುವಂತೆ ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಉನ್ನತ ಮಟ್ಟದ ಅಧಿಕಾರಿಗಳ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಈ ಮಹತ್ವದ ನಿರ್ದೇಶನ ನೀಡಿದರು.

**ರೂಫ್‌ಟಾಪ್ ಪಬ್‌ಗಳ ಪರಿಶೀಲನೆ ಹಾಗೂ ಲೈಸೆನ್ಸ್ ರದ್ದು**

ಅಗ್ನಿ ದುರಂತಗಳು ಮುನ್ಸೂಚನೆ ನೀಡಿ ಬರುವುದಿಲ್ಲ ಎಂದು ಎಚ್ಚರಿಸಿದ ಜಿಲ್ಲಾಧಿಕಾರಿಗಳು, ನಗರದ ಹಲವು ರೂಫ್‌ಟಾಪ್ ಪಬ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಹುಲ್ಲು ಮತ್ತು ಅಲಂಕಾರಿಕ ವಿದ್ಯುತ್ ದೀಪಗಳನ್ನು ಅತಿಯಾಗಿ ಬಳಸಲಾಗುತ್ತಿದೆ. ಆದರೆ ಅಲ್ಲಿ ಯಾವುದೇ ಕನಿಷ್ಠ ಅಗ್ನಿ ಸುರಕ್ಷತಾ ಪರಿಕರಗಳನ್ನು ಅಳವಡಿಸಿಕೊಳ್ಳದೆ ನಿರ್ಲಕ್ಷ್ಯ ವಹಿಸಲಾಗಿದೆ. ಇಂತಹ ಬೇಜವಾಬ್ದಾರಿ ತಾಣಗಳ ವಿರುದ್ಧ ಮೈಸೂರು ಮಹಾನಗರ ಪಾಲಿಕೆಯ ವಲಯ ಅಧಿಕಾರಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಕೇವಲ ಒಂದು ವಾರದೊಳಗೆ ಜಂಟಿ ಪರಿಶೀಲನೆ ನಡೆಸಿ, ನಿಯಮ ಉಲ್ಲಂಘಿಸಿರುವುದು ಕಂಡುಬಂದಲ್ಲಿ ತಕ್ಷಣವೇ ಅವರ ಟ್ರೇಡ್ ಲೈಸೆನ್ಸ್ (ವ್ಯಾಪಾರ ಪರವಾನಗಿ) ರದ್ದುಪಡಿಸಲು ಕ್ರಮ ವಹಿಸಬೇಕು ಎಂದು ಕಟ್ಟುನಿಟ್ಟಾಗಿ ತಿಳಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಹೋಂ ಸ್ಟೇ ಹಾಗೂ ರಿಂಗ್ ರಸ್ತೆಗಳಲ್ಲಿರುವ ರೆಸ್ಟೋರೆಂಟ್‌ಗಳಲ್ಲಿ ಅನಧಿಕೃತವಾಗಿ ಮದ್ಯ ಮಾರಾಟವಾಗುವ ಸಾಧ್ಯತೆಯಿದ್ದು, ಅಬಕಾರಿ ಇಲಾಖೆ ತೀವ್ರ ನಿಗಾ ವಹಿಸಬೇಕು ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯುಕೇಶ್ ಕುಮಾರ್, ಅಗ್ನಿಶಾಮಕ ಅಧಿಕಾರಿ ಗುರುರಾಜ್ ಸೇರಿದಂತೆ ವಿವಿಧ ಇಲಾಖೆಗಳ ಪ್ರಮುಖರು ಉಪಸ್ಥಿತರಿದ್ದರು.



### ಅಕ್ರಮ ಮದ್ಯ ಮಾರಾಟ ಹಾಗೂ ಆನ್‌ಲೈನ್ ಜಾಹೀರಾತಿಗೆ ಬ್ರೇಕ್

ಮೈಸೂರು ನಗರ ಹಾಗೂ ಹೊರವಲಯಗಳಲ್ಲಿ ಅಬಕಾರಿ ಇಲಾಖೆಯಿಂದ ಸಿ.ಎಲ್–7, ಸಿ.ಎಲ್–2 ಅಥವಾ ಸಿ.ಎಲ್–5 ನಂತಹ ಯಾವುದೇ ಅಧಿಕೃತ ಪರವಾನಗಿ ಪಡೆಯದೆ ಅಥವಾ ನಿಯಮಗಳನ್ನು ಗಾಳಿಗೆ ತೂರಿ ಕಾರ್ಯನಿರ್ವಹಿಸುತ್ತಿರುವ ಬಾರ್ ಮತ್ತು ಪಬ್‌ಗಳು ಕಾರ್ಯನಿರ್ವಹಿಸುತ್ತಿವೆ. ಅಬಕಾರಿ ಇಲಾಖೆಯು ಇಂತಹ ಕಡೆ ನಿರಂತರವಾಗಿ ತಪಾಸಣೆ ನಡೆಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಕರ್ತವ್ಯ ಲೋಪ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧವೇ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಡಿಸಿ ಎಚ್ಚರಿಕೆ ನೀಡಿದರು. ಇದಲ್ಲದೆ, ಪರವಾನಗಿ ಇಲ್ಲದ ಬಾರ್ ಅಂಡ್ ರೆಸ್ಟೋರೆಂಟ್‌ಗಳು ಆನ್‌ಲೈನ್ ಹಾಗೂ ಪ್ರಚಾರ ಫಲಕಗಳ ಮೂಲಕ ಮದ್ಯ ಮಾರಾಟದ ಜಾಹೀರಾತು ನೀಡುತ್ತಿರುವುದು ಗಮನಕ್ಕೆ ಬಂದಿದ್ದು, ಇದರ ವಿರುದ್ಧವೂ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

### ಅಗ್ನಿಶಾಮಕ ತರಬೇತಿ, ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆ

ಮಹಾನಗರ ಪಾಲಿಕೆ ಮತ್ತು ಅಬಕಾರಿ ಅಧಿಕಾರಿಗಳಿಗೆ ಹೊಸದಾಗಿ ಪರವಾನಗಿ ನೀಡುವ ಸಂದರ್ಭದಲ್ಲಿ ಅಗ್ನಿ ಸುರಕ್ಷತೆಯ ನಿಯಮಗಳ ಬಗ್ಗೆ ಅಗ್ನಿಶಾಮಕ ಇಲಾಖೆಯ ವತಿಯಿಂದ ಒಂದು ದಿನದ ವಿಶೇಷ ತರಬೇತಿ ನೀಡಲಾಗುವುದು. ಸುರಕ್ಷತಾ ಕ್ರಮಗಳ ಕೊರತೆಯಿದ್ದರೆ ಅರ್ಜಿ ಹಂತದಲ್ಲೇ ಪರವಾನಗಿಯನ್ನು ತಿರಸ್ಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದರು. ಸಭೆಯಲ್ಲಿದ್ದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾತನಾಡಿ, ಪಾಲಿಕೆ ಮತ್ತು ಅಬಕಾರಿ ಅಧಿಕಾರಿಗಳು ದಾಳಿ ನಡೆಸುವ ಸಂದರ್ಭದಲ್ಲಿ ಪೊಲೀಸ್ ಇಲಾಖೆಯಿಂದ ಸಂಪೂರ್ಣ ಭದ್ರತೆ ಹಾಗೂ ಅಗತ್ಯ ಸಹಕಾರ ನೀಡಲಾಗುವುದು ಎಂದರು.

## ಎರಡು ಸಮುದಾಯಗಳಿಗೆ ಪ್ರತಿಭಟನೆಗೆ ಅನುಮತಿ ನಿರಾಕರಣೆ

ಚಾಮರಾಜನಗರ,ತಾಲೂಕಿನ ಮಸಣಾಪುರ ಘಟನೆಗೆ ಸಂಬಂಧಿಸಿದಂತೆ ಉಪ್ಪಾರ ಸಮುದಾಯ ಮತ್ತು ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ವತಿಯಿಂದ ಕರೆ ನೀಡಿದ್ದ ಪ್ರತಿಭಟನೆಗೆ ಜಿಲ್ಲಾ ಪೊಲೀಸ್ ಇಲಾಖೆ ಅನುಮತಿ ನಿರಾಕರಿಸಿದೆ.

ಚಾಮರಾಜನಗರ ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಕಿಡಿಗೇಡಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಸಗಣಿ ಬಳಿದು ಮತ್ತು ಕಲ್ಲುಗಳಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ವಿದ್ಯುತ್ ದೀಪಗಳಿಂದ ಅಲಂಕರಿಸಿದ್ದ ದೀಪಗಳು ಮತ್ತು ಭಾವಚಿತ್ರವನ್ನು ಜಖಂಗೊಳಿಸಿ ಅಪಮಾನ ಮಾಡಲಾಗಿತ್ತು. ಈ ಘಟನೆಯನ್ನು ಖಂಡಿಸಿ ಹಾಗೂ ಈ ಪ್ರಕರಣದಲ್ಲಿ ಭಾಗಿಯಾಗಿರುವ ಕಿಡಿಗೇಡಿಗಳನ್ನು ಬಂಧಿಸುವಂತೆ ಆಗ್ರಹಿಸಿ ಮತ್ತು ಗಡಿಪಾರು ಮಾಡಿ ಕಠಿಣ ಶಿಕ್ಷೆಗೆ ಒಳಪಡಿಸುವಂತೆ ಜೂ.19 ರ ಶುಕ್ರವಾರ ಜಿಲ್ಲಾ ಮಟ್ಟದಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದ್ದು ಸೂಕ್ತ ರಕ್ಷಣೆಯನ್ನು ನೀಡುವಂತೆ ಕೋರಿ ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ವತಿಯಿಂದ ಪ್ರತಿಭಟನೆಗೆ ಕರೆ ನೀಡಲಾಗಿತ್ತು.

ಜಿಲ್ಲಾ ಉಪ್ಪಾರ ಸಂಘಟನೆಗಳ ಒಕ್ಕೂಟ ಹಾಗೂ ಗಡಿಮನೆ, ಕಟ್ಟೆಮನೆ ಸಹಯೋಗದಲ್ಲೂ ಉಪ್ಪಾರ ಸಮುದಾಯದ ಚಿಂದು ಅವರ ಮೇಲೆ ಹಲ್ಲೆ ಮಾಡಿದ್ದುದನ್ನು ಖಂಡಿಸಿ ಪ್ರತಿಭಟನೆ ನಡೆಸಲು ಅನುಮತಿ ನೀಡುವಂತೆ ಮನವಿ ಸಲ್ಲಿಸಲಾಗಿತ್ತು.

ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಸಗಣಿ ಬಳಿದಿರುವ ವಿಚಾರವಾಗಿ ಹಾಗೂ ಆರೋಪಿತನ ಮೇಲೆ ಹಲ್ಲೆ ನಡೆಸಿರುವ ಬಗ್ಗೆ ಈಗಾಗಲೇ ಸಂಬಂಧಪಟ್ಟ ಯಳಂದೂರು ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಎರಡೂ ಪ್ರಕರಣಗಳು ಸಹ ತನಿಖೆಯಲ್ಲಿರುತ್ತವೆ.

ಉಪ್ಪಾರ ಸಮುದಾಯ ಹಾಗೂ ಪರಿಶಿಷ್ಟ ಜನಾಂಗದ ಬಲಗೈ ಸಮುದಾಯಗಳು ಜಿಲ್ಲೆಯಲ್ಲಿ ಎರಡು ಪ್ರಬಲ ಕೋಮುಗಳಾಗಿದ್ದು, ಪ್ರತಿಭಟನೆಯನ್ನು ಕೈಗೊಂಡಲ್ಲಿ ಪ್ರತಿಭಟನಾ ಮೆರವಣಿಗೆಯಲ್ಲಿ ಮತ್ತೊಂದು ಕೋಮಿನ ಬಗ್ಗೆ ಅವಹೇಳನಕಾರಿ ಘೋಷಣೆಗಳನ್ನು ಕೂಗುವುದು ಹಾಗೂ ಭಾಷಣ ಮಾಡುವ ನಾಯಕರುಗಳು ಪ್ರಚೋದನಕಾರಿಯಾಗಿ ಭಾಷಣ ಮಾಡುವ ಮೂಲಕ ಪರಿಸ್ಥಿತಿಯನ್ನು ಮತ್ತಷ್ಟು ಉದ್ವಿಗ್ನಗೊಳಿಸುವ ಸಾಧ್ಯತೆ ಇರುತ್ತದೆ. ಪ್ರತಿಭಟನೆಯಲ್ಲಿ ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಹಾನಿಯುಂಟಾಗುವ ಸಾಧ್ಯತೆಗಳಿದ್ದು ಹಾಗೂ ಇನ್ನು ಮುಂಬರುವ ದಿನಗಳಲ್ಲಿ ಉಭಯ ಕೋಮುಗಳ ನಡುವೆ ಕೋಮು ಸಾಮರಸ್ಯ ಹಾಳಾಗುವ ಬಗ್ಗೆ ಗುಪ್ತ ಮಾಹಿತಿಯಿಂದ ತಿಳಿದುಬಂದಿರುತ್ತದೆ. ಆದ್ದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮತ್ತು ಎರಡು ಕೋಮುಗಳ ನಡುವಿನ ಸಾಮರಸ್ಯ ಕಾಪಾಡುವ ನಿಟ್ಟಿನಲ್ಲಿ ಎರಡು ಸಮುದಾಯಗಳು ನಡೆಸಲು ಉದ್ದೇಶಿಸಿರುವ ಪ್ರತಿಭಟನೆಗೆ ಪೊಲೀಸ್ ಇಲಾಖೆಯಿಂದ ಅನುಮತಿಯನ್ನು ನಿರಾಕರಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ಇಲಾಖೆ ತಿಳಿಸಿದೆ.

## ಬೀದಿ ಬದಿ ಹೋಟೆಲ್ ಆಹಾರ ಸುರಕ್ಷತೆಗೆ ತಿಂಗಳು ತೀವ್ರ ಪರಿಶೀಲನೆ

**ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಹೇಳಿಕೆ**



ಮೈಸೂರು: ಆಹಾರ ಪದಾರ್ಥಗಳ ಮಾರಾಟ ಬೀದಿ ಬದಿ, ಸಣ್ಣ, ದೊಡ್ಡ ಹೋಟೇಲ್, ರೆಸ್ಟೋರೆಂಟ್ ಗಳಲ್ಲಿ ನಡೆಯುತ್ತದೆ. ಗ್ರಾಹಕರಿಗೆ ಆರೋಗ್ಯಯುತ ಆಹಾರ ನೀಡುವುದು ಮಾಲೀಕರ ಕರ್ತವ್ಯವಾಗಿದೆ. ಆಹಾರ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಲು ಆಹಾರ ಸುರಕ್ಷತಾ ಅಧಿಕಾರಿಗಳು ಒಂದು ತಿಂಗಳು ವಿಶೇಷ ತೀವ್ರ ತಪಾಸಣೆ ನಡೆಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು. ಆಹಾರ ಸುರಕ್ಷತಾ ಅಧಿಕಾರಿಗಳು ಮೈಸೂರು ಮಹಾನಗರ ಪಾಲಿಕೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿರುವ ಆರೋಗ್ಯ ಅಧಿಕಾರಿಗಳೊಂದಿಗೆ ತಪಾಸಣೆ ಸಂದರ್ಭದಲ್ಲಿ ಭಾಗಿಯಾಗಬೇಕು ಎಂದರು.

ಆಹಾರ ಸುರಕ್ಷತೆ ಕ್ರಮಗಳನ್ನು ಅನುಸರಿಸದಿದ್ದಲ್ಲಿ ಕೂಡಲೇ ನೋಟೀಸ್ ಜಾರಿ ಮಾಡಿ, ದಂಡ ವಿಧಿಸಿ ಸ್ಥಳೀಯ ಸಂಸ್ಥೆಗಳು ನೀಡುವ ಟ್ರೇಡ್ ಲೈಸೆನ್ಸ್ ಗಳನ್ನು ರದ್ದು ಮಾಡಲು ಶಿಫಾರಸ್ಸು ಮಾಡಿ. ಬೀದಿ ಬದಿ ಆಹಾರ ವ್ಯಾಪಾರ ಮಾಡುವವರು ಸೇರಿದಂತೆ ಸ್ಟಾರ್ ಹೋಟೆಲ್ ಗಳಲ್ಲಿ ಅನುಮಾನ ಬರುವ ಎಲ್ಲಾ ಕಡೆಗಳಲ್ಲೂ ತಪಾಸಣೆ ನಡೆಸಿ ಎಂದರು.

ಪರವಾನಗಿ ಪಡೆದ ಸಂದರ್ಭದಲ್ಲಿ ಸರ್ಕಾರ ಸೂಚಿಸುವ ಎಲ್ಲಾ ನಿಯಮಗಳನ್ನು ಪಾಲಿಸಬೇಕು. ಅನಾಹುತ ನಡೆದ ನಂತರ ಕ್ರಮಗಳ ಬಗ್ಗೆ ಚಿಂತಿಸುವ ಬದಲು ಮೊದಲೇ ಕಾರ್ಯಪ್ರವೃತ್ತರಾಗಿ, ವಿವಿಧ ಕಡೆ ಪರಿಶೀಲನೆ ನಡೆಸಿ ಪ್ರತಿ ದಿನ ಜಿಲ್ಲಾಡಳಿತಕ್ಕೆ ವರದಿ ನೀಡಿ ಎಂದರು. ಆಹಾರ ಮಾರಾಟಗಾರರು ಗ್ರಾಹಕರ ಆರೋಗ್ಯದ ಮೇಲೆ ವ್ಯತಿರಿಕ್ತವಾಗಿ ಪರಿಣಾಮ ಬೀರುವ ನಿಷೇಧಿತ ಪದಾರ್ಥಗಳನ್ನು ಬಳಸಬಾರದು, ಸ್ವಚ್ಛತೆಗೆ ಆದ್ಯತೆ ನೀಡಬೇಕು. ಕಾಲಕಾಲಕ್ಕೆ ಸರ್ಕಾರದಿಂದ ನೀಡಲಾಗುವ ನಿರ್ದೇಶನಗಳನ್ನು ಪಾಲಿಸಬೇಕು ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ ಸೋಮಶೇಖರ್, ಆಹಾರ ಸುರಕ್ಷತಾ ಅಧಿಕಾರಿ ಡಾ: ರವೀಂದ್ರ, ಕಾಂತರಾಜು ಸೇರಿ ಇನ್ನಿತರರು ಉಪಸ್ಥಿತರಿದ್ದರು.

## ಬಿಡುಗಡೆ ಪತ್ರ ವಿಳಂಬ ಖಂಡನೆ



ಚಾಮರಾಜನಗರ: ಜೀತದಾಳುಗಳಿಗೆ ಬಿಡುಗಡೆ ಪತ್ರ ವಿಳಂಬ ಖಂಡಿಸಿ ರೂಟ್ಸ್ ಫಾರ್ ಫ್ರೀಡಂ ಸಂಘಟನೆ ನೇತೃತ್ವದಲ್ಲಿ ಜೀತ ವಿಮುಕ್ತರು ನಗರದಲ್ಲಿ ಅನಿರ್ಧಿಷ್ಟಾವಧಿ ಧರಣಿ ನಡೆಸಿದರು. ನಗರದ ಜಿಲ್ಲಾಡಳಿತ ಭವನದಲ್ಲಿ ಎದುರು ಸಂಘಟನೆಯ ಜಿಲ್ಲಾ ಸಂಚಾಲಕ ಜಿ.ಕೆ.ಕುನ್ನಹೊಳಿಯಯ್ಯ ಅವರ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘಟನಾ ಜಿಲ್ಲಾ ಸಂಚಾಲಕ ಜಿ.ಕೆ.ಕುನ್ನಹೊಳಿಯಯ್ಯ ಮಾತನಾಡಿ, ಜಿಲ್ಲೆಯ ಯಳಂದೂರು ಮತ್ತು ಗುಂಡ್ಲುಪೇಟೆ ತಾಲೂಕಿನಲ್ಲಿ ಒಟ್ಟು 59 ಮಂದಿ ಜೀತದಾಳನ್ನು ಅಧಿಕಾರಿಗಳ ಮುಖಾಂತರ ಜೀತರೆಂದು ವರದಿಯಾಗಿದ್ದರು ಹಹ ಜೀತ ವಿಮುಕ್ತ ಪತ್ರಕೊಡದೆ ವಿಳಂಬ ಮಾಡುತ್ತಿ ದ್ದಾರೆ ಎಂದು ಆರೋಪಿಸಿದರು.

ಯಳಂದೂರು ತಾಲೂಕಿನಲ್ಲಿ 2018ರ ಸಾಲಿನಲ್ಲಿ 42 ಜೀತದಾಳಗಳನ್ನು ಗುಂಡ್ಲುಪೇಟೆ ತಾಲೂಕಿನಲ್ಲಿ 17 ಮಂದಿ ನಿಯೋಜನೆಗೊಂಡಿದ್ದು, ತನಿಖೆ ತಂಡ ರಚನೆ ಮಾಡಿ ಆರ್‌ಐ, ವಿಎ, ಪಿಡಿಓ ನೋಡಲ್ ಅಧಿ ಕಾರಿಗಳು 1–9ನೇ ಅನುಬಂಧ ಫಾರ್ಮ್ ತನಿಖೆಮಾಡಿ ಜೀತರೆಂದು ವರದಿ ಮಾಡಿರುತ್ತಾರೆ. ಆದರೆ ಜೀತದಾಳುಗಳಿಗೆ ಇನ್ನೂ ಬಿಡುಗಡೆ ಪತ್ರ ಕೊಡದೆ ವಿಳಂಬ ಮಾಡಿರುತ್ತಾರೆ. ಆದ್ದರಿಂದ ಜೀತದಾಳಗಳಿಗೆ ಶೀಘ್ರ ಜೀತ ವಿಮುಕ್ತ ಪತ್ರ ಕೊಡಿಸಬೇಕು ಎಂದು ಆಗ್ರಹಿಸಿದರು.


40 ವರ್ಷಗಳ ಹಿಂದೆಯೇ ಜೀತಪದ್ಧತಿ ರದ್ದುಪಡಿಸಬೇಕು ಎಂದು ಕಾನೂನು ಜಾರಿಗೆ ಬಂದರು ಯಾವುದೇ ಪ್ರಯೋಜನವಾಗಿಲ್ಲ. ಈ ಅನಿಷ್ಠ ಪದ್ಧತಿಯನ್ನು ಹೋಗಲಾಡಿಸಲು ಡಾ. ಬಿ.ಆರ್.ಅಂಬೇಡ್ಕರ್ ಅವರು ಕಾನೂನು ಜಾರಿ ಮಾಡಿದರು. ಆದರೆ ಪ್ರಸ್ತುತ ಜನಪ್ರತಿನಿಧಿಗಳು, ಅಧಿಕಾರಿಗಳು, ನಮ್ಮನ್ನು ಆಳುವ ಸರ್ಕಾರಗಳು ಇದರ ಬಗ್ಗೆ ಚಕಾರವೆತ್ತಿಲ್ಲ. ಜೀತ ಪದ್ಧತಿ ನಿರ್ಮೂಲನೆ ಮಾಡುವಲ್ಲಿ ವಿಫಲವಾಗಿವೆ ಎಂದು ದೂರಿದರು.

ತಕ್ಷಣವೇ ಉಪ ವಿಭಾಗ ಮಟ್ಟದಲ್ಲಿ ಜಾಗೃತಿ ಸಭೆ ಕರೆಯಬೇಕು. ಜಿಲ್ಲೆಯಲ್ಲಿ ಬೇರೆ ರಾಜ್ಯಗಳಿಂದ ಬಂದಿರುವ ವಲಸೆ ಕಾರ್ಮಿಕರ ಬಗ್ಗೆ ಸಮೀಕ್ಷೆ ಮಾಡುವುದು. ಯಳಂದೂರು, ಗುಂಡ್ಲುಪೇಟೆ ತಾಲೂಕಿನ ಒಟ್ಟು 59 ಮಂದಿಗೆ ಜೀತವಿಮುಕ್ತಪತ್ರ ಕೊಡಿಸಬೇಕು. ಬಿಡಗಡೆ ಪತ್ರ ಕೊಟ್ಟಿರುವ ವಿಮುಕ್ತರಿಗೆ ಮಾಶಾಸನ ಕೊಡಿಸಬೇಕು. ಜೀತ ವಿಮುಕ್ತ ಪುನರ್ವಸತಿ ಕಲ್ಪಿಸು ವಂತೆ ಒತ್ತಾಯಿಸಿದರು. ಸ್ಥಳಕ್ಕೆ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿಗಳು ಬಂದು ನಮ್ಮ ಬೇಡಿಕೆಗಳನ್ನು ಈಡೇರಿಸುವ ತನಕ ಧರಣಿ ಕೈ ಬಿಡುವುದಿಲ್ಲ ಎಂದು ಎಚ್ಚರಿಸಿದರು. ಧರಣಿಯಲ್ಲಿ ಮರಿಸ್ವಾಮಿ, ನಾಗರಾಜು, ಕೃಷ್ಣಯ್ಯ, ಸಿದ್ದರಾಜು, ರಾಜು, ಗುರುಮಲ್ಲಪ್ಪ, ಕರಿಯಯ್ಯ, ಗೋಪಾಲಯ್ಯ, ಶಿವಯ್ಯ, ದೊಡ್ಡಯ್ಯ ಕಾಲೋನಿ, ಕೆಂಪಯ್ಯ, ಮಹೇಶ್ ಇತರರ ಭಾಗವಹಿಸಿದ್ದರು.

## ಅಂಬೇಡ್ಕರ್‌ಗೆ ಅಪಮಾನ

ಚಾಮರಾಜನಗರ: ತಾಲೂಕಿನ ಮಸಣಾಪುರದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಎಸಗಿದ ಘಟನೆ ಮಾಸುವ ಮುನ್ನವೇ ಹೊಂಗನೂರು ಗ್ರಾಮದಲ್ಲಿ ಕಿಡಿಗೇಡಿಗಳು ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಎಸಗಿದ್ದಾರೆ.

ತಾಲೂಕಿನ ಹೊಂಗನೂರು ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವಿದ್ದ ನಾಮಫಲಕಕ್ಕೆ ಕಿಡಿಗೇಡಿಗಳು ಸಗಣಿ ಎರಚಿ ಅಪಮಾನ ಮಾಡಿದ್ದಾರೆ. ಘಟನೆ ಬೆಳಕಿಗೆ ಬರುತ್ತಿದ್ದಂತೆಯೇ ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿಸಿರುವ ಕಿಡಿಗೇಡಿಗಳನ್ನು ತಕ್ಷಣ ಬಂಧಿಸುವಂತೆ ಒತ್ತಾಯಿಸಿದ್ದಾರೆ.ಇತ್ತೀಚೆಗಷ್ಟೇ ಮಸಣಾಪುರದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿದ್ದ ಪ್ರಕರಣದ ಚರ್ಚೆ ಇನ್ನೂ ಮಾಸುವ ಮುನ್ನವೇ ಹೊಂಗನೂರಿನಲ್ಲಿ ಇಂತಹ ಘಟನೆ ನಡೆದಿರುವುದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ. ಸ್ಥಳಕ್ಕೆ ಸ್ಥಳೀಯರು ಭೇಟಿ ನೀಡಿ ಪ್ರತಿಭಟನೆ ನಡೆಸಿದ್ದು, ತಪ್ಪಿತಸ್ಥರನ್ನು ಪತ್ತೆಹಚ್ಚಿ ಕಠಿಣ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಆಗ್ರಹಿಸಿದ್ದಾರೆ. ಪ್ರಕರಣ ಸಂಬಂಧ ಪೊಲೀಸರು ತನಿಖೆ ಕೈಗೊಂಡಿದ್ದಾರೆ.



## ಅವೈಜ್ಞಾನಿಕ ಸಿಗ್ನಲ್: ತನಿಖೆಗೆ ಒತ್ತಾಯ

ಮೈಸೂರು: ನಗರದಲ್ಲಿ ಸುಮಾರು 8.25 ಕೋಟಿ ರೂ. ವೆಚ್ಚದಲ್ಲಿ ಸಂಚಾರ ನಿಯಂತ್ರಣ ವ್ಯವಸ್ಥೆ ಅನುಷ್ಠಾನ ವೇಳೆ ಯಾವುದೇ ಮಾರ್ಗಸೂಚಿ ಪಾಲಿಸಿಲ್ಲ. ಸಾರ್ವಜನಿಕರ ತೆರಿಗೆ ಹಣ ದುರುಪಯೋಗವಾಗಿದೆ. ಹೀಗಾಗಿ ಉನ್ನತ ಮಟ್ಟದ ತನಿಖೆ ನಡೆಯಬೇಕೆಂದು ವಕೀಲ ಎ. ಎಂ.ಭಾಸ್ಕರ್ ಆಗ್ರಹಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಗರದ ಸುಮಾರು 50 ಹೊಸ ಜಂಕ್ಷನ್‌ಗಳಲ್ಲಿ ಈ ರೀತಿಯ ವ್ಯವಸ್ಥೆ ಅಳವಡಿಸಲಾಗಿದೆ. ಇದರಿಂದಾಗಿ ಸಂಚಾರ ದಟ್ಟಣೆ ಕಡಿಮೆಯಾಗಿದೆ, ವಾಹನಗಳು ಸುಗಮವಾಗಿ ಸಂಚರಿಸುತ್ತಿವೆ ಎಂದು ಸಂಬಂಧಪಟ್ಟ ಇಲಾಖೆ ಪ್ರಚಾರ ಮಾಡುತ್ತಿದೆ. ಆದರೆ ಇದರ ಬಗ್ಗೆ ಅತ್ಯಂತ ಪ್ರಮುಖವಾದ ವೈಜ್ಞಾನಿಕ ಹಾಗೂ ತಾಂತ್ರಿಕ ಅಧ್ಯಯನದ ವರದಿಗಳು ಲಭ್ಯವಿಲ್ಲ ಎಂದು ಹೇಳಲಾಗುತ್ತಿದೆ ಎಂದು ಆರೋಪಿಸಿದರು.

ಜೊತೆಗೆ, ಅಳವಡಿಕೆ ಮೊದಲು ಯಾವುದೇ ಅಧ್ಯಯನ ನಡೆಸಿದ ದಾಖಲೆಯಿಲ್ಲ. ಭಾರತೀಯ ರಸ್ತೆ ಕಾಂಗ್ರೆಸ್ ಮಾರ್ಗಸೂಚಿ ಪಾಲಿಸಲಾಗಿದೆಯೇ, ಈಗ ಪ್ರಚಾರ ಮಾಡುತ್ತಿರುವುದಕ್ಕೆ ಆಧಾರವೇನು, ತಾಂತ್ರಿಕ ಅಧ್ಯಯನವಿಲ್ಲದೇ ವೆಚ್ಚ ಮಾಡಲಾಗಿದೆಯೇ, ಈ ಯೋಜನೆಯಲ್ಲಿ ಸಾರ್ವಜನಿಕರ ಹಣದ ದುರುಪಯೋ ನಡೆದಿದೆಯೇ ಎಂಬ ಗ್ಗೆ ಸೂಕ್ತ ತನಿಖೆ ನಡೆಸಿ, ಒಂದು ವೇಳೆ ಲೋಪ ಕಂಡು ಬಂದಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಪ್ರದೀಪ್‌ಕುಮಾರ್ ಹಾಜರಿದ್ದರು.

## ಶಾಸಕರಿಂದ ರಸ್ತೆ ಅಭಿವೃದ್ಧಿಗೆ ಚಾಲನೆ



ಮಡಿಕೇರಿ:–ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಪೊನ್ನಂಪೇಟೆ ತಾಲೂಕಿನ ಪೊನ್ನಪ್ಪಸಂತೆಯಿಂದ ಬಾಳಲೆಗೆ ಹೋಗುವ ಮಾರ್ಗದ ಅಭಿವೃದ್ಧಿ ಕಾಮಗಾರಿಗೆ ಶಾಸಕರಾದ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅವರು ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು.

ರೂ.2.30 ಕೋಟಿ ವೆಚ್ಚದಲ್ಲಿ ಈ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಸದ್ಯದಲ್ಲೇ ಈ ಕಾಮಗಾರಿ ಪ್ರಾರಂಭವಾಗಲಿದೆ ಎಂದು ಶಾಸಕರು ಈ ಸಂದರ್ಭದಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಮಿದೇರಿರ ನವೀನ್, ಟಾಟು ಮೊಣ್ಣಪ್ಪ, ಚೆಟ್ಟಿಮಾಡ ರೋಬಿನ್, ಮುಕಳೇರ ಕುಶಾಲಪ್ಪ, ಜಿಮ್ಮಿ ಅಯ್ಯಣ್ಣ, ಮಲ್ಲಂಡ ಧ್ಯಾನ್ ದೇವಯ್ಯ, ಕೊಣ್ಣಿಯಂಡ ಸೋಮಣ್ಣ, ಕೋದಂಡ ಸೋಮಣ್ಣ, ಬೋಡಂಗಡ ಅಶೋಕ್, ಪುಳ್ಳಂಗಡ ದಿನೇಶ್, ಅರಮಾಣಮಾಡ ಕುಶ, ವಿನು ಉತ್ತಪ್ಪ, ಮಚ್ಚಾಮಾಡ ಮನು, ಅಣ್ಣಳ್ಳಮಾಡ ಹರೀಶ್, ಗಿರೀಶ್, ಅಜ್ಜಿಕುಟ್ಟಿರ ಪೊನ್ನಪ್ಪ, ಕೇಚಮಾಡ ಸಿದ್ದು ನಾಚಪ್ಪ, ಕುಂಡಚ್ಚಿರ ಮಂಜು ದೇವಯ್ಯ, ತಾಣಚ್ಚಿರ ನಿಖಿಲ್ ಸೋಮಣ್ಣ ಇತರರು ಉಪಸ್ಥಿತರಿದ್ದರು.

**ವ್ಯವಸ್ಥಿತ ನಿರ್ವಹಣೆಗೆ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಸೂಚನೆ**

## ಜೂ.21ರಂದು ನಗರದಲ್ಲಿ ರಾಷ್ಟ್ರೀಯ ಅರ್ಹತೆ, ಪ್ರವೇಶ ಪರೀಕ್ಷೆ

ಚಾಮರಾಜನಗರ: ಜೂನ್ 21ರಂದು ನಡೆಯಲಿರುವ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯ ವ್ಯವಸ್ಥಿತ ನಿರ್ವಹಣೆಗೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನ್ಯಾಷನಲ್ ಟೆಸ್ಟ್ ಏಜೆನ್ಸಿ ವತಿಯಿಂದ ನಡೆಸಲಾಗುತ್ತಿರುವ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ ಸಿದ್ಧತೆ ಸಂಬಂಧ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯು ಜೂನ್ 21ರಂದು ಜಿಲ್ಲಾಕೇಂದ್ರದ 3 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಪಿ.ಎಂ.ಶ್ರೀ ಕೇಂದ್ರಿಯ ವಿದ್ಯಾಲಯ, ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪರೀಕ್ಷಾ ಕೇಂದ್ರಗಳಾಗಿವೆ. ಪರೀಕ್ಷಾ ಅಕ್ರಮಗಳಿಗೆ ಅವಕಾಶವಾಗದಂತೆ ಹಾಗೂ ಯಾವುದೇ ಲೋಪ ಕಂಡುಬರದಂತೆ ಸಿದ್ಧತಾ ಪ್ರಕ್ರಿಯೆಗಳಿಗೆ ಮುಂದಾಗಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.




ಪರೀಕ್ಷೆ ಸುಸೂತ್ರವಾಗಿ ನಡೆಸಲು ಅನುಕೂಲವಾಗುವಂತೆ ಪರೀಕ್ಷಾ ಕಾರ್ಯಕ್ಕೆ ಅತಿಥಿ ಶಿಕ್ಷಕರ ಬದಲಾಗಿ ಖಾಯಂ ಶಿಕ್ಷಕರನ್ನು ನಿಯೋಜಿಸಬೇಕು. ಪ್ರಶ್ನೆಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು ವಾಹನ ವ್ಯವಸ್ಥೆ ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಲಿನ ಸೂಕ್ತ ಭದ್ರತೆಗಾಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗುವುದು. ಪರೀಕ್ಷಾರ್ಥಿಗಳ ಆರೋಗ್ಯ ಸುರಕ್ಷತೆಗಾಗಿ ಪರೀಕ್ಷಾ ಕೇಂದ್ರಗಳ ಸ್ಥಳದಲ್ಲಿ ಆಂಬುಲೆನ್ಸ್ ಮತ್ತು ಅಗ್ನಿಶಾಮಕ ವಾಹನಗಳನ್ನು ನಿಯೋಜಿಸಬೇಕು ಎಂದರು. ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ ಟಿವಿಗಳು ಸುವ್ಯವಸ್ಥೆಯಲ್ಲಿರುವಂತೆ ನೋಡಿಕೊಳ್ಳಬೇಕು. ಪರೀಕ್ಷಾ ದಿನದಂದು ಪರೀಕ್ಷಾ ಕೇಂದ್ರಗಳಲ್ಲಿ ನಿರಂತರವಾಗಿ ವಿದ್ಯುತ್ ಸರಬರಾಜು ಆಗಬೇಕು. ಜಿಲ್ಲೆಯ ಯಾವುದೇ ಭಾಗಗಳಿಂದ ಬರುವ ಪರೀಕ್ಷಾರ್ಥಿಗಳಿಗೆ ಪರೀಕ್ಷಾ ಕೇಂದ್ರದ ಹತ್ತಿರ ಇಳಿಯಲು ಅವಕಾಶವಾಗುವಂತೆ ಕೆ.ಎಸ್.ಆರ್.ಟಿ.ಸಿ ಬಸ್ ವ್ಯವಸ್ಥೆ ಮಾಡಬೇಕು. ಒಟ್ಟಾರೆ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ ಜಿಲ್ಲೆಯಲ್ಲಿ ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ವೆಂಕಟೇಶ್, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಚಂದ್ರಪಾಟೀಲ್, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಪುಟ್ಟಗೌರಮ್ಮ, ಕೆ.ಎಸ್.ಆರ್.ಟಿ.ಸಿ ವಿಭಾಗೀಯ ನಿಯಂತ್ರಣಾಧಿಕಾರಿ ನಾಗರಾಜು, ಪಿ.ಎಂ.ಶ್ರೀ ಕೇಂದ್ರಿಯ ವಿದ್ಯಾಲಯದ ಪ್ರಾಂಶುಪಾಲರಾದ ದವಿಂಧರ್ ಸಿಂಗ್, ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಮಧು, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಅಶ್ವಿನಿ, ಜಿಲ್ಲಾಮಟ್ಟದ ಅಧಿಕಾರಿಗಳು, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

## ಸಾಮಾಜಿಕ ತಾರತಮ್ಯದಿಂದ ಹೆಚ್ಚಿದ ದಾಳಿ: ಬೆಂಜಮಿನ್ ವಾಸ್

ಮೈಸೂರು: ವಿಶೇಷವಾಗಿ ಮುಸ್ಲಿಮರು, ಕ್ರೈಸ್ತರು ಸೇರಿ ಹಲವಾರು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಭಾಷಣ, ಸಮುದಾಯ ಹಿಂಸಾಚಾರ ಆರೋಪ, ಆರಾಧನಾ ಸ್ಥಳಗಳ ಮೇಲೆ ನಡೆಯುತ್ತಿರುವ ದಾಳಿ ಗಮನಿಸಿದಲ್ಲಿ ಇದು ಸಾಮಾಜಿಕ ತಾರತಮ್ಯದ ಉದ್ದೇಶದ್ದಾ ಗಿವೆ ಎಂಬುದು ಗೋಚರವಾಗುತ್ತದೆ ಎಂದು ಇಂಡಿಯಾ ಬೈಬಲ್ ಲಿಟರೇಚರ್ ಅಪೊಸ್ಟೋಲೇಟ್ ಸಂಸ್ಥಾಪಕ ನಿರ್ದೇಶಕ ರೆ.ಫಾ.ಬೆಂಜಮಿನ್ ವಾಸ್ ಕಳವಳ ವ್ಯಕ್ತಪಡಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಹಲವು ರಾಜ್ಯಗಳಲ್ಲಿ ಜಾರಿಗೊಂಡಿರುವ ಮತಾಂತರ ವಿರೋಧೀ ಕಾನೂನುಗಳನ್ನು ಬಲವಂತದ ಅಥವಾ ವಂಚನೆ ಮೂಲಕ ತಡೆಯಲು ಅಗತ್ಯವೆಂದು ಬೆಂಬಲಿಗರು ಹೇಳುತ್ತಾರೆ. ಆದರೆ, ಯಾವುದೇ ಸಾಕ್ಷ್ಯವಿಲ್ಲದಿದ್ದರೂ ಸಹಾ ಈ ಕಾನೂನುಗಳನ್ನು ಕ್ರೈಸ್ತ ಪಾದ್ರಿಗಳು, ಮಿಷನರಿಗಳು ಹಾಗೂ ಅಂತರ್ ಧರ್ಮೀಯ ದಂಪತಿಗಳನ್ನು ಗುರಿಯಾಗಿಸಿಕೊಂಡು ಬಳಸಲಾಗುತ್ತಿದೆ ಎಂಬ ವಾದವೂ ಇದೆ. ಹೀಗಾಗಿ ಈ ಕುರಿತು ವಿಸ್ತೃತ ಚರ್ಚೆ ನಡೆಯಬೇಕೆಂದು ಸಲಹೆ ನೀಡಿದರು. ಆನಂದ್ ಇದ್ದರು.

# ಅಧ್ಯಕ್ಷರ ಪದಗ್ರಹಣ: ಪೂರ್ವಭಾವಿ ಸಭೆ



ಚಾಮರಾಜನಗರ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ನೂತನ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರ ಪದಗ್ರಹಣ ಸಮಾರಂಭ ಜೂ.21ರಂದು ಬೆಂಗ ಳೂರು ನಗರದ ಅರಮನೆ ಮೈದಾನದಲ್ಲಿ ನಡೆಯ ಲಿದ್ದು, ಜಿಲ್ಲೆಯ ಪಕ್ಷದ ವಿವಿಧ ಘಟಕಗಳ ಅಧ್ಯ ಕ್ಷರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪಿ.ಮರಿಸ್ವಾಮಿ ಮನವಿ ಮಾಡಿದರು.

ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ನಡೆದ ಜಿಲ್ಲೆಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಯುವಘಟಕ, ಮುಂಚೂಣಿ ಘಟಕದ ವತಿಯಿಂದ ಕರ್ನಾಟಕ ಪ್ರದೇಶ ಕಾಂಗ್ರೆಸ್ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರ ಪದಗ್ರಹಣ ಸಮಾರಂಭ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಡಿ.ಕೆ.ಶಿವಕುಮಾರ್ ಕಳೆದ 6 ವರ್ಷಗಳಿಂದ ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷ ಸಂಘಟ ನೆಗೆ ಹೆಚ್ಚು ಒತ್ತು ನೀಡಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಸರ್ಕಾರ ಅಧಿಕಾರಕ್ಕೆ ಬರಲು ಕಾರಣರಾಗಿದ್ದಾರೆ. ಸಿದ್ದರಾಮಯ್ಯ ಅವರು 8ವರ್ಷ ಕಾಲ ಮುಖ್ಯಮಂತ್ರಿಯಾಗಿ ಉತ್ತಮ ಆಡಳಿತ ನೀಡಿದ್ದಾರೆ. ಕಳೆದ ಜೂ.3ರಂದು ಸಿಎಂ ಆಗಿ ಅಧಿಕಾರ ಸ್ವೀಕರಿಸಿದ್ದು, ಜೂ.21ರಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ನೂತನ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರಿಗೆ ಅಧಿಕಾರ ಹಸ್ತಾಂತರಿಸುವರು,. ಕಾರ್ಯಕ್ರಮದಲ್ಲಿ ಮಾಜಿಸಿಎಂ ಸಿದ್ದರಾಮಯ್ಯ ಸೇರಿದಂತೆ ಪಕ್ಷದ ರಾಜ್ಯಮುಖಂಡರು, ಸಚಿವರು ಭಾಗವಹಿಸುವರು ಎಂದರು

ಜಿಲ್ಲೆಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಯುವಘಟಕ, ಮುಂಚೂಣಿ ಘಟಕದ ಪದಾಧಿಕಾರಿಗಳು, ಜಿಲ್ಲೆಯಿಂದ ಹೆಚ್ಚಿನ ಜನರನ್ನು ಬೆಂಗಳೂರಿನ ಪದಗ್ರಹಣ ಸಮಾರಂಭಕ್ಕೆ ಕರೆದುಕೊಂಡು ಬಂದು ಸಮಾರಂಭ ಯಶಸ್ವಿಗೊಳಿಸಿಕೊಡಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ನಾಗರತ್ನ, ಚುಡಾ ಅಧ್ಯಕ್ಷ ಮಹಮದ್‌ಅಸ್ಗರ್‌ಮುನ್ನಾ, ಕೆಪಿಸಿಸಿ ಕಾನೂನು ವಿಭಾಗದ ಕಾರ್ಯದರ್ಶಿ ವಕೀಲ ಚಿನ್ನಸ್ವಾಮಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ,ಕೆ ರವಿಕುಮಾರ್, ಜಿಲ್ಲಾ ಪ್ರಧಾನಕಾರ್ಯದರ್ಶಿ ಚಿಕ್ಕಮಹೇವ್, ಆರ್,ಮಹದೇವ್, ಉಪ್ಪಾರ ನಿಗಮದ ಮಾಜಿ ಅಧ್ಯಕ್ಷ ಶಿವಕುಮಾರ್, ಜಿ,ಪಂ ಮಾಜಿ ಸದಸ್ಯರಾದ ಸದಾಶಿವಮೂರ್ತಿ, ಕೊಪ್ಪಾಳಿ ಮಹದೇವನಾಯಕ, ರಮೇಶ್, ಕಾವೇರಿಶಿವಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ,ಎಸ್ ಗುರುಸ್ವಾಮಿ, ಕೊಳ್ಳೇಗಾಲಘಟಕದ ತೋಟೇಶ್, ಮುಕುಂದ ವರ್ಮ, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಬಸವರಾಜು, ತಾಲ್ಲೂಕು ಪಂಚಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಮರಿಯಾಲದಹುಂಡಿ ಕುಮಾರ್, ಮಲ್ಲಿಕಾರ್ಜುನ್, ಕುಮಾರಸ್ವಾಮಿ, ನಗರಸಭಾ ನಾಮ ನಿರ್ದೇಶ ಸ್ವಾಮಿ, ಕೆ,ಡಿ,ಪಿ ಸದಸ್ಯ ಶ್ರೀನಿವಾಸ್, ಮಾಜಿನಗರಸಭಾ ಅಧ್ಯಕ್ಷೆ ಚಿನ್ನಮ್ಮ, ಸದಸ್ಯರಾದ ಕಲಾವತಿ, ನಾಗರಾಜು, ಯುವಕಾಂಗ್ರೆಸ್ ಜಿಲ್ಲಾಧ್ಯಕ್ಷ ಯೋಗೇಂದ್ರ ಯುವ ಕಾಂಗ್ರೆಸ್ ಅಕ್ಷಯ್, ಮೂಹನ್‌ನಗು, ,ನಾಗೇಂದ್ರ ದ್ವಾರಕೀ,ವಕೀಲ ನಾಗಾರ್ಜುನ್‌ಪೃಥಿ, ಅರುಣ್‌ಕುಮಾರ್, ರಾಜೇಂದ್ರಪ್ರಸಾದ್, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಮಧುಸೋಧನ್, ತಾ,ಪಂ ಮಾಜಿ ಸದಸ್ಯ ಪುಟ್ಟಸ್ವಾಮಿ, ಎಎಚ್.ನಸ್ರುಲ್ಲಾಖಾನ್, ಆಯಿಭ್‌ಖಾನ್, ನಾಗಯ್ಯನಾಗವಳ್ಳಿ ,ನಾಯಜ್, ಗ್ರಾ,ಪಂ ಮಾಜಿ ಅಧ್ಯಕ್ಷ ರೋಪೇಶ್, ವೀರಭದ್ರಸ್ವಾಮಿ, ಅಪ್ಸರಹಮದ್, ರವಿಗೌಡ ಸೈಯದ್ ಇರ್ಷದ್, ರಾಮಸಮುದ್ರನಾಗರಾಜು,ಸೇರಿದಂತೆ ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

# ಬಾಲ ಕಾರ್ಮಿಕ ಪದ್ಧತಿ ಸಾಮಾಜಿಕ ಪಿಡುಗು

ಗುಂಡ್ಲುಪೇಟೆ: ಬಾಲ್ಯದಲ್ಲಿ ಆಟವಾಡುತ್ತಾ, ಗೆಳೆಯರೊಂದಿಗೆ ಶಾಲೆಗೆ ಹೋಗಿ ಕಲಿಯಬೇಕಾದ ಮಕ್ಕಳು ಹಲವಾರು ಕಾರಣಗಳು ಹಾಗೂ ಕೌಟುಂಬಿಕ ಸಮಸ್ಯೆಗಳಿಂದಾಗಿ ಬಾಲ ಕಾರ್ಮಿಕರಾಗಿ ದುಡಿಯುತ್ತಿರುವುದು ಅತ್ಯಂತ ಬೇಸರದ ಸಂಗತಿ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ನೂರುನ್ನೀಸ ಕಳಕಳಿ ವ್ಯಕ್ತಪಡಿಸಿದರು. ಪಟ್ಟಣದ ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆಯ ಆವರಣದಲ್ಲಿ ತಾಲೂಕು ಆಡಳಿತ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ತಾಲೂಕು ಕಾನೂನು ಸೇವೆಗಳ ಸಮಿತಿ ಹಾಗೂ ಕೈಲಾಸ್ ಸತ್ಯಾರ್ಥಿ ಚಿಲ್ಡ್ರನ್ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ-2026' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಬಾಲ ಕಾರ್ಮಿಕ ಪದ್ಧತಿಯು ಒಂದು ಗಂಭೀರ ಸಾಮಾಜಿಕ ಪಿಡುಗಾಗಿದೆ ಎಂದು ಆತಂಕ ವ್ಯಕ್ತಪಡಿಸಿದ ನ್ಯಾಯಾಧೀಶರು, ಇಂದು ಕಟ್ಟಡ ನಿರ್ಮಾಣ ಕೆಲಸಗಳು, ಅಂಗಡಿ ಮಳಿಗೆಗಳು, ಗಾರ್ಮೆಂಟ್ಸ್, ಬೇಕರಿ, ಗ್ಯಾರೇಜ್, ಹೋಟೆಲ್ ಹಾಗೂ ಕಾರ್ಖಾನೆಗಳಲ್ಲಿ ಮಕ್ಕಳು ತಮ್ಮ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಕ್ಕೂ ಮೀರಿದ ಕಷ್ಟದ ಕೆಲಸಗಳನ್ನು ಮಾಡುತ್ತಿದ್ದಾರೆ. ಇದರಿಂದಾಗಿ ಅವರು ಶಿಕ್ಷಣದಿಂದ ವಂಚಿತರಾಗುತ್ತಿರುವುದಲ್ಲದೆ, ಪೌಷ್ಟಿಕಾಹಾರದ ಕೊರತೆಯಿಂದಾಗಿ ಅನೇಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಕೆಲವೊಮ್ಮೆ ಅಪಾಯಕಾರಿ ಕೆಲಸಗಳ ನಡುವೆ ತಮ್ಮ ಜೀವವನ್ನೇ ಕಳೆದುಕೊಳ್ಳುತ್ತಿದ್ದಾರೆ. 1986ರ ಬಾಲ ಕಾರ್ಮಿಕ ನಿಷೇಧ ಕಾಯ್ದೆಯ ಪ್ರಕಾರ 14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ಅಷ್ಟೇ ಅಲ್ಲದೆ, ಕಾಯ್ದೆಯ ತಿದ್ದುಪಡಿಯಂತೆ 14ರಿಂದ 18 ವರ್ಷದೊಳಗಿನ ಕಿಶೋರಾವಸ್ಥೆಯ ಮಕ್ಕಳನ್ನು ಸಿಮೆಂಟ್, ಪಟಾಕಿ ಕಾರ್ಖಾನೆಗಳಂತಹ ದೈಹಿಕ ಮತ್ತು ಮಾನಸಿಕವಾಗಿ



ತೊಂದರೆಯಾಗುವ ಅಪಾಯಕಾರಿ ಸ್ಥಳಗಳಲ್ಲಿ ದುಡಿಸಿಕೊಳ್ಳುವುದನ್ನೂ ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ಕಾರ್ಯಕ್ರಮದಲ್ಲಿ ಬಾಲಕಾರ್ಮಿಕ ಪದ್ಧತಿಯ ಸಂಪೂರ್ಣ ನಿರ್ಮೂಲನೆ, ಮಕ್ಕಳ ಹಕ್ಕುಗಳ ರಕ್ಷಣೆ, ಕಡ್ಡಾಯ ಶಿಕ್ಷಣದ ಮಹತ್ವ ಹಾಗೂ ಮಕ್ಕಳ ಮೇಲಿನ ಶೋಷಣೆ ತಡೆ ಕುರಿತು ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ವ್ಯಾಪಕ ಅರಿವು ಮೂಡಿಸಲಾಯಿತು. ಇದೇ ಸಂದರ್ಭದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಬಾಲಕಾರ್ಮಿಕ ಪದ್ಧತಿಯ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಪ್ರತಿಜ್ಞಾ ವಿಧಿ ಸ್ವೀಕರಿಸಿ ಸಂಕಲ್ಪ ಮಾಡಿದರು. ಸಮಾರಂಭದಲ್ಲಿ ನ್ಯಾಯಾಧೀಶರಾದ ಎಂ.ಟಿ. ದೀಪು, ಆರ್.ಬಿ. ಗಿರೀಶ್, ಜಿಲ್ಲಾ ಕಾರ್ಮಿಕ ಅಧಿಕಾರಿ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಸದಸ್ಯ ಕಾರ್ಯದರ್ಶಿ ರಾಮಚಂದ್ರಯ್ಯ, ವಸತಿ ಶಾಲೆಯ ಪ್ರಾಂಶುಪಾಲ ತಾವರಪ್ಪ ಲಂಬಾಣಿ, ತಾಲೂಕು ವಕೀಲರ ಸಂಘದ ಅಧ್ಯಕ್ಷ ಟಿ.ಎಸ್. ವೆಂಕಟೇಶ್, ಕಾರ್ಯದರ್ಶಿ ಜವರಾಜು, ಯೋಜನಾ ನಿರ್ದೇಶಕ ಎಂ. ಮಹೇಶ್ ಮತ್ತು ಕಾರ್ಮಿಕ ನಿರೀಕ್ಷಕ ನಾರಾಯಣಮೂರ್ತಿ ಸೇರಿದಂತೆ ಪ್ರಮುಖ ಗಣ್ಯರು ಉಪಸ್ಥಿತರಿದ್ದರು.

## ಎಲ್ಲವನ್ನೂ ಹೈಕಮಾಂಡ್ ತೀರ್ಮಾನಿಸುತ್ತೇ: ಎಚ್.ಸಿ.ಮಹದೇವಪ್ಪ



ಮೈಸೂರು: ?ನಾನು ಹಿಂದೆಯೂ ಫಸ್ಟ್, ಈಗಲೂ ಫಸ್ಟ್, ಸಚಿವ ಸ್ಥಾನ ಸಿಕ್ಕಿಲ್ಲವೆಂದಾಕ್ಷಣಕ್ಕೆ ನಾನು 2ನೇ ದರ್ಜೆ ನಾಯಕನಲ್ಲ. ಯಾವಾಗ ಏನಾಗಬೇಕು ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ಶಾಸಕ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ನಗರಕ್ಕೆ ಶುಕ್ರವಾರ ಆಗಮಿಸಿ ಜಲದರ್ಶಿನಿಯಲ್ಲಿ ತಮ್ಮನ್ನು ಭೇಟಿಯಾಗಿ, ಸಚಿವ ಸ್ಥಾನ ಕೊಡದಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ದಲಿತ ಮುಖಂಡರನ್ನು ಉದ್ದೇಶಿಸಿ ಮಾತನಾಡಿದ ಬಳಿಕ ಮೊದಲ ಹಂತದ ನಾಯಕರಾದ ತಮಗೆ ಮೊದಲ ಹಂತದ ಸಚಿವ ಸ್ಥಾನ ಸಿಗದಿರುವ ಕುರಿತು ಮೇಲಿನಂತೆ ಪ್ರತಿಕ್ರಯಿಸಿದರು. ಎಲ್ಲದಕ್ಕೂ ಲೆಕ್ಕಾಚಾರ ಇರುತ್ತದೆಂದರು. ಇನ್ನೂ ಕೆಲವರು ಮಂತ್ರಿ ಸ್ಥಾನ ಕೇಳುತ್ತಿರುವ ಕುರಿತು ಪ್ರತಿಕ್ರಯಿಸಿ, ನಾವು ಅತ್ತು ಕರೆದು, ಬೇಡಿ ಮಂತ್ರಿ ಪದವಿ ತೆಗೆದುಕೊಳ್ಳುವುದಿಲ್ಲವೆಂದರು. ಸಿದ್ದರಾಮಯ್ಯ ಆಪ್ತ ಬಣದಲ್ಲಿ ಇರುವುದರಿಂದಲೇ ಸ್ಥಾನ ತಪ್ಪಿದಿಯಾ ಎಂಬ ಪ್ರಶ್ನೆಗೆ ಅಂತ ಯಾವುದೇ ವಾತಾವರಣ ಇಲ್ಲ. ನಾವೆಲ್ಲ ಇಷ್ಟು ಗಟ್ಟಿಯಾಗಿರುವುದು ಅವರ ಬಣದಲ್ಲಿರುವ ಕಾರಣಕ್ಕೆ ಎಂದರು.

ಸಂವಿಧಾನ, ಪ್ರಜಾಪ್ರಭುತ್ವದ ಬಲವರ್ದನೆಗೆ ಸಂಘಟನೆಗಳ ಜತೆಗೆ ಸೇರಿ ಕೆಲಸ ಮಾಡಿದ್ದವನಾಗಿದ್ದೇನೆ. ಮನೆ ಮನೆ ಸಂವಿಧಾನದ ಪೀಠಿಕೆ ತಲುಪಿಸುವ ಕೆಲಸ ಮಾಡುತ್ತೇನೆಂದರು. ಇನ್ನೂ ತಮ್ಮ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿರುವ ಕುರಿತು ಪ್ರತಿಕ್ರಯಿಸಿ, ಇಂತಹ ಸಮಯದಲ್ಲಿ ಯಾಕೆ ದೂರು ನೀಡಿದ್ದಾರೆಂಬುದು ಗೊತ್ತಿಲ್ಲ. ಕೆಲವರು ನನ್ನ ವಿರುದ್ಧ ರಾಜ್ಯಪಾಲರಿಗೆ ಆಧಾರರಹಿತ ದೂರು ನೀಡಿದ್ದಾರೆ. 40 ವರ್ಷದ ರಾಜಕೀಯದಲ್ಲಿ ನಾನು ಯಾವುದೇ ಭ್ರಷ್ಟಾಚಾರ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು. ಇಂದಿನಿಂದ ನನ್ನ ಹೋರಾಟ ಎಂಬ ಕುಮಾರಸ್ವಾಮಿ ಹೇಳಿಕೆ ಕುರಿತು ಪ್ರತಿಕ್ರಯಿಸಿ, ಜೆಡಿಎಸ್ ಸಿದ್ಧಾಂತ ರಹಿತ ಪಕ್ಷ ಜೆಡಿಎಸ್ ಪಕ್ಷ ಸ್ಥಾಪನೆಯಾದ ನಾವೆಲ್ಲ ಇದ್ದೆವು. ಈಗ ಜೆಡಿಎಸ್ ಯಾವ ಸಿದ್ಧಾಂತವೂ ಇಲ್ಲ, 2028ಕ್ಕೆ ಮತ್ತೆ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದರು. ದಲಿತ ಸಂಘಟನೆಗಳ ಮುಖಂಡರು ನನ್ನ ಪರವಾಗಿ ಎಲ್ಲಾ ಕಡೆಯೂ ಮಾತನಾಡಿದ್ದಾರೆ. ಬೀದರ್‌ನಿಂದ ಚಾಮರಾಜನಗರದವರೆಗೆ ಎಲ್ಲರೂ ಬಹಳ ವಿಶ್ವಾಸ ಇಟ್ಟಿದ್ದಾರೆ. ಹೀಗಾಗಿ ಸ್ವಲ್ಪ ಬೇಸರದಿಂದ ಮಾತನಾಡುತ್ತಿದ್ದಾರೆ. ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತಿದ್ದು, ಎಲ್ಲವೂ ಮನವರಿಕೆಯಾಗಿದೆ. ಡಾ.ಯತೀಂದ್ರ ಸಿದ್ದರಾಮಯ್ಯ ಕೂಡ ನನ್ನ ಮಗ ಇದ್ದಂತೆ. ಅವರಿಗೆ ಸಚಿವ ಸ್ಥಾನ ಸಿಕ್ಕಿರುವುದು ವೈಯಕ್ತಿಕವಾಗಿ ಸಂತೋಷ ತಂದಿದೆ. ಅವರು ಒಳ್ಳೆಯ ಕೆಲಸ ಮಾಡುತ್ತಾರೆ. ನಾನು ಹಾಗೂ ಸಿದ್ದರಾಮಯ್ಯ ಮಾಡಿದ್ದ ಹೋರಾಟವನ್ನೇ ಸುನೀಲ್ ಬೋಸ್ ಮತ್ತು ಯತೀಂದ್ರ ಮುಂದುವರಿಸುತ್ತಿದ್ದಾರೆ ಎಂದರು.

### ಕಾಂಗ್ರೆಸ್‌ಗೆ ಪಾಠ ಕಲಿಸುತ್ತೇವೆ

ಮೈಸೂರು: ನಿಮಗೆ ಸಚಿವ ಸ್ಥಾನ ಸಿಗದಿರುವುದು ಕಾಂಗ್ರೆಸ್ ದಲಿತರಿಗೆ ಮಾಡಿದ ಅನ್ಯಾಯವಾಗಿದೆ. ನಿಮಗೆ ಸ್ಥಾನ ಕೊಡದಿದ್ದರೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾಂಗ್ರೆಸ್‌ಗೆ ಪಾಠ ಕಲಿಸುತ್ತೇವೆ ಎಂದು ದಲಿತ ಮುಖಂಡರು ಮಹದೇವಪ್ಪರ ಎದುರು ಸಭೆಯಲ್ಲಿ ಆಕ್ರೋಶ ಹೊರಹಾಕಿದರು.

ಸಿದ್ದರಾಮಯ್ಯ ನಿಮ್ಮ ಪರವಾಗಿ ಗಟ್ಟಿ ಧ್ವನಿ ಎತ್ತಬೇಕಿತ್ತು. ಅವರ ಮೌನ ಬೇಸರ ತರಿಸಿದೆ. ಅನ್ಯಾಯವನ್ನು ಹೈಕಮಾಂಡ್ ಸರಿಪಡಿಸಬೇಕು. ಯತೀಂದ್ರ ಅವರಿಗೆ ಸ್ಥಾನ ಕೊಡಿಸಲಿ, ಭೈರತಿ ಸುರೇಶ್ ಅವರಿಗೆ ಕೊಡಿಸಿದರೇಕೆ? ಎಂದು ಮುಖಂಡರು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಯಿಸಿದ ಮಾಜಿ ಸಚಿವ ಮಹದೇವಪ್ಪ ಎಲ್ಲವೂ ಮುಗಿದು ಹೋಗಿಲ್ಲ, ಇನ್ನೂ ಸಮಯ ಇದೆ. ಯಾರೂ ಏನೂ ಬೇಸರ ಮಾಡಿಕೊಳ್ಳಬೇಡಿ. ಸಿದ್ದರಾಮಯ್ಯ ನಮ್ಮ ಪರವಾಗಿ ಮಾತನಾಡಿದ್ದಾರೆ. ನಾನು ಸಿದ್ದರಾಮಯ್ಯ ಯಾವತ್ತೂ ಬೇರೆ ಬೇರೆ ಅಲ್ಲ. ನನ್ನ ಪರವಾಗಿ ಅವರು, ಅವರ ಪರವಾಗಿ ನಾನು ಇರುತ್ತೇವೆ. ನಮ್ಮದು ಸುದೀರ್ಘ 40 ವರ್ಷಗಳ ಸಂಬಂಧ. ಎಂದಿಗೂ ಒಬ್ಬರನ್ನೊಬ್ಬರು ಬಿಟ್ಟು ಕೊಟ್ಟಿಲ್ಲ? ಎಂದರು.

# ಪಶ್ಚಿಮಘಟ್ಟಗಳ ಸಂರಕ್ಷಣೆಗೆ ಒತ್ತು

## ಕಾರ್ಯಪಡೆ ಸಮಿತಿ ಅಧ್ಯಕ್ಷ ಮೊಹಮ್ಮದ್ ತಬ್ರೇಜ್ ಆಲಂ ಷರೀಫ್ ಸೂಚನೆ

ಚಾಮರಾಜನಗರ: ಪಶ್ಚಿಮಘಟ್ಟಗಳ ಸಮಗ್ರ ರಕ್ಷಣೆ ಹಾಗೂ ನಿರ್ವಹಣೆಗಾಗಿ ವಿವಿಧ ಇಲಾಖೆಗಳ ಜವಾಬ್ದಾರಿ ಪ್ರಮುಖವಾಗಿದ್ದು, ಮುಂದಿನ ಪೀಳಿಗೆಗಾಗಿ ಪರಿಸರವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ರಾಜ್ಯ ಪಶ್ಚಿಮಘಟ್ಟ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷರಾದ ಮೊಹಮ್ಮದ್ ತಬ್ರೇಜ್ ಆಲಂ ಷರೀಫ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪಶ್ಚಿಮಘಟ್ಟಗಳ ಸಂರಕ್ಷಣೆ, ಕಾವೇರಿ ನದಿ ಪಾತ್ರದ ಗ್ರಾಮಗಳ ಸಮಸ್ಯೆ ಹಾಗೂ ಬುಡಕಟ್ಟು ಜನಾಂಗದ ಅಭಿವೃದ್ಧಿ ವಿಷಯಗಳ ಕುರಿತು ನಡೆದ ಮಹತ್ವದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

### ಪ್ರವಾಸಿ ತಾಣಗಳಲ್ಲಿ ಸ್ವಚ್ಛತೆ ಹಾಗೂ ಜಾಗೃತಿ

ಚಾಮರಾಜನಗರ ಜಿಲ್ಲೆಯು ಶೇಕಡಾ 52ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದ್ದು, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಹೊರತುಪಡಿಸಿದರೆ ಅತಿ ಹೆಚ್ಚು ಪಶ್ಚಿಮಘಟ್ಟ ಪ್ರದೇಶವನ್ನು ಒಳಗೊಂಡಿದೆ. ಹೀಗಾಗಿ ಇಲ್ಲಿನ ಅರಣ್ಯ, ಜೀವವೈವಿಧ್ಯ ಮತ್ತು ಜಲಮೂಲಗಳ ರಕ್ಷಣೆಗೆ ಎಲ್ಲಾ ಇಲಾಖೆಗಳು ವಿಶೇಷ ಗಮನ ಹರಿಸಬೇಕು. ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಪರಿಸರ ಮಾಲಿನ್ಯವಾಗದಂತೆ ತಡೆಯಲು ಸಮವಸ್ತ್ರಧಾರಿ ಸಿಬ್ಬಂದಿಯನ್ನು ನಿಯೋಜಿಸಿ, ಪ್ರವಾಸಿಗರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಕಸದ ಡಬ್ಬಿಗಳನ್ನು ಅಳವಡಿಸುವುದು ಹಾಗೂ ಪಶ್ಚಿಮಘಟ್ಟಗಳ ಮಹತ್ವವನ್ನು ಸಾರುವ ಆಕರ್ಷಕ ಗೋಡೆಬರಹ ಮತ್ತು ಫಲಕಗಳನ್ನು ನಿರ್ಮಿಸುವ ಮೂಲಕ ವಿದ್ಯಾರ್ಥಿಗಳು, ಪ್ರವಾಸಿಗರು ಹಾಗೂ ಸಾರ್ವಜನಿಕರಲ್ಲಿ ಪರಿಸರ ಕಾಳಜಿ ಮೂಡಿಸುವ ಕೆಲಸವಾಗಬೇಕಿದೆ ಎಂದು ಅವರು ಸೂಚಿಸಿದರು.

ಸಭೆಯಲ್ಲಿ ಉಚ್ಚ ನ್ಯಾಯಾಲಯದ ಸೀನಿಯರ್ ಕೌನ್ಸಿಲರ್ ಮೃತ್ಯುಂಜಯ, ಹಿರಿಯ ವಿಜ್ಞಾನಿ ನಯೀಮ್ ಉಲ್ಲಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಶ್ರೀಪತಿ, ಜಿ.ಪಂ. ಉಪಕಾರ್ಯದರ್ಶಿ ಶ್ರುತಿ, ಲೋಕೋಪಯೋಗಿ ಇಲಾಖೆಯ ಇಇ ಕಿರಣ್ ಕುಮಾರ್, ಡಿಎಚ್‌ಓ ಡಾ. ಎಸ್. ಚಿದಂಬರ, ಶಾಲಾ ಶಿಕ್ಷಣ ಇಲಾಖೆಯ ಚಂದ್ರಪಾಟೀಲ್, ತಹಶೀಲ್ದಾರ್ ಚೈತ್ರ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ರಾಜೇಶ್, ಪ್ರವಾಸೋದ್ಯಮ ಇಲಾಖೆಯ ತಮಣ್ಣಗೌಡ ಪಾಟೀಲ್ ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



### ಜಿಲ್ಲಾಡಳಿತದ ಕ್ರಮಗಳು, ಅಧಿಕಾರಿಗಳ ಉಪಸ್ಥಿತಿ

ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು, ಅರಣ್ಯ ಪ್ರದೇಶದ ನಿವಾಸಿಗಳ ಆರೋಗ್ಯ ತಪಾಸಣೆಗಾಗಿ ನಿರಂತರವಾಗಿ ಶಿಬಿರಗಳನ್ನು ನಡೆಸಲಾಗುತ್ತಿದೆ. ಜಿಲ್ಲೆಯಾದ್ಯಂತ ಕ್ಯಾನ್ಸರ್ ತಪಾಸಣೆ ಹಾಗೂ ಅಗತ್ಯ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದ್ದು, ಶಿಕ್ಷಣ ಮತ್ತು ಪರಿಸರ ಸಂರಕ್ಷಣೆಗೆ ಜಿಲ್ಲಾಡಳಿತವು ಪ್ರಮುಖ ಆದ್ಯತೆ ನೀಡಿದೆ ಎಂದು ವಿವರಿಸಿದರು.

### ಕಟ್ಟುನಿಟ್ಟಿನ ಪ್ಲಾಸ್ಟಿಕ್ ನಿಯಂತ್ರಣ, ಬುಡಕಟ್ಟು ಜನರ ಆರೈಕೆ

ಅರಣ್ಯ ಪ್ರದೇಶಗಳಲ್ಲಿ ಪ್ಲಾಸ್ಟಿಕ್ ಬಳಕೆಗೆ ಕಟ್ಟುನಿಟ್ಟಿನ ಕಡಿವಾಣ ಹಾಕಬೇಕಿದೆ. ಇದಕ್ಕಾಗಿ ಹಸಿರು ಚೆಕ್ ಪೋಸ್ಟ್‌ಗಳನ್ನು (Green Check Posts) ಸ್ಥಾಪಿಸಿ, ಅರಣ್ಯದೊಳಗೆ ಪ್ಲಾಸ್ಟಿಕ್ ವಸ್ತುಗಳನ್ನು ಕೊಂಡೊಯ್ಯದಂತೆ ಕಾವಲು ಕಾಯಬೇಕು. ವಿಶೇಷವಾಗಿ ಎರಡು ಲೀಟರ್ ಸಾಮರ್ಥ್ಯಕ್ಕಿಂತ ಕಡಿಮೆ ಇರುವ ನೀರಿನ ಪ್ಲಾಸ್ಟಿಕ್ ಬಾಟಲಿಗಳ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಇದೇ ವೇಳೆ ಅರಣ್ಯದಂಚಿನಲ್ಲಿ ವಾಸಿಸುವ ಬುಡಕಟ್ಟು ಜನರ ಆರೋಗ್ಯ ಸುಧಾರಣೆಗೆ ಹೆಚ್ಚಿನ ಕಾರ್ಯಕ್ರಮಗಳನ್ನು ರೂಪಿಸಬೇಕು. ಸಾಮಾಜಿಕ ಅರಣ್ಯ ಇಲಾಖೆಯು ವ್ಯಾಪಕವಾಗಿ ಸಸಿಗಳನ್ನು ನೆಟ್ಟು ಪೋಷಿಸಬೇಕು ಎಂದು ಅವರು ನಿರ್ದೇಶನ ನೀಡಿದರು.

## 23ರಿಂದ ಗುರೂಜಿ ಪ್ರವಚನ

ಮೈಸೂರು: ಹೊನ್ನಾವರ ಬಳಿಯ ಬಂಗಾರಮಕ್ಕಿಯಲ್ಲಿನ ವೀರಾಂಜನೇಯ ಮಹಾ ಸಂಸ್ಥಾನಮ್‌ನ ಹೇಮಪುರ ಮಹಾ ಪೀಠಂನ ಧರ್ಮಾಧಿಕಾರಿ ಮಾರುತಿ ಗುರೂಜಿ ಜೂ. 23 ರಿಂದ 25 ರವರೆಗೆ ನಗರದ ಕೃಷ್ಣಮೂರ್ತಿಪುರಂ ರಾಮಮಂದಿರದಲ್ಲಿ ಭಕ್ತರಿಗೆ ಆಶೀರ್ವಚನ ನೀಡಲಿದ್ದಾರೆ ಎಂದು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಜೂ. 22 ರಂದು ರಾತ್ರಿ 8ಕ್ಕೆ ಅವರನ್ನು ಶ್ರೀರಾಮ ಮಂದಿರದಲ್ಲಿ ಮಂಗಳ ವಾದ್ಯಗಳೊಡನೆ ಸ್ವಾಗತಿಸಲಾಗುವುದು. 23 ರಂದು ಬೆಳಗ್ಗೆ 9.30ಕ್ಕೆ ರಾಮತಾರಕ ಮಂತ್ರ ಹವನ, ರಾತ್ರಿ 8.30ಕ್ಕೆ ತೀರ್ಥ ಫಲ ಮಂತ್ರಾಕ್ಷತೆ, 24 ರ ಬೆಳಗ್ಗೆ 10.30ಕ್ಕೆ ಸಿಂಧೂರ ಅರ್ಚನೆ ನಡೆಯಲಿದ್ದು, 108 ದಂಪತಿ ಭಾಗವಹಿಸಲಿದ್ದಾರೆ. ಜೂ. 25 ರಂದು ಸಂಜೆ 4ಕ್ಕೆ ಗುರುವಂದನಾ ಕಾರ್ಯಕ್ರಮ, ನಗರದ ವಿವಿಧ ಸಂಘ ಸಂಸ್ಥೆಗಳಿಂದ ಗುರುಗಳಿಗೆ ಗುರು ನಮನವಿರಲಿದ್ದು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ ಇನ್ನಿತರರು ಉಪಸ್ಥಿತರಿರುವರೆಂದರು. ಡಾ.ಲಕ್ಷ್ಮಿ ದೇವಿ, ವಿ. ಮನು, ಪ್ರದೀಪ್‌ಗೌಡ, ವಿಕ್ರಂ ಅಯ್ಯಂಗಾರ್, ಅಜಯರ್ ಶಾಸ್ತ್ರಿ ಇದ್ದರು.



# ನಾಳೆ ಮಧುಮೇಹ ಕುರಿತ ಕೃತಿ ಬಿಡುಗಡೆ: ಶ್ರೀವತ್ಸ



ಮೈಸೂರು: ಡಾ.ವಿ.ಲಕ್ಷ್ಮಿ ನಾರಾಯಣ ಹಾಗೂ ಡಾ. ಸೂರಜ್ ತೇಜಸ್ವಿ ಒಟ್ಟುಗೂಡಿ ರಚಿಸಿರುವ ಮಧುಮೇಹ ಮನುಕುಲದ ಅಗೋಚರ ಶತ್ರು ಕೃತಿ ಸಾಮಾನ್ಯರೂ ಸಹಾ ಮಧುಮೇಹವನ್ನು ಹೇಗೆ ನಿಯಂತ್ರಿಸಿಕೊಳ್ಳಬಗ್ಗೆ ಉಪಯುಕ್ತ ಮಾಹಿತಿ ನೀಡುತ್ತದೆ ಎಂದು ಶಾಸಕ ಟಿ.ಎಸ್. ಶ್ರೀವತ್ಸ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೃತಿ ಬಿಡುಗಡೆ ಸಮಾರಂಭ ಜೂ. 21 ರಂದು ಬೆಳಗ್ಗೆ 10.30ಕ್ಕೆ ಕುವೆಂಪುನಗರದ ಗಾನಭಾರತಿಯಲ್ಲಿ ನಡೆಯಲಿರುವ ಹಿನ್ನೆಲೆಯಲ್ಲಿ ಈ ಕೃತಿ ಓದುತ್ತಿದ್ದಂತೆ ಜೀವನ ಶೈಲಿಯನ್ನು ನಿಯಂತ್ರಿಸಿಕೊಳ್ಳುವ ಮೂಲಕ ಮಧುಮೇಹವನ್ನು ಹೇಗೆ ಹತೋಟಿಗೆ ತರಬಹುದೆಂಬುದನ್ನು ಕೃತಿಯಲ್ಲಿ ಪರಿಣಾಮಕಾರಿಯಾಗಿ ತಿಳಿಸಲಾಗಿದೆ ಎಂದರು.

ಲೇಖಕ ಡಾ.ವಿ. ಲಕ್ಷ್ಮಿ ನಾರಾಯಣ್ ಮಾತನಾಡಿ, ಮಧುಮೇಹ ಒಬ್ಬರಿಂದ ಒಬ್ಬರಿಗೆ ಹರಡುವುದಿಲ್ಲ. ಆದರೆ ಅದು ಸಾಂಕ್ರಾಮಿಕ ಕಾಯಿಲೆಯಂತೆಯೇ ವ್ಯಾಪಸುತ್ತಿರುವುದು ಕಳವಳದ ಸಂಗತಿಯಾಗಿದೆ. ನಮ್ಮ ಜೀವನ ಶೈಲಿಯನ್ನು ಆರೋಗ್ಯದ ದಿಕ್ಕಿನಿಂದ ಅನಾರೋಗ್ಯದ ದಿಕ್ಕಿನತ್ತ ಬದಲಿಸಿಕೊಳ್ಳುತ್ತಿದ್ದೇವೆ. ಇದು ತಪ್ಪು, ಜೀವನ ಶೈಲಿ ಹೇಗಿರಬೇಕು, ಮಧುಮೇಹಕ್ಕೆ ಪರಿಹಾರ ವೇನು, ಬಾರದಂತೆ ನೋಡಿಕೊಳ್ಳುವುದು ಹೇಗೆ ಎಂಬಿವೇ ಮೊದಲಾದವನ್ನು ತಮ್ಮ ವೈದ್ಯಕೀಯ ವೃತ್ತಿಯ ಅನುಭವದ ಮೂಲಕ ವಿವರಿಸಿರುವುದಾಗಿ ಹೇಳಿದರು. ಡಾ. ಪ್ರದಾನ ಗುರುದತ್, ಡಾ.ಎಂ.ಜಿ.ಆರ್. ಅರಸ್ ಹಾಗೂ ಇನ್ನಿತರರು ಇದ್ದರು.

ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ಹಾಗೂ ಕರ್ನಾಟಕ ವಿದ್ಯುತ್ ಗ್ರಾಹಕರ ಸಂಘದ ವತಿಯಿಂದ

# ವಿದ್ಯುತ್ ಖಾಸಗೀಕರಣ ವಿರೋಧಿಸಿ ರೈತರ ಪ್ರತಿಭಟನೆ



ಮೈಸೂರು: ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿ ಕಂಪನಿಗಳಿಗೆ ವಹಿಸಬಾರದು, ಟಾಟಾ ಪವರ್ ಕಂಪನಿ ಸಲ್ಲಿಸಿರುವ ವಿದ್ಯುತ್ ವಿತರಣಾ ಪರವಾನಗಿ ಅರ್ಜಿ ತಿರಸ್ಕರಿಸಬೇಕು ಎಂದು ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ಹಾಗೂ ಕರ್ನಾಟಕ ವಿದ್ಯುತ್ ಗ್ರಾಹಕರ ಸಂಘದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು

ಕರ್ನಾಟಕದಲ್ಲಿ ಸರ್ಕಾರಿ ಸ್ವಾಮ್ಯದ ವಿದ್ಯುತ್ ವಿತರಣಾ ಕಂಪನಿಗಳು ಹಲವು ವರ್ಷಗಳಿಂದ ರೈತರು, ಗೃಹ ಬಳಕೆದಾರರು, ಕೈಗಾರಿಕೆಗಳು ಹಾಗೂ ವಿವಿಧ ವರ್ಗದ ಗ್ರಾಹಕರಿಗೆ ಸಮರ್ಪಕ ಸೇವೆ ನೀಡುತ್ತಿವೆ. ಟಾಟಾ ಪವರ್ ಕಂಪನಿ ರಾಜ್ಯದಲ್ಲಿ ವಿದ್ಯುತ್ ವಿತರಣಾ ಪರವಾನಗಿ ಪಡೆಯಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಅರ್ಜಿ ಸಲ್ಲಿಸಿರುವುದು ಸಾರ್ವಜನಿಕ ವಲಯದಲ್ಲಿ ಆತಂಕಕ್ಕೆ ಕಾರಣ. ವಿದ್ಯುತ್ ವಿತರಣಾ ಕ್ಷೇತ್ರ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ಅತ್ಯಗತ್ಯ ಸೇವೆ. ಖಾಸಗಿ ಕಂಪನಿಗಳಿಗೆ ಅವಕಾಶ ನೀಡುವುದರಿಂದ ಭವಿಷ್ಯದಲ್ಲಿ ಗ್ರಾಹಕರ ಹಿತಾಸಕ್ತಿ, ರೈತರಿಗೆ ದೊರೆಯುತ್ತಿರುವ ಸಬ್ಸಿಡಿ ಸೌಲಭ್ಯಗಳು, ಸರ್ಕಾರದ ಜನಪರ ಯೋಜನೆಗಳು ಹಾಗೂ ನೌಕರರ ಉದ್ಯೋಗ ಭದ್ರತೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಾಧ್ಯತೆಗಳಿವೆ ಎಂದು ದೂರಿದರು.

ವಿದ್ಯುತ್ ವಿತರಣಾ ವ್ಯವಸ್ಥೆಯ ಮೇಲೆ ಸರ್ಕಾರದ ನೇರ ನಿಯಂತ್ರಣ ಮತ್ತು ಮೇಲ್ವಿಚಾರಣೆ ಕಡಿಮೆಯಾಗುವ ಆತಂಕವೂ ಇದೆ. ರಾಜ್ಯದ ಜನತೆಗೆ ಸಮಾನ ಹಾಗೂ ಕೈಗೆಟುಕುವ ದರದಲ್ಲಿ ವಿದ್ಯುತ್ ಸೇವೆ ನೀಡುವುದು ಸರ್ಕಾರದ ಪ್ರಮುಖ ಜವಾಬ್ದಾರಿ. ಹೀಗಾಗಿ ಸಾರ್ವಜನಿಕ ವಲಯದಲ್ಲಿಯೇ ವಿದ್ಯುತ್ ವಿತರಣಾ ವ್ಯವಸ್ಥೆ ಮುಂದುವರಿಯಬೇಕು ಎಂದು ಒತ್ತಾಯಿಸಿದರು ವಿದ್ಯುತ್ ಕಾಯ್ದೆ-2003ರ ಸೆಕ್ಷನ್ 108ರ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರ ಬಳಸಿಕೊಂಡು, ಟಾಟಾ ಪವರ್ ಕಂಪನಿ ಸಲ್ಲಿಸಿರುವ ವಿದ್ಯುತ್ ವಿತರಣಾ ಪರವಾನಗಿ ಅರ್ಜಿ ತಿರಸ್ಕರಿಸಬೇಕು. ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಖಾಸಗಿ ವಿದ್ಯುತ್ ವಿತರಣಾ ವ್ಯವಸ್ಥೆಗೆ ಅವಕಾಶ ನೀಡಬಾರದು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ಜಿಲ್ಲಾಧ್ಯಕ್ಷ ಎಚ್.ಎಂ.ಬಸವರಾಜು, ಕಾರ್ಯದರ್ಶಿ ಪುನೀತ್, ಸಂಚಾಲಕ ಯಶೋಧರ್, ಸದಸ್ಯರಾದ ಶಿವಾನಂದ್, ಎಂ.ಶಶಿಧರ್ ಸೇರಿ ಹಲವರು ಭಾಗವಹಿಸಿದ್ದರು.

# ಮಾಪಿಳೆತೋಡು ಭಾಗಕ್ಕೆ ಶಾಸಕರ ಭೇಟಿ



ಮಡಿಕೇರಿ:-ಪೊನ್ನಂಪೇಟೆ ತಾಲೂಕಿನ ಮಾಪಿಳೆತೋಡು ಭಾಗಕ್ಕೆ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರು ಶುಕ್ರವಾರ ಭೇಟಿ ನೀಡಿದರು.

ಮಾಪಿಳೆತೋಡುವಿನಿಂದ ಹುದಿಕೇರಿಗೆ ತೆರಳುವ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ ನೆರವೇರಿಸಿದ ಶಾಸಕರು ಸುಮಾರು 2.80 ಕೋಟಿ ವೆಚ್ಚದ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಮುಖರಾದ ಮಿದೇರಿರ ನವೀನ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷರು ಕಾಳಿಮಾಡ ಪ್ರಶಾಂತ್, ಟಾಟು ಮೊಣ್ಣಪ್ಪ, ಚಂಗುಲಂಡ ಸೂರಜ್, ಹಿರಿಯರು ಮುಕಳೇರ ಕುಶಾಲಪ್ಪ, ತಿತೀರ ಮಂದಣ್ಣ, ಸಾದಲಿ, ಮಲ್ಲಂಡ ಧ್ಯಾನ್ ದೇವಯ್ಯ, ಕೊಣ್ಣಿಯಂಡ ಸೋಮಣ್ಣ, ಮಚ್ಚಾಮಾಡ ಮನು, ಅಣ್ಣಳ್ಳಮಾಡ ಹರೀಶ್, ರವಿ, ಗಿರೀಶ್, ಅಜ್ಜಿಕುಟ್ಟಿರ ಪೊನ್ನಪ್ಪ, ಅಜ್ಜಿಕುಟ್ಟಿರ ಗಿರೀಶ್, ಕೇಚಮಾಡ ಸಿದ್ದು ನಾಚಪ್ಪ, ಕುಂಡಚ್ಚಿರ ಮಂಜು ದೇವಯ್ಯ, ತಾಣಚ್ಚಿರ ನಿಖಿಲ್ ಸೋಮಣ್ಣ, ಮದನ್ ಮಂದಣ್ಣ, ರೀಕ್ಷಿತ್ ಕಾರ್ಯಪ್ಪ, ಬಿಪಿನ್, ವಚನ್ ನಾಚಪ್ಪ ಇತರರು ಉಪಸ್ಥಿತರಿದ್ದರು.

## ಸಂಕ್ಷಿಪ್ತ ಸುದ್ದಿ

### ಮಂಡ್ಯದಲ್ಲಿ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮ

**ಮಂಡ್ಯ:** ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಪುಸ್ತಕ ಮನೆ ಪದ್ಮಶ್ರೀ ಪುರಸ್ಕೃತ ಎಂ. ಅಂಕೇಗೌಡ ರವರು ಸಾಧಕರೊಂದಿಗೆ ಸಂವಾದ ಕಾರ್ಯಕ್ರಮ ವನ್ನು ಜೂನ್ 20 ರಂದು ಮಧ್ಯಾಹ್ನ 3.00 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಮಂಡ್ಯ ವಿಶ್ವವಿದ್ಯಾಲಯದ ಕೃಷ್ಣಕುಮಾರ್ ರವರು ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಮೈಸೂರು ವಿಭಾಗದ ಕನ್ನಡ ಮತ್ತು ಸಂಸ್ಕೃತಿಕ ಇಲಾಖೆಯ ಜಂಟಿ ನಿರ್ದೇಶಕರಾದ ವಿ. ಎನ್. ಮಲ್ಲಿಕಾರ್ಜುನಸ್ವಾಮಿ ರವರು ಸಂವಾದದ ಗೌರವ ಉಪಸ್ಥಿತಿ ವಹಿಸಲಿದ್ದಾರೆ.

ಸಂವಾದಕರಾಗಿ ಎಸ್. ಬಿ. ಎಜುಕೇಷನ್ ಟ್ರಸ್ಟ್ ನ ಕಾರ್ಯದರ್ಶಿಗಳು ಹಾಗೂ ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷರಾದ ಮೀರಾಶಿವಲಿಂಗಯ್ಯ, ಮದ್ದೂರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ನ ಮಾಜಿ ಅಧ್ಯಕ್ಷರಾದ ಚನ್ನಸಂದ್ರ ಮಹದೇವು, ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾದ ಸಿ. ಎನ್. ಮಂಜೇಶ್, ಪಿ. ಇ. ಎಸ್. ಪದವಿ ಕಾಲೇಜು ಉಪನ್ಯಾಸಕರಾದ ಡಾ. ಎಂ. ಎಸ್. ಅನಿತಾ ಮಂಗಲ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ವಿ. ಹರ್ಷ, ಜಿಲ್ಲಾ ಜಾಗೃತಿ ಸಮಿತಿ ಕನ್ನಡ ಪುಸ್ತಕ ಪ್ರಾಧಿಕಾರ ಸಂಚಾಲಕರಾದ ಮಹದೇವು ಕಾರಸವಾಡಿ, ಕನ್ನಡ ಸೇನೆ ಜಿಲ್ಲಾಧ್ಯಕ್ಷರಾದ ಮಂಜುನಾಥ್ ಹೆಚ್. ಸಿ., ಕನ್ನಡ ಜಾಗೃತಿ ಸಮಿತಿ ಸದಸ್ಯರಾದ ಕೃಷ್ಣೆಗೌಡ ಕೀಲಾರ,ಸಾಹಿತಿಗಳು ಹಾಗೂ ಪತ್ರಕರ್ತರಾದ ಚಂದ್ರಶೇಖರ್ ದ. ಕೋ. ಹಳ್ಳಿ, ಪಾಂಡವಪುರ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರಾದ ಧನ್ಯಕುಮಾರ್ ಹೆಚ್. ಆರ್.,ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ವೇದಿಕೆಯ ಅಧ್ಯಕ್ಷರಾದ ಸಂದೇಶ್ ಎಲ್., ಜೈ ಕರ್ನಾಟಕ ಪರಿಷತ್ ಅಧ್ಯಕ್ಷರಾದ ಎಸ್. ನಾರಾಯಣ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಬಿ. ವಿ. ನಂದೀಶ್ ರವರು ಆಗಮಿಸಲಿದ್ದಾರೆ.

### ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿಗೆ ಮಕ್ಕಳಿಂದ ಅರ್ಜಿ ಆಹ್ವಾನ

**ರಾಮನಗರ:** 2026–27ನೇ ಸಾಲಿನಲ್ಲಿ 5 ರಿಂದ 18 ವರ್ಷ ವಯೋಮಿತಿ ಒಳಗಿನ ಮಕ್ಕಳಿಗೆ ನಾವಿನ್ಯತೆ, ತಾರ್ಕಿಕ ಸಾಧನೆಗಳು, ಕ್ರೀಡೆ, ಕಲೆ, ಸಾಂಸ್ಕೃತಿಕ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣಾ ಪ್ರತಿಭೆ ಇರುವ ಮಕ್ಕಳಿಗೆ ಹೋಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ನೀಡಲು ಬೆಂಗಳೂರು ದಕ್ಷಿಣ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದ ಮಕ್ಕಳಿಗೆ 10 ಸಾವಿರ ರೂ.ಗಳನ್ನು ಮಕ್ಕಳ ಬ್ಯಾಂಕ್ ಖಾತೆಗೆ ನೇರ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ನೀಡಲಾಗುವುದು. ಈ ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ 8 ಮಕ್ಕಳಿಗೆ ಪ್ರಶಸ್ತಿ ನೀಡಲಾಗುವುದು.

ಅರ್ಜಿ ಹಾಗೂ ನಿಗಧಿತ ದಾಖಲೆಗಳನ್ನು ದ್ವಿಪ್ರತಿಯಲ್ಲಿ 2026ರ ಜುಲೈ 18 ರೊಳಗೆ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಠಡಿ ಸಂಖ್ಯೆ: 203, ಎರಡನೇ ಮಹಡಿ, ಜಿಲ್ಲಾ ಪಂಚಾಯತ್ ಭವನ, ಬೆಂಗಳೂರು ದಕ್ಷಿಣ ಜಿಲ್ಲೆ. ಈ ವಿಳಾಸಕ್ಕೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ.ಸಂಖ್ಯೆ: 080–29524996, 8147208605, 9980031129 ಅಥವಾ 7760892291 ಅನ್ನು ಸಂಪರ್ಕಿಸುವಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


### ವಿದ್ಯುತ್ ವ್ಯತ್ಯಯ

**ರಾಮನಗರ:** 66 ಕೆವಿ ಅಕ್ಕೂರುಮೊಳೆ ವಿದ್ಯುತ್ ಉಪಕೇಂದ್ರದ ಮಾರ್ಗದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದೆ. ಆದ ಕಾರಣ ಅಕ್ಕೂರುಮೊಳೆ, ಸಂತೆಮೊಗೇನಹಳ್ಳಿ, ಅಕ್ಕೂರು, ಗರಕಹಳ್ಳಿ, ಸುಳ್ಳೇರಿ, ಮಳೂರುಪಟ್ಟಣ, ಚಕ್ಕೆರೆ, ಚಕ್ಕಲೂರು, ಕೃಷ್ಣಾಪುರ, ತೂಬಿನಕೆರೆ, ಎ.ವಿ.ಹಳ್ಳಿ, ಕೊಂಡಾಪುರ, ಸೋಗಾಲ, ಬಾಣಗಹಳ್ಳಿ, ಮಾದಾಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಜೂ. 20ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂನ ರಾಮನಗರ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಾಮೀಣ ವಿದ್ಯಾರ್ಥಿಗಳಿಗೆ ಅಂತರಿಕ್ಷ ವಿಜ್ಞಾನದ ಪರಿಚಯ

## ಪಾಂಡವಪುರದಲ್ಲಿ ಉಚಿತ ದೂರದರ್ಶಕ ನಿರ್ಮಾಣ ತರಬೇತಿ ಶಿಬಿರ

**ಮಂಡ್ಯ:** ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ಅಂತರಿಕ್ಷ ಅಧ್ಯಯನದ ಬಗ್ಗೆ ಆಸಕ್ತಿ ಬೆಳೆಸುವ ಉದ್ದೇಶದಿಂದ, ಪುಟ್ಟಣ್ಣಯ್ಯ ಫೌಂಡೇಶನ್, ಅಧ್ಯಾಪನ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ಹಾಗೂ ಆರ್ಯಭಟ ಪ್ಲಾನೆಟೋರಿಯಂ (ನೋಂದಾಯಿತ ಸ್ಪೇಸ್ ಟ್ಯೂಟರ್) ಇವರ ಸಂಯುಕ್ತ ಆಶ್ರಯದಲ್ಲಿ ಪಾಂಡವಪುರದಲ್ಲಿ ಎರಡು ದಿನಗಳ ಉಚಿತ ದೂರದರ್ಶಕ (Telescope) ನಿರ್ಮಾಣ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ.



ಜೂನ್ 19 ಮತ್ತು 20ರಂದು ಪಾಂಡವಪುರದ TAPMS ಸಭಾಂಗಣದಲ್ಲಿ ನಡೆಯಲಿರುವ ಈ ವಿಶೇಷ ಶಿಬಿರದಲ್ಲಿ 8, 9 ಹಾಗೂ 10ನೇ ತರಗತಿಯ 100 ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಶಿಬಿರದ ಪ್ರಮುಖ ಉದ್ದೇಶ ವಿದ್ಯಾರ್ಥಿಗಳು ಸ್ವತಃ ತಮ್ಮ ಕೈಯಿಂದ ದೂರದರ್ಶಕವನ್ನು ನಿರ್ಮಿಸುವ ವಿಧಾನವನ್ನು ಕಲಿಯುವುದು ಹಾಗೂ ಅದರ ಕಾರ್ಯವಿಧಾನವನ್ನು ಅರ್ಥಮಾಡಿಕೊಳ್ಳುವಂತೆ ಮಾಡುವುದು. ಇದರ ಮೂಲಕ ಅಂತರಿಕ್ಷ ವಿಜ್ಞಾನ (Space Science) ಕ್ಷೇತ್ರದ ಬಗ್ಗೆ ಕುತೂಹಲ ಮೂಡಿಸಿ, ವೈಜ್ಞಾನಿಕ ಮನೋಭಾವ ಮತ್ತು ಸಂಶೋಧನಾ ಚಿಂತನೆಗೆ ಉತ್ತೇಜನ ನೀಡುವುದು ಆಯೋಜಕರ ಮುಖ್ಯ ಆಶಯವಾಗಿದೆ.

ಎರಡು ದಿನಗಳ ತರಬೇತಿ ಅವಧಿಯಲ್ಲಿ ಅಂತರಿಕ್ಷ ವಿಜ್ಞಾನ ಕ್ಷೇತ್ರದ ತಜ್ಞರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದು, ದೂರದರ್ಶಕದ ವಿವಿಧ ಭಾಗಗಳು, ಅವುಗಳ ಕಾರ್ಯವಿಧಾನ, ಆಕಾಶ ವೀಕ್ಷಣೆಯ ತಂತ್ರಗಳು ಹಾಗೂ ಖಗೋಳ ವಿಜ್ಞಾನದ ಮೂಲಭೂತ ಅಂಶಗಳ ಕುರಿತು ಪ್ರಾಯೋಗಿಕ ಮಾಹಿತಿ ನೀಡಲಿದ್ದಾರೆ.

ವಿದ್ಯಾರ್ಥಿಗಳು ಸ್ವತಃ ದೂರದರ್ಶಕ ನಿರ್ಮಾಣದಲ್ಲಿ ಭಾಗವಹಿಸುವುದರ ಜೊತೆಗೆ ಆಕಾಶ ವೀಕ್ಷಣೆಯ ನೇರ ಅನುಭವವನ್ನೂ ಪಡೆಯಲಿದ್ದಾರೆ. ಶಿಬಿರದಲ್ಲಿ ವಿದ್ಯಾರ್ಥಿಗಳು ತಯಾರಿಸುವ ದೂರದರ್ಶಕಗಳನ್ನು ನಂತರ ಆಯಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಹಸ್ತಾಂತರಿಸಲಾಗುವುದು. ಈ ಮೂಲಕ ಶಾಲಾ ಮಟ್ಟದಲ್ಲಿಯೇ ವಿಜ್ಞಾನ ಅಧ್ಯಯನಕ್ಕೆ ಪೂರಕವಾದ ಶೈಕ್ಷಣಿಕ ಸಂಪನ್ಮೂಲವನ್ನು ಒದಗಿಸುವ ಮಹತ್ವದ ಪ್ರಯತ್ನ ನಡೆಯುತ್ತಿದೆ.

ದೂರದರ್ಶಕ ತಯಾರಿಕೆಗೆ ಸಂಬಂಧಿಸಿದ ಸಂಪೂರ್ಣ ವೆಚ್ಚವನ್ನು ಪುಟ್ಟಣ್ಣಯ್ಯ ಫೌಂಡೇಶನ್ ವಹಿಸಿಕೊಂಡಿರುವುದು ವಿಶೇಷವಾಗಿದೆ.

ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ ಅವರು ಗ್ರಾಮೀಣ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಹೊಸ ಆಯಾಮ ನೀಡುವ ದೃಷ್ಟಿಯಿಂದ ಈ ಕಾರ್ಯಕ್ರಮಕ್ಕೆ ಬೆಂಬಲ ನೀಡುತ್ತಿದ್ದು, ಪುಟ್ಟಣ್ಣಯ್ಯ ಫೌಂಡೇಶನ್ ಹಾಗೂ ಅಧ್ಯಾಪನ ಟ್ರಸ್ಟ್ ಜೊತೆಯಲ್ಲಿ ಈ ವಿನೂತನ ಶೈಕ್ಷಣಿಕ ಯೋಜನೆಯನ್ನು ಜಾರಿಗೊಳಿಸುತ್ತಿದ್ದಾರೆ.

ಈ ಕಾರ್ಯಕ್ರಮವು ಗ್ರಾಮೀಣ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಬಗ್ಗೆ ಆಸಕ್ತಿ ಹೆಚ್ಚಿಸುವುದರ ಜೊತೆಗೆ ಭವಿಷ್ಯದಲ್ಲಿ ಸಂಶೋಧನೆ, ನಾವೀನ್ಯತೆ ಹಾಗೂ ಅಂತರಿಕ್ಷ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಲು ಪ್ರೇರಣೆಯಾಗಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದವರು: ಶ್ರೀಮತಿ ದಿವ್ಯಶ್ರೀ ಎಂ.ಜಿ., ವ್ಯವಸ್ಥಾಪಕ ನಿರ್ದೇಶಕಿ ಹಾಗೂ ಸಿಇಒ, ಅಧ್ಯಾಪನ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ಪ್ರವೀಣ್ ಕುಮಾರ್ ಜಿ.ಟಿ., ಕಾರ್ಯದರ್ಶಿ, ಅಧ್ಯಾಪನ ಟ್ರಸ್ಟ್ ಪ್ರೀತಿ ಮಹದೇವ್, ಪ್ರತಿನಿಧಿ, ಪುಟ್ಟಣ್ಣಯ್ಯ ಹಾಜರಿದ್ದರು.


# ವಿಶ್ವಕರ್ಮ ನೌಕರರ ಸೇವಾ ಬಳಗದಿಂದ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಕಾರ್ಯಕ್ರಮ

ಮಂಡ್ಯ: ವಿಶ್ವಕರ್ಮ ನೌಕರರ ಸೇವಾ ಬಳಗದ ವತಿಯಿಂದ 5ನೇ ವರ್ಷದ ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತ ನೌಕರರ ಅಭಿನಂದನಾ ಕಾರ್ಯಕ್ರಮವನ್ನು ಜು.12ರಂದು ಬೆಳಗ್ಗೆ 10 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಆಯೋಜಿಸಲಾಗಿದೆ ಎಂದು ಬಳಗದ ಅಧ್ಯಕ್ಷ ಅರಕೇಶ್ವರ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು ಶೆ.80ಕ್ಕಿಂತಲೂ ಹೆಚ್ಚಿನ ಅಂಕಪಡೆದ ಜಿಲ್ಲೆಯ ಎಲ್ಲ ತಾಲೂಕಿನ ವಿಶ್ವಕರ್ಮ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಫಲಕದೊಂದಿಗೆ ತಲಾ 1000 ರೂ.ಗಳ ನಗದು ನೀಡಲಾಗುವುದು ಎಂದರು.

ಸಮುದಾಯದ ನಿವೃತ್ತಿ ಹೊಂದಿದ ನೌಕರರು ಹಾಗೂ, ಈಗಾಗಲೇ 75 ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ನೊಂದಾಯಿಸಿಕೊಂಡಿದ್ದಾರೆ. ನೊಂದಾಯಿಸಿಕೊಳ್ಳದ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಜರಾಕ್ಸ್ ಪ್ರತಿಯೊಂದಿಗೆ 2 ಭಾವಚಿತ್ರಗಳನ್ನು ವಾಟ್ಸಪ್ ಮೂಲಕ ಸಲ್ಲಿಸಿ ಜೂ.25ರೊಳಗೆ ನೊಂದಾಯಿಸಿಕೊಳ್ಳುವಂತೆ ಹೇಳಿದರು.

ನೊಂದಾಯಿಸಿಕೊಳ್ಳಲು ಬಳಗದ ಅಧ್ಯಕ್ಷ ಅರಕೇಶ್ವರ್–9972848488, ಪ್ರಧಾನ ಕಾರ್ಯದರ್ಶಿ ಎಲ್.ಧನರಾಜು–9945154363, ಖಜಾಂಚಿ ಶ್ರೀನಿವಾಸಚಾರಿ–9686838220, ಸದಸ್ಯ ದೇವರಾಜು–9900513959 ಸಂಖ್ಯೆಗೆ ವಾಟ್ಸ್‌ಪ್‌ಗೆ ದಾಖಲೆ ಸಲ್ಲಿಸುವಂತೆ ಮನವಿ ಮಾಡಿದರು.

ಗೋಷ್ಠಿಯಲ್ಲಿ ಬಳಗದ ರಾಜ್ಯ ನಿರ್ದೇಶಕ ಸುದರ್ಶನ್, ಮುಖಂಡರಾದ ರಾಜು, ವಾಸು ಇದ್ದರು.






# ಯೂನಿಯನ್ ಬ್ಯಾಂಕ್ ಮ್ಯಾನೇಜರ್‌ಗೆ ಗೌರವ ಸಮಾರಂಭ

**ಕೆ.ಆರ್.ನಗರ:** ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಮ್ಯಾನೇಜರ್ ಆಗಿ ಸೇವೆ ಸಲ್ಲಿಸಿ ಇದೀಗ ಮೈಸೂರುಕ್ಕೆ ವರ್ಗಾವಣೆಗೊಂಡಿರುವ ಸ್ವರೂಪ್ ಅವರಿಗೆ ಗೌರವ ಸಮಾರಂಭವನ್ನು ಆಯೋಜಿಸಲಾಯಿತು. ಗ್ರಾಮೀಣ ನಿಧಿ ಸಹಕಾರ ಸಂಘದ ಅಧ್ಯಕ್ಷರಾದ ಕೆ.ಆರ್. ಶ್ಯಾಮ್ ಸುಂದರ್ ಅವರು ಸ್ವರೂಪ್ ಅವರನ್ನು ಸನ್ಮಾನಿಸಿ, ಅವರ ಸೇವೆಯನ್ನು ಪ್ರಶಂಸಿಸಿದರು. ಈ ಸಂದರ್ಭದಲ್ಲಿ ನೂತನ ಮ್ಯಾನೇಜರ್ ದಯಾಮತಿ, ಬ್ಯಾಂಕ್ ಸಿಬ್ಬಂದಿಗಳಾದ ಸುರೇಶ್, ಸ್ವಾತಿ, ದಯಾನಂದ್, ಮಹದೇವಮ್ಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಗ್ನಿ ಸುರಕ್ಷತೆ ಇಲ್ಲದೆ ತಾತ್ಕಾಲಿಕ ಕಟ್ಟಡದಲ್ಲಿ ರೆಸ್ಟೋರೆಂಟ್ ನಡೆಸುತ್ತಿದ್ದರೆ ತೆರವುಗೊಳಿಸಿ: ಲಕ್ಷ್ಮೀಕಾಂತ ರೆಡ್ಡಿ ಜಿ

**ಮೈಸೂರು:** ಇತ್ತೀಚೆಗೆ ದಟ್ಟಗಳ್ಳಿಯ ಬಳಿ ರೆಸ್ಟೋರೆಂಟ್ ನಲ್ಲಿ ನಡೆದ ಅಗ್ನಿ ದುರಂತವನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದ್ದು, ಜಿಲ್ಲೆಯಲ್ಲಿ ಎರಡು ಅಥವಾ ಮೂರನೇ ಅಂತಸ್ತಿನಲ್ಲಿ ತಾತ್ಕಾಲಿಕವಾಗಿ ಕಟ್ಟಡವನ್ನು ನಿರ್ಮಿಸಿಕೊಂಡು ಅಗ್ನಿ ಸುರಕ್ಷತೆ ಕ್ರಮ ಕೈಗೊಳ್ಳದೇ ಬಾರ್ ಅಂಡ್ ರೆಸ್ಟೋರೆಂಟ್ ನಡೆಸುತ್ತಿರುವವರ ವಿರುದ್ಧ ಕ್ರಮ ಕೈಗೊಂಡು ಒಂದು ವಾರದೊಳಗೆ ವರದಿ ನೀಡುವಂತೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಜಿ ಅವರು ತಿಳಿಸಿದರು.



ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡಸಿ ಮಾತನಾಡಿದರು. ಅಗ್ನಿ ದುರಂತಗಳು ಹೇಳಿ ಬರುವುದಿಲ್ಲ. ರೂಫ್ ಟಾಪ್ ಪಬ್, ರೆಸ್ಟೋರೆಂಟ್ ಗಳಲ್ಲಿ ಹುಲ್ಲು, ಅಲಂಕಾರಿಕ ವಿದ್ಯುತ್ ದೀಪ ಬಳಸುವುದು ಹಾಗೂ ಯಾವುದೇ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಮೈಸೂರು ಮಹಾನಗರ ಪಾಲಿಕೆ ವಲಯ ಅಧಿಕಾರಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಯ ಒಂದು ವಾರದೊಳಗೆ ಪರಿಶೀಲನೆ ನಡೆಸಿ ಟ್ರೇಡ್ ಲೈಸೆನ್ಸ್ ರದ್ದು ಪಡಿಸಲು ಕ್ರಮ ವಹಿಸಬೇಕು ಎಂದರು. ಅಬಕಾರಿ ಇಲಾಖೆಯಿಂದ ಸಿ.ಎಲ್–7, ಸಿ.ಎಲ್–2, ಸಿ.ಎಲ್–5 ಯಾವುದೇ ಪರವಾನಗಿ ಪಡೆಯದೇ ಮದ್ಯ ಮಾರಾಟ ಮಾಡುವುದು ಪರವಾನಗಿ ಪಡೆದ ರೀತಿ ಕಾರ್ಯ ನಿರ್ವಹಿಸದೇ ಇರುವ ಬಾರ್, ಪಬ್ ಗಳು ಮೈಸೂರು ನಗರ ಹಾಗೂ ನಗರದ ಹೊರವಲಯಗಳಲ್ಲಿವೆ, ಅಬಕಾರಿ ಇಲಾಖೆ ಅವರು ನಿರಂತರವಾಗಿ ತಪಾಸಣೆ ನಡೆಸಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು. ಲೋಪ ಕಂಡುಬಂದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅಬಕಾರಿ ಇಲಾಖೆಯ ನಿಯಮದ ಪ್ರಕಾರ ಪರವಾನಗಿ ಪಡೆಯದೇ ಬಾರ್ ಅಂಡ್ ರೆಸ್ಟೋರೆಂಟ್ ಗಳು ಆನ್ ಲೈನ್ ನಲ್ಲೇ ಮದ್ಯ ಮಾರಾಟ ಕುರಿತು ಜಾಹೀರಾತು ನೀಡುವುದು ಹಾಗೂ ಜಾಹೀರಾತು ಫಲಕಗಳಲ್ಲಿ ಪ್ರಚಾರ ನೀಡುತ್ತಿರುವುದು ಕಂಡುಬಂದಿದ್ದು, ಅಧಿಕಾರಿಗಳು ಕೂಡಲೇ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದರು.

# ಬ್ರಾಹ್ಮಿ ಮುಹೂರ್ತ...ಎಂಬ ಶುಭ ಸಮಯ



| ವೀಣಾ ಹೇಮಂತ್‌ಗೌಡ ಪಾಟೀಲ್

ಸಾವಿರಾರು ವರ್ಷಗಳಿಂದ ನಮ್ಮ ಭರತ ಭೂಮಿಯಲ್ಲಿ ಋಷಿ ಮುನಿಗಳು,ಸಂತರು ಹಾಗೂ,ಸಾಧಕರು ಬ್ರಾಹ್ಮಿ ಮುಹೂರ್ತದಲ್ಲಿ ಎದ್ದು ತಮ್ಮ ದಿನವನ್ನು ಆರಂಭಿಸುತ್ತಿದ್ದರು. ಹಾಗೆ ಎದ್ದು ತಮ್ಮ ದೈನಂದಿನ ಚಟುವಟಿಕೆಗಳನ್ನು ಮಾಡುವ ಮೂಲಕ ಮಾನಸಿಕ,ದೈಹಿಕ ಸ್ವಾಸ್ಥ್ಯವನ್ನು ಹಾಗೂ ನೆಮ್ಮದಿಯನ್ನು ಕಾಯ್ದುಕೊಳ್ಳುತ್ತಿದ್ದರು

ಮುಂಜಾನೆ ಬ್ರಾಹ್ಮಿ ಮುಹೂರ್ತದಲ್ಲಿ ಏಳಬೇಕು ಎಂಬ ನಮ್ಮ ಸನಾತನ ಪರಂಪರೆಯ ಹಿಂದಿನ ಮಹತ್ವದ ಕುರಿತು ಅಷ್ಟಾಗಿ ನಮಗೆ ಗೊತ್ತಿಲ್ಲ. ಅತ್ಯಂತ ವಿಶೇಷವಾದ ಈ ಬ್ರಾಹ್ಮಿಮುಹೂರ್ತವನ್ನು ನಮ್ಮ ಸನಾತನ ಧರ್ಮವು ಪವಿತ್ರ ಹಾಗೂ ಶಕ್ತಿಶಾಲಿ ಸಮಯ ಎಂದು ಗೌರವಿಸುತ್ತದೆ. ಬ್ರಾಹ್ಮಿ ಮುಹೂರ್ತ, ಬ್ರಹ್ಮ ಮುಹೂರ್ತ ಎಂದೆಲ್ಲ ಕರೆಯಲ್ಪಡುವ ಈ ಸೃಷ್ಟಿ ಸಮಯವು ಮುಂಜಾನೆಯ ಸೂರ್ಯೋದಯಕ್ಕೆ

1 ಘಂಟೆ 36 ನಿಮಿಷಗಳ ಸಮಯದ ಮುನ್ನ ಆರಂಭವಾಗುತ್ತದೆ.

ಉದಾಹರಣೆಗೆ ಸೂರ್ಯೋದಯ ಆರು ಮೂವತ್ತಕ್ಕೆ ಆಗುತ್ತದೆ ಎಂದಾದರೆ ಬ್ರಾಹ್ಮಿ ಮುಹೂರ್ತವು ನಾಲ್ಕು ಗಂಟೆ 54 ನಿಮಿಷಕ್ಕೆ ಆರಂಭವಾಗುತ್ತದೆ.

48 ನಿಮಿಷಗಳ ಕಾಲ ಈ ಮುಹೂರ್ತ ಇರುತ್ತದೆ. ಋತುಗಳು ಹಾಗೂ ಕಾಲಮಾನಕ್ಕೆ ಅನುಸಾರವಾಗಿ ಈ ಸಮಯದಲ್ಲಿ ಬದಲಾವಣೆ ಆಗುತ್ತದೆ ಆದರೆ ಸಾಮಾನ್ಯವಾಗಿ ಮೂರು ಮೂವತ್ತರಿಂದ ಐದು ಮೂವತ್ತರವರೆಗಿನ ಸಮಯವನ್ನು ಬ್ರಾಹ್ಮಿ ಮುಹೂರ್ತ ಎಂದು ಹೇಳಲಾಗುತ್ತದೆ.



ಬ್ರಾಹ್ಮಿ ಮುಹೂರ್ತವು ಸಾಧು, ಸಂತ ಹಾಗೂ ಸಾಧಕರಿಗೆ ಮಾತ್ರವಲ್ಲದೇ ವಿದ್ಯಾರ್ಥಿಗಳಿಗೂ ಕೂಡ ಅತ್ಯಂತ ಪ್ರಶಸ್ತ ಸಮಯವಾಗಿದ್ದು ಈ ಸಮಯದಲ್ಲಿ ಧ್ಯಾನ, ಜಪ–ತಪ, ಕಲಿಕೆ, ಓದು ಅಧ್ಯಯನ ಯೋಗ, ಪ್ರಾರ್ಥನೆ ಹಾಗೂ ಆತ್ಮ ಪರಿಶೋಧನೆಯ ಸಮಯ ಎಂದು ನಂಬಲಾಗಿದೆ.

ಬ್ರಾಹ್ಮೀ ಮುಹೂರ್ತವೇ ಏಕೆ ?

ಈ ಸಮಯದಲ್ಲಿ ಜಗತ್ತು ಸ್ಥಿರತೆ ಹಾಗೂ ಶಾಂತತೆಯನ್ನು ಹೊಂದಿರುತ್ತದೆ. ಯಾವುದೇ ರೀತಿಯ ಚಿತ್ತ ಚಂಚಲತೆಗೆ ಅವಕಾಶ ಇರುವುದಿಲ್ಲ ಪ್ರಕೃತಿ ಕೂಡ ನಿಧಾನವಾಗಿ ಕತ್ತಲೆಯಿಂದ ಬೆಳಕಿನತ್ತ ಸಾಗುತ್ತಿರುತ್ತದೆ.

ಸನಾತನ ಜ್ಞಾನಿಗಳು ಹಾಗೂ ಆಯುರ್ವೇದ ತಜ್ಞರು ಹೇಳುವ ಪ್ರಕಾರ ಈ ಸಮಯದಲ್ಲಿ ವ್ಯಕ್ತಿಯಲ್ಲಿ ಸ್ಪಷ್ಟತೆ, ನೆನಪಿನ ಶಕ್ತಿ, ಆಧ್ಯಾತ್ಮಿಕ ಅರಿವು ಹಾಗೂ ನಿಖರತೆಗಳು ಸಹಜವಾಗಿಯೇ ಹೆಚ್ಚಾಗಿರುತ್ತದೆ. ವಿಶೇಷವೆಂದರೆ ಆಧುನಿಕ ವಿಜ್ಞಾನಿಗಳು ಕೂಡ ಈ ಮಾತಿಗೆ ತಮ್ಮ ಸಹಮತಿಯನ್ನು ವ್ಯಕ್ತಪಡಿಸುತ್ತಾರೆ

ಮುಂಜಾನೆಯ ನಸು ಬೆಳಕಿನ ಅವಧಿಯು ನಮ್ಮ ದೈಹಿಕ ಅವಸ್ಥೆಯನ್ನು ಪ್ರಾಕೃತಿಕ ಜೈವಿಕ ಗಡಿಯಾರದ (ಸರ್ಕಾಡಿಯನ್ ಅವಸ್ಥೆಯ) ಜೊತೆಗೆ ಏಕತ್ರಗೊಳಿಸುತ್ತದೆ. ಇದು ನಮ್ಮ ದೇಹದ ಹಾರ್ಮೋನುಗಳ ಸಮತೋಲನಕ್ಕೆ ಹಾಗೂ ಮಾನಸಿಕ ಸ್ವಾಸ್ಥ್ಯಕ್ಕೆ ಅನುವು ಮಾಡಿಕೊಡುತ್ತದೆ.

ಈ ಸಮಯದಲ್ಲಿ ಯಾವುದೇ ರೀತಿಯ ಚಿತ್ತ ಕದಡುವ ಚಟುವಟಿಕೆಗಳು ಇರುವುದಿಲ್ಲ ಆದ್ದರಿಂದ ಏಕಾಗ್ರತೆ ಸಾಧಿಸಲು ಸಾಧ್ಯವಾಗುತ್ತದೆ. ಆಧ್ಯಾತ್ಮಿಕ ಬೆಳವಣಿಗೆಯು ಒಳ್ಳೆಯ ಆರೋಗ್ಯ, ಉತ್ತಮ ಉತ್ಪಾದಕತೆ ಹಾಗೂ ಮಾನಸಿಕ ಸಂತೃಪ್ತಿಯನ್ನು ಹೆಚ್ಚಿಸುತ್ತದೆ. ಈಗಲೂ ಕೂಡ ನಮ್ಮ ಹಿಂದಿನ ಋಷಿ ಮುನಿಗಳ ಜಾಣ್ಮೆ, ಹಾಗೂ ಜ್ಞಾನ ಸಿದ್ದಿಗಳು ನಮ್ಮನ್ನು ಚಕಿತಗೊಳಿಸಲು ಕಾರಣ ಅವರ ದೈನಂದಿನ ರೂಢಿಗಳು.


ಇಡೀ ಜಗತ್ತು ಕಣ್ತೆರೆಯುವ ಮುನ್ನ, ದೈನಂದಿನ ಚಟುವಟಿಕೆಗಳು ಆರಂಭವಾಗುವ ಮುನ್ನ ಏಳುವ ವ್ಯಕ್ತಿ ತನ್ನ ದೇಹ ಮತ್ತು ಮನಸ್ಸುಗಳನ್ನು ಏಕತ್ರಗೊಳಿಸುವ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತಾನೆ, ಆದ್ದರಿಂದಲೇ ಬ್ರಾಹ್ಮೀ ಮುಹೂರ್ತವನ್ನು ಕೇವಲ ಒಂದು ವಿಶೇಷ ಸಮಯ ಎಂದು ಮಾತ್ರ ಗುರುತಿಸದೇ ನಮ್ಮ ಬದುಕಿನಲ್ಲಿ ಅತ್ಯುನ್ನತ ಬದಲಾವಣೆಗಳನ್ನು ತರುವ ವಿಶಿಷ್ಟ ಘಳಿಗೆ ಎಂದು ಹೇಳಲಾಗುತ್ತದೆ. ಸ್ನೇಹಿತರೆ, ಪ್ರತಿ ದಿನ ಮುಂಜಾನೆ ಸೂರ್ಯೋದಯಕ್ಕಿಂತ ಮುನ್ನವೇ ಬ್ರಾಹ್ಮಿ ಮುಹೂರ್ತದಲ್ಲಿ ಏಳಲು ಪ್ರಯತ್ನಿಸಿ. ನಿಮ್ಮ ಮನಸ್ಸನ್ನು ಎಚ್ಚರಗೊಳಿಸಿ ನಿಮ್ಮ ಆತ್ಮವನ್ನು ಸುಷುಪ್ತ ಸ್ಥಿತಿಯಿಂದ ಜಾಗೃತ ಸ್ಥಿತಿಗೆ ತನ್ನಿ.

ಬ್ರಾಹ್ಮಿ ಮುಹೂರ್ತ ಎಂಬ ಈ ಸುವರ್ಣಗಳಿಗೆಯನ್ನು

ನಿಮ್ಮದಾಗಿಸಿಕೊಂಡು ಆಧ್ಯಾತ್ಮಿಕ ಬೆಳವಣಿಗೆ, ಸಾಮರ್ಥ್ಯದ ಹೆಚ್ಚಳ ಹಾಗೂ ಆತ್ಮೋನ್ನತಿಯ ದಾರಿಯನ್ನು ನಿಮ್ಮದಾಗಿಸಿಕೊಳ್ಳಿ.

## ಪಿ.ಎಂ. ಕಿಸಾನ್ ಯೋಜನೆ: ಇಂದು ಪ್ರಧಾನಿಗಳಿಂದ 23 ನೇ ಕಂತಿನ ಹಣ ಬಿಡುಗಡೆ

# ಕರ್ನಾಟಕದ 41.54 ಲಕ್ಷ ರೈತರಿಗೆ ನೆರವು



**ಬೆಂಗಳೂರು:** ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ–ಕಿಸಾನ್) ಯೋಜನೆಯ 23ನೇ ಕಂತಿನ ಆರ್ಥಿಕ ನೆರವನ್ನು ಇಂದು ಬಿಡುಗಡೆ ಮಾಡಲಾಗುವುದು

ಪ್ರಧಾನ ಮಂತ್ರಿಗಳು 2026 ನೇ ಜೂನ್ 20 ರಂದು ಪಶ್ಚಿಮ ಬಂಗಾಳ ರಾಜ್ಯದ ತಾರಕೇಶ್ವರ್, ಹೂಗ್ಲಿಯಲ್ಲಿ ಸಂಜೆ 4:00 ಗಂಟೆಗೆ ಆಯೋಜಿಸಲಾಗಿರುವ ಕಾರ್ಯಕ್ರಮದಲ್ಲಿ ದೇಶದ ರೈತರ ಖಾತೆಗಳಿಗೆ ಅಧಿಕೃತವಾಗಿ ಹಣ ವರ್ಗಾವಣೆ ಮಾಡಲಿದ್ದಾರೆ. ಈ ವಿಶೇಷ ದಿನವನ್ನು "ಪಿ.ಎಂ. ಕಿಸಾನ್ ಉತ್ಸವ ದಿವಸ್" ಎಂದು ಆಚರಿಸಲಾಗುತ್ತಿದೆ.

**ಕರ್ನಾಟಕದ ರೈತರಿಗೆ ರೂ. 830.832 ಕೋಟಿ ಅನುದಾನ:** ಈ ಯೋಜನೆಯಡಿ ಕರ್ನಾಟಕ ರಾಜ್ಯದ ಒಟ್ಟು 41,54,160 ಫಲಾನುಭವಿ ರೈತರಿಗೆ ಕೇಂದ್ರ ಸರ್ಕಾರದಿಂದ ಒಟ್ಟಾರೆ ರೂ. 830.832 ಕೋಟಿಗಳ ಆರ್ಥಿಕ ನೆರವು ನೇರ ನಗದು ವರ್ಗಾವಣೆ (DBT)ಮೂಲಕ ಜಮೆಯಾಗಲಿದೆ.

**ಯೋಜನೆಯ ಹಿನ್ನೆಲೆ ಮತ್ತು ಪ್ರಯೋಜನಗಳು:** ವಾರ್ಷಿಕ ನೆರವು: ಅರ್ಹ ರೈತ ಕುಟುಂಬಗಳಿಗೆ ಕೃಷಿ ಚಟುವಟಿಕೆಗಳ ನಿರ್ವಹಣೆ ಹಾಗೂ ಉತ್ತಮ ಇಳುವರಿ ಪಡೆಯಲು ನೆರವಾಗುವಂತೆ ವಾರ್ಷಿಕವಾಗಿ ಒಟ್ಟು ರೂ. 6,000/– ಗಳ ಆರ್ಥಿಕ ಸಹಾಯ ನೀಡಲಾಗುತ್ತದೆ.

**ಕಂತುಗಳ ವಿವರ:** ಈ ಮೊತ್ತವನ್ನು ತಲಾ ರೂ. 2,000/– ಗಳಂತೆ ಮೂರು ಸಮಾನ ಕಂತುಗಳಲ್ಲಿ ಪ್ರತಿ ನಾಲ್ಕು ತಿಂಗಳಿಗೊಮ್ಮೆ ರೈತರ ಖಾತೆಗೆ ಜಮೆ ಮಾಡಲಾಗುತ್ತದೆ.

**ಅರ್ಹತೆ:** ಕರ್ನಾಟಕದಲ್ಲಿ ಫೆಬ್ರವರಿ 2019 ರಿಂದ ಈ ಯೋಜನೆ ಜಾರಿಯಲ್ಲಿದ್ದು, ದಿನಾಂಕ: 01.02.2019 ರ ಅನ್ವಯ ಸಾಗುವಳಿ ಭೂಮಿ ಹೊಂದಿರುವ ಅರ್ಹ ರೈತ ಕುಟುಂಬಗಳು (ಗಂಡ, ಹೆಂಡತಿ ಮತ್ತು ಅಪ್ರಾಪ್ತ ಮಕ್ಕಳು) ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಪ್ರಧಾನ ಮಂತ್ರಿಗಳ ಈ ನೇರ ನಗದು ವರ್ಗಾವಣೆ ಪ್ರಕ್ರಿಯೆಯಿಂದಾಗಿ ರಾಜ್ಯದ ಲಕ್ಷಾಂತರ ರೈತ ಕುಟುಂಬಗಳ ಕೃಷಿ ವೆಚ್ಚಕ್ಕೆ ಸಕಾಲದಲ್ಲಿ ಆರ್ಥಿಕ ಆಸರೆ ಸಿಕ್ಕಂತಾಗಲಿದೆ.

# ಕನಸುಗಳ ಆಕಾಶಕ್ಕೆ ಏಣಿಯಾದವರು:ಅನ್ನಾ ಮಣಿ



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 48

ಅಡೆತಡೆಗಳನ್ನೇ ಆರೋಹಣದ ಸೋಪಾನಗಳಾಗಿಸಿದ ಅನ್ನಾ ಮಣಿ ಅವರ ಜೀವನಗಾಥೆ ಇಂದಿನ ಯುವಲೋಕಕ್ಕೆ ಜ್ಞಾನದೀಪ. ಕೇರಳದ ಸಂಪ್ರದಾಯದ ಮನೆಯಲ್ಲಿ ಜನಿಸಿದರೂ, ಒಡವೆ–ಉಡುಗೆಗಳ ಮೋಹ ತೊರೆದು ವಿದ್ಯಾದೇವಿಯ ಮೊರೆಹೋದರು.ಎಂಟರ ಹರೆಯದಲ್ಲೇ ವಿಶ್ವಕೋಶಗಳನ್ನು ಅರೆದು ಕುಡಿದ ಅವರ ಜಿಜ್ಞಾಸೆ ಪುಸ್ತಕದ ಪುಟಗಳಿಗೆ ಸೀಮಿತವಾಗಿರಲಿಲ್ಲ;ಅದು ಸತ್ಯಾನ್ವೇಷಣೆಯ ತಪಸ್ಸಾಗಿತ್ತು. ಹವ್ಯಾಸವನ್ನೇ ವೃತ್ತಿಯನ್ನಾಗಿಸಿಕೊಳ್ಳುವ ಕನಸುಗಾರರಿಗೆ ಇವರೇ ಆದರ್ಶ. ಸರ್ ಸಿ.ವಿ. ರಾಮನ್ ಅವರ ಗರಡಿಯಲ್ಲಿ ಪಳಗಿದರೂ, ಮಹಿಳೆಯೆಂಬ ಒಂದೇ ಕಾರಣಕ್ಕೆ ಪಿ.ಎಚ್.ಡಿ. ಪದವಿ ಕೈತಪ್ಪಿತು.

ಆದರೆ ಅನ್ನಾ ಮಣಿ ಎದೆಗುಂದಲಿಲ್ಲ. ಪದವಿಗಿಂತ ಪ್ರಜ್ಞೆಯೇ ಹಿರಿದೆಂದು ನಂಬಿ ಲಂಡನ್‌ಗೆ ತೆರಳಿ ಹವಾಮಾನ ವಿಜ್ಞಾನದಲ್ಲಿ ಪ್ರಾವೀಣ್ಯತೆ ಸಾಧಿಸಿದರು.ಸಣ್ಣ ಸೋಲಿಗೆ ಸೊರಗದ ಛಲವೊಂದೇ ಗೆಲುವಿನ ಗುಟ್ಟು ಎಂಬುದನ್ನು ಜಗಕ್ಕೆ ಸಾರಿದರು.ಸ್ವಾತಂತ್ರ್ಯದ ಹೊಸ್ತಿಲಲ್ಲಿ ವಿದೇಶಿ ಉಪಕರಣಗಳನ್ನೇ ನೆಚ್ಚಿದ್ದ ಭಾರತಕ್ಕೆ ಸ್ವದೇಶಿ ಆಯಾಮ ನೀಡಿದರು.ನೂರಾರು ಸಂಕೀರ್ಣ ಹವಾಮಾನ ಸಾಧನಗಳನ್ನು ದೇಶೀಯ ತಂತ್ರಜ್ಞಾನದಲ್ಲಿ ರೂಪಿಸಿ ಆತ್ಮನಿರ್ಭರ ಭಾರತದ ಅಡಿಪಾಯ ಹಾಕಿದರು.



ಇಂದು ಜಗತ್ತು ಸೌರಶಕ್ತಿಯ ಮಾತಾಡುತ್ತಿದ್ದರೆ,ಅನ್ನಾ ಮಣಿ ದಶಕಗಳ ಹಿಂದೆಯೇ ಆ ಕ್ಷೇತ್ರದಲ್ಲಿ ಸಂಶೋಧಿಸಿ ಭಾರತದ ಇಂಧನ ಸ್ವಾವಲಂಬನೆಗೆ ಬೆಳಕು ತೋರಿದ್ದರು.ಪರಿಶ್ರಮಕ್ಕೆ ಪರ್ಯಾಯವಿಲ್ಲ,ಶಿಸ್ತು ಮತ್ತು ನಿರಂತರ ಅಧ್ಯಯನವೊಂದಿದ್ದರೆ ಸಾಮಾನ್ಯರೂ ಅಸಾಮಾನ್ಯರಾಗಬಲ್ಲರು ಎಂಬುದೇ ಅವರ ಬದುಕಿನ ಸಾರ.ಆಕಾಶದ ಅಳತೆ ನಿಮ್ಮ ಸಂಕಲ್ಪದಲ್ಲಿದೆ ಎಂಬುದಕ್ಕೆ ಅನ್ನಾ ಮಣಿ ಅವರೇ ಜ್ವಲಂತ ದೃಷ್ಟಾಂತ.

# ನುಗ್ಗೆಯ ನುಗ್ಗಾಟ!

## ಎಲ್ಲ ತರಕಾರಿಗಳನ್ನೂ ಮೀರಿಸಿ ಮೆರೆವ ನುಗ್ಗೆ!



| ರೂಪ ಮಂಜುನಾಥ ಹೊಳೆನರಸೀಪುರ

ಅರಿಜೋನಾ ಬೇಸಿಗೆ ಅಂದ ತಕ್ಷಣ ಕಣ್ಣಮುಂದೆ ಬರೋದೇ ಉರಿಉರಿ ಬಿಸಿಲು, ಕಳ್ಳಿ ಗಿಡ (Cactus), ಮತ್ತು ಮರದ ತುಂಬಾ ಜೋತು ಬಿದ್ದಿರುವ ನುಗ್ಗೇಕಾಯಿಗಳು! ಆದರೆ ಈ ಬಿಸಿಲನ್ನೇ ಬಂಡವಾಳ ಮಾಡಿಕೊಂಡು, ಇಲ್ಲಿನ ಭಾರತೀಯರ ಮತ್ತು ಏಷ್ಯನ್ನರ ಹಿತ್ತಲಲ್ಲಿ ರಾಜನಂತೆ ಮೆರೆಯುತ್ತಿರೋದು ನಮ್ಮ ಹೆಮ್ಮೆಯ ನುಗ್ಗೆ ಮರ (Drumstick tree). ಭಾರತದಲ್ಲಿ ನುಗ್ಗೆಕಾಯಿಗೆ ಡಿಮ್ಯಾಂಡೋ ಡಿಮ್ಯಾಂಡು, ಆದರೆ ಅರಿಜೋನಾದಲ್ಲಿ ಇದನ್ನ ಬೆಳೆದವರ ಕತೆಯೇ ಬೇರೆ!

ಇಲ್ಲಿ ನಾನು ನಮ್ಮ ನುಗ್ಗೇಮರ ಅಂತ ಹೆಮ್ಮೆಯಿಂದ ಹೇಳಿಕೊಳ್ಳೋಕೆ ಬಲವಾದ ಕಾರಣವೂ ಇದೆ. ನುಗ್ಗೆಮರದ ಹುಟ್ಟು, ನಮ್ಮ ಭಾರತದಲ್ಲೇ. ನಮ್ಮ ದೇಶವೇ ಇದಕ್ಕೆ ತವರು ಮನೆ!!

ಇದರ ಸಸ್ಯಶಾಸ್ತ್ರೀಯ ಹೆಸರು Moringa oleifera ಎಂದು. ಹಿಮಾಲಯದ ತಪ್ಪಲು ಪ್ರದೇಶಗಳಲ್ಲಿ (ಮುಖ್ಯವಾಗಿ ವಾಯುವ್ಯ ಭಾರತದಲ್ಲಿ) ಇದು ಸಹಜವಾಗಿ ಬೆಳೆಯುತ್ತಿತ್ತು. ಭಾರತದಿಂದಲೇ ಇದು ಪ್ರಪಂಚದಾದ್ಯಂತ ಹರಡಿತು. ಇಂದು ಆಫ್ರಿಕಾ, ಏಷ್ಯಾ ಮತ್ತು ದಕ್ಷಿಣ ಅಮೆರಿಕಾದ ಉಷ್ಣವಲಯದ ದೇಶಗಳಲ್ಲಿ ಇದನ್ನು ವ್ಯಾಪಕವಾಗಿ ಬೆಳೆಸಲಾಗುತ್ತಿದೆ.

**ನುಗ್ಗೆಮರದ ಐತಿಹಾಸಿಕ ಪಯಣ:** ಾತನ ವೈದ್ಯಕೀಯ ಪದ್ಧತಿಯಾದ ಆಯುರ್ವೇದದಲ್ಲಿ ನುಗ್ಗೆಯನ್ನು 'ಶಿಗ್ರು' (ಅಂದರೆ ಬೇಗನೆ ದೇಹದೊಳಗೆ ಚುರುಕಾಗಿ ಕೆಲಸ ಮಾಡುವುದು) ಎಂದು ಕರೆಯಲಾಗಿದೆ. ಆಯುರ್ವೇದದ ಪ್ರಕಾರ, ನುಗ್ಗೆಯ ವಿವಿಧ ಭಾಗಗಳು ಸುಮಾರು 300ಕ್ಕೂ ಹೆಚ್ಚು ಕಾಯಿಲೆಗಳನ್ನು ಗುಣಪಡಿಸುವ ಅಥವಾ ತಡೆಗಟ್ಟುವ ಸಾಮರ್ಥ್ಯ ಹೊಂದಿವೆ ಎಂದು ನಂಬಲಾಗಿತ್ತು.

ಮೌರ್ಯ ಸಾಮ್ರಾಜ್ಯದ ಯೋಧರ ಶಕ್ತಿ (ಕ್ರಿ.ಪೂ. 300): ಮೌರ್ಯ ಸಾಮ್ರಾಜ್ಯದ ಕಾಲದಲ್ಲಿ (ವಿಶೇಷವಾಗಿ ಚಂದ್ರಗುಪ್ತ ಮೌರ್ಯನ ಆಳ್ವಿಕೆಯಲ್ಲಿ) ಯುದ್ಧಕ್ಕೆ ಹೋಗುವ ಯೋಧರಿಗೆ ನುಗ್ಗೆ ಎಲೆಯ ರಸ ಅಥವಾ ಕಷಾಯವನ್ನು ನಿಯಮಿತವಾಗಿ ಕುಡಿಸಲಾಗುತ್ತಿತ್ತು ಎಂಬ ಇತಿಹಾಸವಿದೆ. ಇದು ಯೋಧರ ಆಯಾಸವನ್ನು ದೂರಮಾಡಿ, ಮೂಳೆಗಳಿಗೆ ಅಪ್ರತಿಮ ಶಕ್ತಿಯನ್ನು ನೀಡುತ್ತದೆ ಮತ್ತು ಯುದ್ಧದಲ್ಲಿ ಗಾಯಗೊಂಡಾಗ ನೋವನ್ನು ತಡೆದುಕೊಳ್ಳುವ ಶಕ್ತಿ ಕೊಡುತ್ತದೆ ಎಂದು ನಂಬಲಾಗಿತ್ತು.

**ಈಜಿಪ್ಟ್ ಮತ್ತು ರೋಮನ್ನರ ಕಾಲದಲ್ಲಿ:** ಭಾರತದಿಂದ ವ್ಯಾಪಾರದ ಮೂಲಕ ನುಗ್ಗೆಯು ಪ್ರಾಚೀನ ಈಜಿಪ್ಟ್, ಗ್ರೀಸ್ ಮತ್ತು ರೋಮ್ ದೇಶಗಳಿಗೆ ತಲುಪಿತು. ಈಜಿಪ್ಟಿನವರು ನುಗ್ಗೆಯ ಬೀಜದಿಂದ ತೆಗೆದ ಎಣ್ಣೆಯನ್ನು (Ben Oil) ತಮ್ಮ ಚರ್ಮದ ರಕ್ಷಣೆಗಾಗಿ ಮತ್ತು ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಬಳಸುತ್ತಿದ್ದರು. ಮರುಭೂಮಿಯ ಕಠಿಣ ಬಿಸಿಲಿನಿಂದ ಚರ್ಮವನ್ನು ಕಾಪಾಡಿಕೊಳ್ಳಲು ಇದು ಅವರಿಗೆ ಸಹಕಾರಿಯಾಗಿತ್ತು.

ರೋಮನ್ ಮತ್ತು ಗ್ರೀಕ್ ನಾಗರಿಕತೆಯಲ್ಲಿ ನುಗ್ಗೆಯನ್ನು ಔಷಧೀಯ ಗುಣಗಳಿಗಾಗಿ ಅಷ್ಟೇ ಅಲ್ಲದೆ, ಕುಡಿಯುವ ನೀರನ್ನು ಶುದ್ಧೀಕರಿಸಲು ಇದರ ಬೀಜದ ಪುಡಿಯನ್ನು ಬಳಸುತ್ತಿದ್ದರು.

**'ಮಿರಾಕಲ್ ಟ್ರೀ' (ಪವಾಡದ ಮರ):** ಇಂದು ವಿಶ್ವಸಂಸ್ಥೆ (UN) ಮತ್ತು ಹಲವಾರು ಜಾಗತಿಕ ಸಂಸ್ಥೆಗಳು ಆಫ್ರಿಕಾದಂತಹ ಹಿಂದುಳಿದ ದೇಶಗಳಲ್ಲಿ ಅಪೌಷ್ಟಿಕತೆಯನ್ನು ಎದುರಿಸಲು ನುಗ್ಗೆಯನ್ನು ಪ್ರಮುಖ ಅಸ್ತ್ರವಾಗಿ ಬಳಸುತ್ತಿವೆ. ಹಾಲಿಗೆ ಹೋಲಿಸಿದರೆ ನುಗ್ಗೆ ಎಲೆಯ ಪುಡಿಯಲ್ಲಿ



ಹದಿನೈದು ಪಟ್ಟು ಹೆಚ್ಚು ಕ್ಯಾಲ್ಸಿಯಂ ಇದೆ ಎಂದು ಇತ್ತೀಚಿನ ಆಧುನಿಕ ಸಂಶೋಧನೆಗಳೂ ಸಾಬೀತುಪಡಿಸಿವೆ.

ನಮ್ಮ ಹಿತ್ತಲಲ್ಲೇ ಇರುವ ಈ ನುಗ್ಗೆಮರಕ್ಕೆ ಜಾಗತಿಕ ಮಟ್ಟದಲ್ಲಿ ಇಷ್ಟೊಂದು ದೊಡ್ಡ ಇತಿಹಾಸ ಮತ್ತು ಗೌರವವಿದೆ.

ಇಲ್ಲಿರೋ ನಮ್ಮ ಜನರಿಗೆ ಸೀಸನ್ ಬಂತು ಅಂದರೆ ಸಾಕು, ನುಗ್ಗೆಕಾಯಿಗಳದ್ದೇ ಜಪ! ಗಿಡದಲ್ಲಿ ಕಾಯಿಗಳು ಯರ್ರಾ?ಬಿರ್ರೀ?.. ಅಷ್ಟುದುದ್ದ ಬೆಳೆದು ನಿಂತಿರುತ್ತವೆ. ಅವು ಗಳು ಮುದಿ ಆಗುವ ಮುನ್ನ ಯಾರಾದರೂ ಬಂದು ತಗೊಂಡು ಹೋದರೆ ಸಾಕು ಎನ್ನುವ ಹಪಹಪಿ. ವಾಟ್ಸಾಪ್ ಗ್ರೂಪ್‌ಗಳಲ್ಲಿ ಮೆಸೇಜ್‌ಗಳ ಸುರಿಮಳೆ.?ನಿಮಗೆ ಬೇಕಾ? ತಗೊಂಡು ಹೋಗಿ!? ಅನ್ನುವಂತಹ ನುಗ್ಗೆ ಉಚಿತ ವಿತರಣೆಯ ಮಹೋತ್ಸವ!

ನಮ್ಮದೇ ಕಮ್ಯುನಿಟಿಯಲ್ಲಿರುವ ಕೇರಳದ ಶೆರ್ಲಿ ಅಕ್ಕನಂತೂ ದಿನಾ ಬೆಳಗ್ಗೆ ಎದ್ದು ಫೋನ್ ಮಾಡಿದ್ದೇ ಮಾಡಿದ್ದು?"ರೂಪಾ, ನುಗ್ಗೆಕಾಯಿ ಬೇಕಾದಷ್ಟಿದೆ, ಬಂದು ತಗೊಂಡು ಹೋಗೂ ಪ್ಲೀಸ್!" ಅಂತ ಗೋಗರೆಯುತ್ತಾರೆ. ಪಾಪ, ಅವರ ಮನೆಯಲ್ಲೂ ಅಷ್ಟೊಂದು ಕಾಯಿಗಳನ್ನು ಏನು ತಾನೇ ಮಾಡಾರು?

ಇತ್ತ ಅಮೆರಿಕನ್ನರು ಸೂಪರ್ ಮಾರ್ಕೆಟ್‌ಗಳಲ್ಲಿ ಕೇವಲ ಮೈದಾ, ಸಕ್ಕರೆ, ಪ್ರೊಸೆಸ್ಡ್ ಫುಡ್ ಅಂತ ಡಾಲರ್ ಗಟ್ಟಲೆ ದುಡ್ಡು ಸುರಿದು, ಕೆಮಿಕಲ್ ತುಂಬಿದ ಡಬ್ಬಿಗಳನ್ನು ಮುಕ್ಕುತ್ತಿರುತ್ತಾರೆ. ಅವರ ಮನೆಯ ಮುಂದೆಯೇ ಪ್ರಕೃತಿ ಕೊಟ್ಟ ಅಮೃತದಂತಹ ನುಗ್ಗೆ ಸೊಪ್ಪು, ನುಗ್ಗೆಕಾಯಿ ತೂಗಾಡುತ್ತಿದ್ದರೂ, "ಇದೇನೋ ಒಂಥರಾ ವಿಚಿತ್ರ ಕೋಲು ತೂಗಾಡ್ತಿದೆ" ಅಂತ ನಿರ್ಲಕ್ಷ್ಯದಿಂದ ನೋಡಿ ಪಾಸ್ ಆಗ್ತಾರೆ! ಬಿಟ್ಟಿ ಸಿಗೋ ಈ ಸೂಪರ್ ಫುಡ್‌ನ (Superfood) ಮೌಲ್ಯ ಅವರಿಗೆ ಗೊತ್ತಿಲ್ಲದೇ ಇರೋದು ಒಂದು ಕಡೆಯಾದರೆ, ನಮ್ಮ ಜನರಿಗೆ ಅದನ್ನು ಖಾಲಿ ಮಾಡೋದು ಹೇಗೆ ಅನ್ನೋದು ಇನ್ನೊಂದು ತಲೆನೋವು.

ಶೆರ್ಲಿ ಅಕ್ಕ ಪ್ರೀತಿಯಿಂದ ಕೊಟ್ಟಳು ಅಂತ ದಿನಾ ನುಗ್ಗೆಕಾಯಿ ತಂದು ಸಾಂಬಾರ್, ಪಲ್ಯ, ಅವಿಯಲ್ ಅಂತ ಮಾಡಿದರೆ ಮನೆಯಲ್ಲಿರೋ ಮಕ್ಕಳ ಕಥೆ ಏನಾಗಬೇಕು? ಡೈನಿಂಗ್ ಟೇಬಲ್ ಮೇಲೆ ನುಗ್ಗೆಕಾಯಿ ಸಾಂಬಾರ್ ನೋಡಿದ ತಕ್ಷಣ ಮಕ್ಕಳ ಮುಖ ಐದು ರೂಪಾಯಿ ಕಾಯಿನ್ ತರಹ ಸಣ್ಣದಾದರೂ ಹಿಂಸೆ! "ಮತ್ತೆ ಅದೇ ಡ್ರಮ್ ಸ್ಟಿಕ್ ಸಾಂಬಾರಾ?" ಅಂತ ಮುಖ ಪಂಪ್‌ಕಿನ್ ತರ ಊದಿಸಿಕೊಂಡ್ರೆ ಅದೂ ಹಿಂಸೆ! ಆರೋಗ್ಯ ಕಾಪಾಡುವ ಧಾವಂತದಲ್ಲಿ ಮಕ್ಕಳ ಮುಖವನ್ನೂ ನೋಡಲಾಗದೆ ನಮ್ಮ ಗೃಹಿಣಿಯರು ಸಿಕ್ಕಿಹಾಕಿಕೊಳ್ಳುವ ಧರ್ಮಸಂಕಟ ಅಷ್ಟಿಷ್ಟಲ್ಲ!

ಹೀಗೆ ಒಮ್ಮೆ ಶೆರ್ಲಿ ಅಕ್ಕನ ಮನೆಯಿಂದ ನುಗ್ಗೆಕಾಯಿಗಳನ್ನು ಹಿಡಿದುಕೊಂಡು ಮನೆಯ ಕಡೆ ಬರುತ್ತಿದ್ದೆ.ವಾಕ್ ಸಮಯದಲ್ಲಿ ಆಗಾಗ ಸಿಗುವ ಇಲ್ಲಿನ ಮೊನಿಕಾ, ಸಿಸಿಲಿಯ ಅಮೆರಿಕನ್ ಗೆಳತಿಯರು,?ಹೇ ರೂಪ ವಾಟ್ ಇಸ್ ದಿಸ್, ಅಂದ್ರು. ನಾನು,ಇದು ಡ್ರಮ್‌ಸ್ಟಿಕ್ಸೂಂತ! ಬಹಳ ಬಹಳ ಪೌಷ್ಟಿಕಾಂಶ ಇರೋ ತರಕಾರಿ. ಇದನ್ನ ಸೂಪ್ ಮಾಡಿಕೊಂಡು ಕುಡೀಬಹುದು, ಅಂತ ಹೇಳಿದೆ. ಬರೀ ಸೂಪೇ ಯಾಕ್ರೀ?.ಅಂತ ನೀವು ಕೇಳ್ಬೋದು! ಆದ್ರೆ ಇಲ್ಲಿ ಜನ ಸಾಂಬಾರು, ರಸಪಲ್ಯ, ಪರೋಟ,ಅವಿಯಲ್, ಅವೆಲ್ಲಾ ಮಾಡೋರೂ ಅಲ್ಲಾ, ನಾನು ಹರುಕು ಮುರುಕು ಇಂಗ್ಲೀಷಿನಲ್ಲಿ ಹೇಳಿದ್ರೆ ಅವರಿಗೆ ಅರ್ಥವೂ ಆಗೋಲ್ಲ. ಹಾಗಾಗಿ ಸುಲಭವಾಗಿ ಸೂಪ್ ಮಾಡ್ಕೊಂಡು ಕುಡೀರೀ ಅಂತ ಇಬ್ರಿಗೂ ಸಲೀಸಾಗುವಂತೆ ಹೇಳಿ, ಎರಡೆರಳು ನುಗ್ಗೆಕಾಯಿಗಳನ್ನ ಕೊಟ್ಟೆ. ?ವಾವ್ ಇಸಿಟ್ ಇಸಿಟ್? ಅಂತ ಆಶ್ಚರ್ಯ ತೋರಿಸಿದವರು, ನುಗ್ಗೆ ಕೊಡುವಾಗ ಅನುಮಾನದಿಂದಲೇ ಮುಖಮುಖ ನೋಡಿಕೊಂಡ್ರು.ಒಂದು ವೇಳೆ ಅವರು ನಿಜವಾಗಿಯೂ ಸೂಪ್ ಮಾಡಲು ಹೋದರೆ, ಆ ಉದ್ದುದ್ದ ಕೋಲುಗಳನ್ನು ಹಾಗೇ ಪಾತ್ರೆಯೊಳಗೆ ಹಾಕಿ ಬೇಯಿಸಿ, ಆಮೇಲೆ ಅದನ್ನು ಚಮಚದಲ್ಲಿ ಕಟ್ ಮಾಡಲು ಹೋಗಿ ಸೋತು, "ಓಹ್ ಮೈ ಗಾಡ್! ವಾಟ್ ಎ ಹಾರ್ಡ್ ವೆಜಿಟೇಬಲ್!" ಅಂತ ತಲೆ ಕೆಡಿಸಿಕೊಂಡರೂ ಆಶ್ಚರ್ಯವಿಲ್ಲ. ಇಲ್ಲಿನ ಜನಕ್ಕೆ ನುಗ್ಗೆಕಾಯಿಯನ್ನು ಹೋಳು ಮಾಡುವುದು, ಅದರ ನಾರು ತೆಗೆಯುವುದು ಗೊತ್ತಿಲ್ಲದೆ ಹೋದರೆ, ಅದನ್ನು ಮನೆಯ ಬ್ಯಾಕ್‌ಯಾರ್ಡ್ ಕಟ್ ಮಾಡುವ 'ಗಾರ್ಡನ್ ಟೂಲ್ಸ್' ತಂದು ಕತ್ತರಿಸಿದರೂ ಕತ್ತರಿಸಬಹುದು!ಓ ಮೈ ಗಾ?.ಶ್, ಇದೆಂಥಾ ಮಾರ್ರೇ?..ಒಳ್ಳೆ ರೆಂಬೆ ಕೊಂಬೆಯಂತೆ ಗಡುಸಾಗಿದೆಯಲ್ಲಾ ಅಂತ ಹೆದರಿ, ಸೂಪೇ ಮಾಡಿಕೊಂಡ್ರೋ ?..ಇಲ್ಲಾ ಈ ಆರೋಗ್ಯದ ಖಜಾನೆಯನ್ನ ಕಸದ ಬುಟ್ಟಿಗೆ ತುಂಬಿ, ಪಿಜ್ಜಾ ತಿಂದ್ರೋ ದೇವ್ರೇ ಬಲ್ಲ! ಹಣೆಬರಹಕ್ಕೆ ಹೊಣೆ ಯಾರೂ? ಹೌದ್ರೀ ಇಲ್ಲಿನ ಜನ ಬಹಳ ಸೂಕ್ಷ್ಮ.ಎಷ್ಟು ಸೂಕ್ಷ್ಮಾಂದ್ರೆ, ಇವ್ರಿಗೆ ಪೀನಟ್ ಅಲರ್ಜಿ, ಆಲ್ಮಂಡ್ ಅಲರ್ಜಿ, ಕ್ಯಾಶೂ ಅಲರ್ಜಿ, ಎಣ್ಣೆ ಅಲರ್ಜಿ, ಬೆಣ್ಣೆ ಅಲರ್ಜಿ?..ಹೀಗೆ ನೂರಾರು ಅಲರ್ಜಿಗಳ ಡೆಲಿಕೇಟ್ ಡಾರ್ಲಿಂಗುಗಳು!ಯಾವ ತಿಂಡಿ ತೀರ್ಥಕ್ಕೂ ವಿಶೇಷವಾಗಿ ಅಲರ್ಜಿ ಇರೋರಿಗಾಗಿ ಲೇಬಲ್ ಹಾಕಿರ್ತಾರೆ. ನಮ್ ದೇಶದಲ್ಲಿ ಇದೆಲ್ಲಾ ನಾವು ಕೇಳಿಯೂ ಇಲ್ಲ!




ಇಷ್ಟೆಲ್ಲಾ ತಮಾಷೆಯ ನಡುವೆ ನಾವು ಯೋಚಿಸಬೇಕಾದ ಒಂದು ಮುಖ್ಯ ವಿಷಯವಿದೆ. ಅಮೆರಿಕನ್ನರು ಬಣ್ಣ ಬಣ್ಣದ ಬಾಟಲಿಗಳಲ್ಲಿ Moringa Powder? ಅಂತ ಮುನ್ನೂರು-ನಾನ್ನೂರು ರೂಪಾಯಿ ಕೊಟ್ಟು ಕೊಳ್ಳುವ ಆ ಮಲ್ಟಿ-ವಿಟಮಿನ್ ಪೌಡರ್ ಬೇರೇನೂ ಅಲ್ಲ, ನಮ್ಮದೇ ನುಗ್ಗೆ ಸೊಪ್ಪಿನ ಪುಡಿ!ಅದು ಇಲ್ಲಿಯವರಿಗೆ ಗೊತ್ತೇ ಇಲ್ಲ!

ಕ್ಯಾಲ್ಸಿಯಂ, ಐರನ್, ವಿಟಮಿನ್ ಸಿ ಯಿಂದ ಸಮೃದ್ಧವಾಗಿರುವ ಈ ನುಗ್ಗೆಯನ್ನು ನಿರ್ಲಕ್ಷಿಸುವುದು ಬೇಡ. ಅಮೆರಿಕನ್ನರಿಗೆ ಇದರ ಅರಿವಿಲ್ಲದಿರಬಹುದು, ಆದರೆ ನಮಗಿದರ ಮೌಲ್ಯ ಗೊತ್ತಿದೆ. ದಿನಾ ಸಾಂಬಾರ್ ಮಾಡಿ ಮಕ್ಕಳಿಗೆ ಬೋರ್ ಹೊಡೆಸುವ ಬದಲು, ನುಗ್ಗೆ ಸೊಪ್ಪಿನ ಪರೋಟ, ನುಗ್ಗೆಕಾಯಿ ಸೂಪ್ ಅಥವಾ ಅದರ ಪಲ್ಪ್ ತೆಗೆದು ಏನಾದರೂ ಹೊಸ ಡಿಶ್ ಟ್ರೈ ಮಾಡಬಹುದು.

ಪ್ರಕೃತಿ ಬಿಟ್ಟಿಯಾಗಿ ಕೊಟ್ಟಿದೆ ಅಂತ ನಿರ್ಲಕ್ಷ್ಯ ಮಾಡದೇ, ಶೆರ್ಲಿ ಅಕ್ಕನಂತಹ ನೆರೆಹೊರೆಯವರ ಪ್ರೀತಿಯನ್ನು ಗೌರವಿಸಿ, ಆರೋಗ್ಯವನ್ನು ವೃದ್ಧಿಸಿಕೊಳ್ಳೋಣ. ಅಂದಹಾಗೆ, ನಿಮ್ಮ ವಾಟ್ಸಾಪ್ ಗ್ರೂಪ್‌ನಲ್ಲೂ ಯಾರಾದರೂ "ನುಗ್ಗೆಕಾಯಿ ಬೇಕಾ?" ಅಂತ ಮೆಸೇಜ್ ಹಾಕಿದ್ರೆ, ಮುಖ ಸಿಂಡರಿಸಬೇಡಿ, ನಗುತ್ತಾ, ನುಗ್ಗಿ ಹೋಗಿ ಇಸ್ಕೊಳ್ಳಿ... ಯಾಕಂದ್ರೆ ಅದು ಬರೀ ಕಾಯಲ್ಲ, ಅರಿಜೋನಾದಲ್ಲಿ ಹುಲುಸಾಗಿ ಬೆಳೆಯುವ ?ಹಸಿರು ಚಿನ್ನ?!

ಈ ನುಗ್ಗೆಕಾಯಿ ತಿನ್ನೋದು ಇದೆಯಲ್ಲ, ಅದು ಬರೀ ಊಟ ಅಲ್ಲ ಕಣ್ರೀ? ಅದೊಂದು ದೊಡ್ಡ ?ಕಲೆ? (Art)!

ಅದನ್ನು ಸಾಂಬಾರಿನಿಂದ ಎತ್ತಿ ಪ್ಲೇಟಿನಲ್ಲಿ ಇಟ್ಟುಕೊಂಡು, ಬಿಸಿ ಆರಿದ ಮೇಲೆ ನಿಧಾನವಾಗಿ ಹಲ್ಲಿನ ಮಧ್ಯೆ ಪ್ರೆಸ್ ಮಾಡಿ, ಆ ಜ್ಯೂಸ್‌ನಷ್ಟೇ ಹೀರಿ, ಚರಟವನ್ನು ಸೈಡಿಗೆ ಇಡೋಕೆ ಒಂಥರಾ ?ಪೇಷನ್ಸ್? (ತಾಳ್ಮೆ) ಬೇಕು. ಅದು ಈಗಿನ ಜೆನ್ ಜ಼ೀಗಳಿಗೆ ಎಲ್ಲಿದೆ ಹೇಳ್ರಪ್ಪಾ! ನನ್ನ ಸೊಸೆಯಂತೂ ಒಂದು ಹೆಜ್ಜೆ ಮುಂದೆ ಹೋಗಿ, "ನುಗ್ಗೆಕಾಯಿ ಟೇಸ್ಟ್ ಓಕೆ ಅತ್ತೆ (ಆಂಟಿ)... ಆದ್ರೆ ನನಗೆ ಅದು ಹಲ್ಲಿನಲ್ಲಿ ಹಾಕಿ ಎಳೆದು ತಿನ್ನೋಕೆ ಪೇಶನ್ಸ್ ಇಲ್ಲ" ಅಂತಾಳೆ! ಪಿಜ್ಜಾ-ಬರ್ಗರ್ ತಿಂದು ಉದ್ಧಾರವಾದ ಈ ಜನರೇಷನ್ ಮಕ್ಕಳಿಗೆ ಎಲ್ಲವೂ 'ರೆಡಿ ಟು ಈಟ್' ಇರಬೇಕು. ಈ ನುಗ್ಗೆಕಾಯಿ ಜಗಿಯೋ ಕಲೆ ಅವರಿಗೆ ಒಲಿಯದ ಮಹಾವಿದ್ಯೆ. ಅವಳು ಹಾಗಂದಾಗ ನನ್ನ ಮಗ,?ಹೋಗ್ಲಿ ಬಿಡೇ, ನಿನಗದು ಕಷ್ಟವಾದ್ರೆ ನಾನೇ ಜಗಿದು ನಿನ್ನ ಬಾಯಿಗೆ ಹಾಕ್ತೀನಿ?, ಅಂದಿದ್ದ !

ಈ ನಮ್ಮ ?ಹಸಿರು ಚಿನ್ನ?ದಲ್ಲಿ ಏನೆಲ್ಲಾ ಒಳಗೊಂಡಿದೆ ಅಂತ ಸಿಂಪಲ್ ಆಗಿ ಹೇಳ್ತೀನಿ ಕೇಳಿ. ನ್ಯೂಟ್ರಿಷನಲ್ ಎಕ್ಸ್‌ಪರ್ಟ್‌ಗಳು ಇದನ್ನ ಯಾಕೆ ?ಸೂಪರ್ ಫುಡ್? ಅಂತ ಕೊಂಡಾಡ್ತಾರೆ ಅನ್ನೋದು ಇದನ್ನ ಓದಿದ್ರೆ ನಿಮಗೂ ಪಕ್ಕಾ ಗೊತ್ತಾಗುತ್ತೆ:

ಕ್ಯಾಲ್ಸಿಯಂ ಖಜಾನೆ (ಹಾಲಿಗೆ ಟಕ್ಕರ್): ನುಗ್ಗೆಯಲ್ಲಿ ಹಾಲಿನಲ್ಲಿ ಇರೋದಕ್ಕಿಂತ ಸುಮಾರು 4 ಪಟ್ಟು ಹೆಚ್ಚು ಕ್ಯಾಲ್ಸಿಯಂ ಇದೆ. ಮೂಳೆಗಳು ಮತ್ತು ಹಲ್ಲುಗಳು ಗಟ್ಟಿಯಾಗೋಕೆ ಇದು ದಿ ಬೆಸ್ಟ್ ಆಹಾರ!

**ಐರನ್ ಪವರ್ (ಸೊಪ್ಪಿಗಿಂತ ಹೆಚ್ಚು):** ರಕ್ತಹೀನತೆ (Anemia) ಇರೋರಿಗೆ ಇದು ಅಮೃತ. ಪಾಲಕ್ ಸೊಪ್ಪಿಗಿಂತಲೂ ಮೂರು ಪಟ್ಟು ಹೆಚ್ಚು ಕಬ್ಬಿಣದಂಶ (Iron) ಇದರಲ್ಲಿದೆ.

**ವಿಟಮಿನ್ ಸಿ (ಕಿತ್ತಳೆ ಹಣ್ಣಿಗಿಂತ ಕಿಕ್):** ರೋಗನಿರೋಧಕ ಶಕ್ತಿ ಹೆಚ್ಚಿಸೋಕೆ ಕಿತ್ತಳೆ ಹಣ್ಣು ತಿಂತೀವಿ ಅಲ್ವಾ? ಆದರೆ ನುಗ್ಗೆಯಲ್ಲಿ ಅದಕ್ಕಿಂತ 7 ಪಟ್ಟು ಹೆಚ್ಚು ವಿಟಮಿನ್ ಸಿ ಇದೆ! ಬಳುಸ್ತಾ ಇರೀ, ನೆಗಡಿ-ಕೆಮ್ಮು ಅವಳೀಜವಳಿಗಳು ನಿಮ್ಮ ಹತ್ತಿರವೂ ಸುಳಿಯಲ್ಲ.

**ಪೊಟ್ಯಾಸಿಯಮ್ (ಬಾಳೆಹಣ್ಣಿಗೆ ಸವಾಲ್):** ಬಿಪಿ ಕಂಟ್ರೋಲ್‌ನಲ್ಲಿ ಇಡೋಕೆ ಮತ್ತು ನರಗಳ ಆರೋಗ್ಯಕ್ಕೆ ಪೊಟ್ಯಾಸಿಯಮ್ ಬೇಕು. ಬಾಳೆಹಣ್ಣಿಗಿಂತಲೂ ಹೆಚ್ಚಿನ ಪ್ರಮಾಣದ ಪೊಟ್ಯಾಸಿಯಮ್ ಇಲ್ಲಿದೆ.

**ವಿಟಮಿನ್ ಎ (ಕಣ್ಣಿಗೆ ರಕ್ಷಣೆ):** ಕ್ಯಾರೆಟ್‌ಗಿಂತಲೂ ಹೆಚ್ಚು ವಿಟಮಿನ್ ಎ ಇದರಲ್ಲಿದ್ದು, ಕಣ್ಣಿನ ದೃಷ್ಟಿ ಚುರುಕಾಗಲು ಸಹಾಯ ಮಾಡುತ್ತದೆ.

**ಬೋನಸ್ ಪಾಯಿಂಟ್:** ಇದರಲ್ಲಿರೋ ಆಂಟಿ-ಆಕ್ಸಿಡೆಂಟ್‌ಗಳು ಶುಗರ್ (Diabetes) ಮತ್ತು ಕೊಲೆಸ್ಟ್ರಾಲ್ ಅನ್ನು ಕಂಟ್ರೋಲ್‌ನಲ್ಲಿ ಇಡೋಕೆ ಭರ್ಜರಿ ನೆರವು ನೀಡುತ್ತವೆ.

ಅದಕ್ಕೇ ಹೇಳೋದು, ನಮ್ಮ ಹಿತ್ತಲ ನುಗ್ಗೆ ಮರ ಒಂದು ?ಮಲ್ಟಿ-ವಿಟಮಿನ್ ಫ್ಯಾಕ್ಟರಿ?! ಈಗ ನೀವು ಮಾಡಿರೋ ಸೂಪ್ ಬರೀ ಸೂಪ್ ಅಲ್ಲ, ಅದು ನಿಮ್ಮ ಆರೋಗ್ಯವನ್ನು ಕಾಪಾಡುವ ದಿವ್ಯವಾದ ಪೇಯ! ಯಾರಾದ್ರೂ ನುಗ್ಗೆಸೊಪ್ಪೋ ಕಾಯೋ ಬೇಕಾ ಅಂತ ಕೇಳಿದ್ರೆ ನುಗ್ಗಿ ತಗೊಂಡು ಬನ್ರೀ?ನಮಸ್ಕಾರ !

---




# (ಆ)(ಈ) ಮಾತು; ಬೆಟ್ಟ-ಗುಡ್ಡಗಳಂತೆ



| ಶಿವಬಸಪ್ಪ ಗು ಜಂಗಾಲಿ
ಲೇಖಕರು

ಮನುಷ್ಯನ ಜೀವನದಲ್ಲಿ ಅನೇಕ ಸಮಸ್ಯೆಗಳು ಹೊರಗಿನಿಂದ ಬರುವುದಿಲ್ಲ; ಅವು ಮನಸ್ಸಿನೊಳಗೆ ಹುಟ್ಟುತ್ತವೆ. ಕೆಲವೊಮ್ಮೆ ನಾವು ಎದುರಿಸುವ ದೊಡ್ಡ ಹೊರೆ ಯಾವುದೋ ಆರ್ಥಿಕ ಸಂಕಷ್ಟ, ಆರೋಗ್ಯದ ಸಮಸ್ಯೆ ಅಥವಾ ಜೀವನದ ಸವಾಲುಗಳಲ್ಲ. ಬದಲಾಗಿ, ಇತರರು ಆಡಿದ ಅನಗತ್ಯ ಮಾತುಗಳನ್ನು ಮನಸ್ಸಿನಲ್ಲಿ ತುಂಬಿಕೊಂಡು ತಲೆಕೆಡಿಸಿಕೊಳ್ಳುವುದೇ ಆಗಿರುತ್ತದೆ.

ಒಬ್ಬನು ಏನೋ ಹೇಳಿದ. ಮತ್ತೊಬ್ಬನು ಅದಕ್ಕೆ ತನ್ನ ಅಭಿಪ್ರಾಯ ಸೇರಿಸಿದ. ಇನ್ನೊಬ್ಬನು ಟೀಕೆ ಮಾಡಿದ. ಇವೆಲ್ಲವು ಕೆಲವೇ ಕ್ಷಣಗಳ ಮಾತುಗಳು. ಆದರೆ ಅವುಗಳನ್ನು ನಾವು ಮನಸ್ಸಿನಲ್ಲಿ ಸಂಗ್ರಹಿಸಿಕೊಳ್ಳಲು ಆರಂಭಿಸಿದಾಗ, ಆ ಸಣ್ಣ ಸಣ್ಣ ಮಾತುಗಳು ಬೆಟ್ಟ-ಗುಡ್ಡಗಳಂತೆ ಬೆಳೆಯುತ್ತವೆ. ಕೊನೆಗೆ ಅವೇ ನಮ್ಮ ನೆಮ್ಮದಿಯನ್ನು ಮುಚ್ಚುವ ನೆರಳಾಗಿ ಪರಿಣಮಿಸುತ್ತವೆ.

ಬದುಕಿನಲ್ಲಿ ಪ್ರತಿಯೊಬ್ಬರಿಗು ತಮ್ಮದೇ ಆದ ಅಭಿಪ್ರಾಯಗಳಿರುತ್ತವೆ. ಎಲ್ಲರನ್ನು ತೃಪ್ತಿಪಡಿಸುವುದು ಯಾರಿಂದಲೂ ಸಾಧ್ಯವಿಲ್ಲ. ನಾವು ಮೌನವಾಗಿದ್ದರು ಕೆಲವರು ಮಾತನಾಡುತ್ತಾರೆ; ಮಾತನಾಡಿದರು ಟೀಕಿಸುತ್ತಾರೆ. ಗೆದ್ದರೂ ಪ್ರಶ್ನಿಸುತ್ತಾರೆ; ಸೋತರೂ ನಗುತ್ತಾರೆ. ಹೀಗಿರುವಾಗ ಎಲ್ಲರ ಮಾತುಗಳನ್ನು ತಲೆಯಲ್ಲಿ ಹೊತ್ತುಕೊಂಡು ನಡೆಯುವುದು ಎಂದರೆ, ನಮ್ಮ ಬೆನ್ನ ಮೇಲೆ ಕಾಣದ ಕಲ್ಲುಗಳನ್ನು ಹೊತ್ತುಕೊಂಡಂತೆ.

ಒಂದು ಬೆಟ್ಟ ಒಂದು ದಿನದಲ್ಲಿ ನಿರ್ಮಾಣವಾಗುವುದಿಲ್ಲ. ಸಣ್ಣ ಸಣ್ಣ ಮಣ್ಣು, ಕಲ್ಲು, ಧೂಳಿನ ಕಣಗಳು ಸೇರಿ ಕಾಲಕ್ರಮೇಣ ದೊಡ್ಡ ಗುಡ್ಡವಾಗುತ್ತವೆ. ಅದೇ ರೀತಿ, ಅನಗತ್ಯ ಮಾತುಗಳೂ ಒಂದೇ ಬಾರಿ ನಮ್ಮನ್ನು ಕಂಗೆಡಿಸುವುದಿಲ್ಲ. ಆದರೆ ಪ್ರತಿಯೊಂದು ಮಾತನ್ನು ಮನಸ್ಸಿನಲ್ಲಿ ಉಳಿಸಿಕೊಂಡರೆ, ಅವು ನಿಧಾನವಾಗಿ ಚಿಂತೆಯ ಬೆಟ್ಟವಾಗಿ ರೂಪುಗೊಳ್ಳುತ್ತವೆ.

ಇಂದಿನ ಕಾಲದಲ್ಲಿ ಸಾಮಾಜಿಕ ಜಾಲತಾಣಗಳು, ಸುತ್ತಮುತ್ತಲಿನ ಜನರ ಅಭಿಪ್ರಾಯಗಳು, ಹೋಲಿಕೆಗಳು ಮತ್ತು ಟೀಕೆಗಳು ಹೆಚ್ಚಾಗಿವೆ. ಯಾರು ಏನು ಹೇಳಿದರು ಎಂಬುದನ್ನು ಮರೆತುಬಿಡುವ ಬದಲು, ಕೆಲವರು ಅದನ್ನೇ ಮರುಮರು ನೆನಪಿಸಿಕೊಳ್ಳುತ್ತಾರೆ. ಆ ನೆನಪುಗಳು ಮನಸ್ಸಿನೊಳಗೆ ಅಶಾಂತಿಯ ಅಲೆಗಳನ್ನು ಹುಟ್ಟಿಸುತ್ತವೆ. ಒಂದು ವೇಳೆ ನಾವು ನಮ್ಮ ಮೌಲ್ಯವನ್ನು ಇತರರ ಮಾತುಗಳಿಂದ ಅಳೆಯಲು ಆರಂಭಿಸಿದರೆ, ನಮ್ಮ ಸಂತೋಷದ ಕೀಲಿ ನಮ್ಮ ಕೈಯಿಂದ ಜಾರಿಹೋಗುತ್ತದೆ.

ಜೀವನದಲ್ಲಿ ಎಲ್ಲ ಮಾತುಗಳು ಸತ್ಯವಿರುವುದಿಲ್ಲ. ಎಲ್ಲ ಟೀಕೆಗಳು ನ್ಯಾಯಯುತವಾಗಿರುವುದಿಲ್ಲ. ಎಲ್ಲ ಪ್ರಶಂಸೆಗಳೂ ನಿಜವಾಗಿರುವುದಿಲ್ಲ. ಆದ್ದರಿಂದ ಪ್ರತಿಯೊಂದು ಮಾತನ್ನು ಹೃದಯದೊಳಗೆ ಜಾಗ ಕೊಡಬೇಕೆಂಬ ಅವಶ್ಯಕತೆ ಇಲ್ಲ. ಕೆಲವೊಮ್ಮೆ ಕೇಳಿ ಮರೆತುಬಿಡುವುದೇ ದೊಡ್ಡ ಜ್ಞಾನ.

ಮರವು ಹಣ್ಣು ಕೊಡುತ್ತದೆ. ಅದಕ್ಕೆ ಕಲ್ಲು ಹೊಡೆಯುವವರು ಇರುತ್ತಾರೆ. ನೆರಳು ಪಡೆಯುವವರು ಇರುತ್ತಾರೆ. ಆದರೆ ಮರ ತನ್ನ ಸ್ವಭಾವ ಬದಲಿಸಿಕೊಳ್ಳುವುದಿಲ್ಲ. ಹಾಗೆಯೇ ನಾವು ಸಹ ನಮ್ಮ ಮೌಲ್ಯ, ನಮ್ಮ ಗುರಿ ಮತ್ತು ನಮ್ಮ ವ್ಯಕ್ತಿತ್ವದ ಬಗ್ಗೆ ಸ್ಪಷ್ಟತೆ ಹೊಂದಿದ್ದರೆ, ಅನಗತ್ಯ ಮಾತುಗಳು ನಮ್ಮನ್ನು ಅಲುಗಾಡಿಸಲು ಸಾಧ್ಯವಿಲ್ಲ.

ಮನಸ್ಸು ಒಂದು ಮನೆಯಂತಿದೆ. ಆ ಮನೆಯಲ್ಲಿ ನಾವು ಯಾರಿಗೆ ಜಾಗ ಕೊಡುತ್ತೇವೆ ಎಂಬುದು ಬಹಳ ಮುಖ್ಯ. ಪ್ರೇರಣೆ ನೀಡುವ ಆಲೋಚನೆಗಳಿಗೆ, ಪ್ರೀತಿ ನೀಡುವ ನೆನಪುಗಳಿಗೆ ಮತ್ತು ಭರವಸೆ ನೀಡುವ ಕನಸುಗಳಿಗೆ ಜಾಗ ಕೊಡಿ. ಆದರೆ ದ್ವೇಷ, ಅಸೂಯೆ, ಟೀಕೆ ಮತ್ತು ಅನಗತ್ಯ ಮಾತುಗಳಿಗೆ ಅಲ್ಲ. ಇಲ್ಲವಾದರೆ ಆ ಮನೆ ನಿಧಾನವಾಗಿ ಕತ್ತಲೆಯಿಂದ ತುಂಬಿಕೊಳ್ಳುತ್ತದೆ. ನಮ್ಮ ಬದುಕಿನ ದಾರಿಯನ್ನು ನಾವು ನಡೆಯಬೇಕು. ನಮ್ಮ ಕನಸುಗಳನ್ನು ನಾವು ಸಾಕಾರಗೊಳಿಸಬೇಕು. ನಮ್ಮ ಹೋರಾಟವನ್ನು ನಾವು ಎದುರಿಸಬೇಕು. ಹಾಗಿರುವಾಗ, ನಮ್ಮ ಜೀವನದ ಜವಾಬ್ದಾರಿ ಹೊತ್ತಿರದವರ ಮಾತುಗಳಿಗೆ ಏಕೆ ಇಷ್ಟೊಂದು ಮಹತ್ವ ನೀಡಬೇಕು? ಅವರು ಕೆಲ ನಿಮಿಷ ಮಾತನಾಡಬಹುದು. ಆದರೆ ನಾವು ಅದನ್ನು ತಿಂಗಳುಗಳ ಕಾಲ ಯೋಚಿಸುತ್ತಾ ಕಳೆಯುತ್ತೇವೆ. ನಷ್ಟವಾಗುವುದು ಅವರ ಸಮಯವಲ್ಲ, ನಮ್ಮ ಅಮೂಲ್ಯ ಜೀವನ.

ಸಂತೋಷದಿಂದ ಬದುಕುವವರು ಒಂದು ರಹಸ್ಯವನ್ನು ತಿಳಿದಿರುತ್ತಾರೆ. ಅವರು ಎಲ್ಲವನ್ನೂ ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ. ಅಗತ್ಯವಾದುದನ್ನು ಮಾತ್ರ ಉಳಿಸಿಕೊಳ್ಳುತ್ತಾರೆ. ಉಳಿದುದನ್ನು ಗಾಳಿಗೆ ಬಿಟ್ಟ ಎಲೆಯಂತೆ ಬಿಡುತ್ತಾರೆ. ಅದಕ್ಕಾಗಿಯೇ ಅವರ ಮನಸ್ಸು ಹಗುರವಾಗಿರುತ್ತದೆ.

ಬದುಕು ಬಹಳ ಚಿಕ್ಕದು. ಅದನ್ನು ಇತರರ ಮಾತುಗಳ ನೆರಳಿನಲ್ಲಿ ಕಳೆಯಲು ಸಾಧ್ಯವಿಲ್ಲ. ಪ್ರತಿದಿನವೂ ಹೊಸ ಅವಕಾಶಗಳನ್ನು, ಹೊಸ ಅನುಭವಗಳನ್ನು ಮತ್ತು ಹೊಸ ಸಂತೋಷಗಳನ್ನು ನೀಡುತ್ತದೆ. ಆದರೆ ನಾವು ಹಳೆಯ ಟೀಕೆಗಳನ್ನೇ ಹಿಡಿದುಕೊಂಡು ಕುಳಿತರೆ, ಆ ಹೊಸ ಬೆಳಕು ನಮ್ಮ ಕಣ್ಣಿಗೆ ಕಾಣುವುದೇ ಇಲ್ಲ.

ಆದ್ದರಿಂದ ಇಂದೇ ಒಂದು ನಿರ್ಧಾರ ಮಾಡೋಣ. ಯಾರೋ ಹೇಳಿದ ಅನಗತ್ಯ ಮಾತುಗಳನ್ನು ಮನಸ್ಸಿನಲ್ಲಿ ಸಂಗ್ರಹಿಸಿಕೊಳ್ಳುವುದನ್ನು ನಿಲ್ಲಿಸೋಣ. ಪ್ರತಿಯೊಂದು ಟೀಕೆಯನ್ನು ಹೊತ್ತುಕೊಂಡು ಬೆಟ್ಟ-ಗುಡ್ಡ ಕಟ್ಟಿಕೊಳ್ಳುವುದನ್ನು ಬಿಡೋಣ. ನಮ್ಮ ಆತ್ಮವಿಶ್ವಾಸವನ್ನು ನಮ್ಮದೇ ಕೈಯಲ್ಲಿ ಇಟ್ಟುಕೊಳ್ಳೋಣ.

ಏಕೆಂದರೆ ಜೀವನವನ್ನು ಸುಂದರವಾಗಿಸುವುದು ಇತರರ ಅಭಿಪ್ರಾಯಗಳಲ್ಲ; ನಮ್ಮ ಒಳಮನಸ್ಸಿನ ಶಾಂತಿ. ಅನಗತ್ಯ ಮಾತುಗಳನ್ನು ತಲೆಯಲ್ಲಿ ತುಂಬಿಕೊಂಡರೆ ಅವು ಬೆಟ್ಟ-ಗುಡ್ಡಗಳಾಗುತ್ತವೆ. ಆದರೆ ಅವನ್ನು ಸಮಯದಲ್ಲೇ ಬಿಟ್ಟುಬಿಟ್ಟರೆ, ಮನಸ್ಸು ಆಕಾಶದಷ್ಟು ವಿಶಾಲವಾಗುತ್ತದೆ.

ಅಂತಿಮವಾಗಿ ನೆನಪಿಡಬೇಕಾದ ಒಂದು ಸತ್ಯವೇನೆಂದರೆ ಎಲ್ಲರ ಮಾತುಗಳನ್ನು ಕೇಳಬಹುದು, ಆದರೆ ಎಲ್ಲವನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗಿಲ್ಲ. ಇಲ್ಲವಾದರೆ ಆ ಮಾತುಗಳೇ ಬೆಟ್ಟ-ಗುಡ್ಡಗಳಾಗಿ ಬೆಳೆದು ನಮ್ಮ ನೆಮ್ಮದಿಯ ದಾರಿಯನ್ನು ಮುಚ್ಚಿಬಿಡುತ್ತವೆ. ಬದುಕನ್ನು ಹಗುರವಾಗಿಸಿಕೊಳ್ಳಬೇಕಾದರೆ, ಅನಗತ್ಯ ಮಾತುಗಳನ್ನು ಗಾಳಿಯಲ್ಲಿ ಕರಗಲು ಬಿಡಬೇಕು.

---

# ಬ್ಲೂ-ಕಾಲರ್ ಬ್ಲ್ಯಾಕ್‌ಔಟ್: ಕೌಶಲ್ಯದ ಬಿಕ್ಕಟ್ಟು ಮತ್ತು ಬದಲಾಗುತ್ತಿರುವ ಜಾಗತಿಕ ಆರ್ಥಿಕತೆ




ಇತ್ತೀಚಿನ ದಿನಗಳಲ್ಲಿ ಜಾಗತಿಕ ಆರ್ಥಿಕ ವಲಯದಲ್ಲಿ ಹೊಸದೊಂದು ಆತಂಕದ ಚರ್ಚೆ ಮುಂಚೂಣಿಗೆ ಬರುತ್ತಿದೆ. ಅದನ್ನವರು "ಬ್ಲೂ-ಕಾಲರ್ ಬ್ಲ್ಯಾಕ್‌ಔಟ್" (Blue-Collar Blackout) ಎಂದು ಕರೆಯುತ್ತಿದ್ದಾರೆ. ಸರಳವಾಗಿ ಹೇಳಬೇಕೆಂದರೆ, ಇದು ತಾಂತ್ರಿಕ ಕೌಶಲ್ಯವಿರುವ ಪರಿಣಿತ ಕೆಲಸಗಾರರ ಜಾಗತಿಕ ಕೊರತೆ. ನಮಗೆ ದೈನಂದಿನ ಬದುಕಿಗೆ ಅತ್ಯಗತ್ಯವಾಗಿ ಬೇಕಾಗುವ ಪ್ಲಂಬರ್, ಎಲೆಕ್ಟ್ರಿಷಿಯನ್, ವೆಲ್ಡರ್ ಅಥವಾ ಮೆಕ್ಯಾನಿಕ್‌ಗಳಂತಹ ವೃತ್ತಿಪರರು ಮಾರುಕಟ್ಟೆಯಲ್ಲಿ ಸುಲಭವಾಗಿ ಸಿಗದಂತಹ ಪರಿಸ್ಥಿತಿ ಜಗತ್ತಿನಾದ್ಯಂತ ಸೃಷ್ಟಿಯಾಗುತ್ತಿರುವುದರ ಮುನ್ಸೂಚನೆ ಇದು.

ದಶಕಗಳಿಂದಲೂ ನಮ್ಮ ಶಿಕ್ಷಣ ವ್ಯವಸ್ಥೆ ಮತ್ತು ಸಮಾಜ ಯುವ ಪೀಳಿಗೆಗೆ ಕೇವಲ ನಾಲ್ಕು ವರ್ಷಗಳ ಸಾಂಪ್ರದಾಯಿಕ ಪದವಿ ಮತ್ತು ಹವಾನಿಯಂತ್ರಿತ ಕಚೇರಿ ಉದ್ಯೋಗಗಳ ಕನಸನ್ನೇ ಬಿತ್ತುತ್ತಾ ಬಂದಿವೆ. ಈ "ಪದವಿ ವ್ಯಾಮೋಹದ ಬಲೆ"ಯಿಂದಾಗಿ ತಾಂತ್ರಿಕ ವೃತ್ತಿ ಶಿಕ್ಷಣದ ಕಡೆಗೆ ಯುವಜನರ ಒಲವು ತೀವ್ರವಾಗಿ ಕಡಿಮೆಯಾಗಿದೆ. ಈಗಿರುವ ಹಳೆಯ ತಲೆಮಾರಿನ ನುರಿತ ಕೆಲಸಗಾರರು ನಿವೃತ್ತರಾಗುತ್ತಿದ್ದಂತೆ, ಆ ಜಾಗವನ್ನು ತುಂಬಲು ಹೊಸಬರು ಸಿದ್ಧರಿಲ್ಲದೆ ಇಡೀ ಜಗತ್ತು ಇಂದು ಒಂದು ಅಗೋಚರ ಆರ್ಥಿಕ ಸ್ಥಿತ್ಯಂತರಕ್ಕೆ ಸಾಕ್ಷಿಯಾಗುತ್ತಿದೆ.

**ಜಾಗತಿಕ ಚಿತ್ರಣ:** ವಿಭಿನ್ನ ದೇಶಗಳ ಮೇಲಿನ ಪರಿಣಾಮ

ಈ ಬಿಕ್ಕಟ್ಟು ಜಗತ್ತಿನ ವಿವಿಧ ದೇಶಗಳನ್ನು ವಿಭಿನ್ನ ರೀತಿಯಲ್ಲಿ ಬಾಧಿಸುತ್ತಿದೆ:

**ಅಭಿವೃದ್ಧಿ ಹೊಂದಿದ ದೇಶಗಳು (Developed Nations):** ಅಮೆರಿಕ, ಯುರೋಪ್ ಹಾಗೂ ಜಪಾನ್‌ನಂತಹ ದೇಶಗಳಲ್ಲಿ ಜನಸಂಖ್ಯೆ ವೇಗವಾಗಿ ವಯಸ್ಸಾಗುತ್ತಿದೆ. ಜಾಗತಿಕ ವರದಿಗಳ ಪ್ರಕಾರ, ಮುಂಬರುವ ದಶಕದಲ್ಲಿ ಅಮೆರಿಕವೊಂದರಲ್ಲೇ ಸುಮಾರು ಹತ್ತಾರು ಲಕ್ಷ ನುರಿತ ಕೈಗಾರಿಕಾ ಉದ್ಯೋಗಗಳು ಕೇವಲ ತರಬೇತಿ ಪಡೆದ ಯುವಕರ ಕೊರತೆಯಿಂದಾಗಿ ಖಾಲಿ ಉಳಿಯಲಿವೆ. ಇದರ ಪರಿಣಾಮವಾಗಿ ಅಲ್ಲಿ ಮೂಲಸೌಕರ್ಯ ನಿರ್ವಹಣೆಯ ವೆಚ್ಚ ಗಗನಕ್ಕೇರುತ್ತಿದೆ.

**ಅಭಿವೃದ್ಧಿ ಹೊಂದದ ಮತ್ತು ಹೊಂದುತ್ತಿರುವ ದೇಶಗಳು (Developing Nations):** ಇಂತಹ ದೇಶಗಳಲ್ಲಿ ಶ್ರಮಿಕ ವರ್ಗದ ಕೊರತೆಯಿಲ್ಲದಿದ್ದರೂ, ಆಧುನಿಕ ತಂತ್ರಜ್ಞಾನಕ್ಕೆ ಬೇಕಾದ "ಉನ್ನತ ಕೌಶಲ್ಯದ" (High-skill) ಕೊರತೆಯಿದೆ. ತರಬೇತಿಯ ಕೊರತೆಯಿಂದಾಗಿ ಇಲ್ಲಿನ ಯುವಕರು ಕಡಿಮೆ ಆದಾಯದ ಅಸಂಘಟಿತ ವಲಯದಲ್ಲೇ ಉಳಿಯುವಂತಾಗಿದೆ.

**ಭಾರತದ ವಿಶಿಷ್ಟ ಪರಿಸ್ಥಿತಿ ಮತ್ತು ಜಾಗತಿಕ ಅವಕಾಶ**

ಭಾರತ ಇಂದು ಜಗತ್ತಿನಲ್ಲೇ ಅತಿ ಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿರುವ ದೇಶ. ಆದರೆ ನಮ್ಮ ಮುಂದಿರುವ ಬಹುದೊಡ್ಡ ಸವಾಲೆಂದರೆ "ಉದ್ಯೋಗಾರ್ಹತೆಯ ಕೊರತೆ" (Employability Gap). ಉದ್ಯಮ ರಂಗದ ಸಮೀಕ್ಷೆಗಳ ಪ್ರಕಾರ, ದೇಶದ ಶೇಕಡಾ 45 ಕ್ಕೂ ಹೆಚ್ಚು ಪದವೀಧರರು ಇಂದಿನ ಮಾರುಕಟ್ಟೆಗೆ ಅಗತ್ಯವಿರುವ ಪ್ರಾಯೋಗಿಕ ಕೌಶಲ್ಯಗಳನ್ನು ಹೊಂದಿಲ್ಲ. ಆದರೆ, ಇದೇ ಸವಾಲು ಭಾರತಕ್ಕೆ ಒಂದು ಜಾಗತಿಕ ಅವಕಾಶವೂ ಹೌದು. ಅಭಿವೃದ್ಧಿ ಹೊಂದಿದ ದೇಶಗಳು ತೀವ್ರ ಶ್ರಮಿಕ ಕೊರತೆಯನ್ನು ಎದುರಿಸುತ್ತಿರುವುದರಿಂದ, ಭಾರತವು ಜಾಗತಿಕ ಮಾರುಕಟ್ಟೆಗೆ "ಕೌಶಲ್ಯದ ರಾಜಧಾನಿ"ಯಾಗಬಲ್ಲದು. ಜರ್ಮನಿ, ಜಪಾನ್ ಮತ್ತು ಮಧ್ಯಪ್ರಾಚ್ಯ ದೇಶಗಳು ಭಾರತದ ನುರಿತ ತಾಂತ್ರಿಕ ಕೆಲಸಗಾರರನ್ನು ಮುಕ್ತವಾಗಿ ಆಹ್ವಾನಿಸುತ್ತಿವೆ. ನಾವು ಕೇವಲ ಸಾಫ್ಟ್‌ವೇರ್ ಇಂಜಿನಿಯರ್‌ಗಳನ್ನಷ್ಟೇ ಅಲ್ಲದೆ, ಜಾಗತಿಕ ಗುಣಮಟ್ಟದ ತಾಂತ್ರಿಕ ತಜ್ಞರನ್ನು (Skilled Technicians) ಸಿದ್ಧಪಡಿಸಬೇಕಾದ ಅನಿವಾರ್ಯತೆ ಇದೆ.

**ಬದಲಾಗುತ್ತಿರುವ ಆರ್ಥಿಕ ವಾಸ್ತವ: ಕಚೇರಿ ಉದ್ಯೋಗ ಮತ್ತು ಕುಶಲ ವೃತ್ತಿ :** ಪ್ರಸ್ತುತ ಉದ್ಯೋಗ ಮಾರುಕಟ್ಟೆಯ ಸಮೀಕರಣಗಳು ವೇಗವಾಗಿ ಬದಲಾಗುತ್ತಿವೆ. ಕಚೇರಿ ಉದ್ಯೋಗಗಳು ಮತ್ತು ಕುಶಲ ವೃತ್ತಿಗಳ ನಡುವಿನ ವ್ಯತ್ಯಾಸವನ್ನು ಇಂದು ನಾವು ಹೊಸ ದೃಷ್ಟಿಕೋನದಿಂದ ನೋಡಬೇಕಾಗಿದೆ:

**ಕೃತಕ ಬುದ್ಧಿಮತ್ತೆಯ (AI) ಪ್ರಭಾವ:** ಇಂದು ಕಚೇರಿಯ ಕರಡು ಪತ್ರಗಳನ್ನು ಸಿದ್ಧಪಡಿಸುವುದು, ದತ್ತಾಂಶ ವಿಶ್ಲೇಷಣೆ ಅಥವಾ ಬೇಸಿಕ್ ಕೋಡಿಂಗ್‌ನಂತಹ ಡಿಜಿಟಲ್ ಕೆಲಸಗಳನ್ನು ಕೃತಕ ಬುದ್ಧಿಮತ್ತೆ (AI) ಅತ್ಯಂತ ವೇಗವಾಗಿ ಆಪತ್ತಿಗೆ ಸಿಲುಕಿಸುತ್ತಿದೆ. ಆದರೆ, ಯಾವುದೇ ಸಾಫ್ಟ್‌ವೇರ್ ಆಗಲಿ ಅಥವಾ ಆಲ್ಗೊರಿದಮ್ ಆಗಲಿ ಭೌತಿಕವಾಗಿ ಬಂದು ಮನೆಯೊಳಗಿನ ಪೈಪ್ ಲೀಕ್ ಸರಿಪಡಿಸಲು ಅಥವಾ ಕಾರ್ಖಾನೆಯ ಯಂತ್ರದ ದೋಷವನ್ನು ಪತ್ತೆಹಚ್ಚಲು **ಸಾಧ್ಯವಿಲ್ಲ.**

**ಆದಾಯ ಮತ್ತು ಸ್ಥಿರತೆ:** ಒಂದು ಸಾಮಾನ್ಯ ಪದವಿ ಮುಗಿಸಲು ಇಂದು ಲಕ್ಷಾಂತರ ರೂಪಾಯಿಗಳ ವೆಚ್ಚವಾಗುತ್ತದೆ. ಆದರೆ ತಾಂತ್ರಿಕ ಕುಶಲ ವೃತ್ತಿಗಳಲ್ಲಿ ಅಪ್ರೆಂಟಿಸ್‌ಶಿಪ್ (ತರಬೇತಿ) ಪಡೆಯುತ್ತಿರುವಾಗಲೇ ಆದಾಯ ಗಳಿಸಲು ಆರಂಭಿಸಬಹುದು. ನುರಿತ ಸ್ವತಂತ್ರ ತಾಂತ್ರಿಕ ಕೆಲಸಗಾರರು ತಮ್ಮ ಕೆಲಸದ ಬೇಡಿಕೆಗೆ ತಕ್ಕಂತೆ ಕಾರ್ಪೊರೇಟ್ ಉದ್ಯೋಗಿಗಳಿಗಿಂತಲೂ ಉತ್ತಮ ಆದಾಯ ಗಳಿಸುತ್ತಿದ್ದಾರೆ.

ಉನ್ನತ ಬೇಡಿಕೆಯಿರುವ ತಾಂತ್ರಿಕ ಕ್ಷೇತ್ರಗಳು ಮತ್ತು ತರಬೇತಿ ಮಾರ್ಗಗಳು

**ಕುಶಲ ವೃತ್ತಿಗಳಲ್ಲಿ ಆಳವಾದ ತಾಂತ್ರಿಕ ಜ್ಞಾನ ಮತ್ತು ಕರಾರುವಾಕ್ ಏಕಾಗ್ರತೆ ಬೇಡುವ ಕೆಲವು ಕ್ಷೇತ್ರಗಳಿಗೆ ಇಂದು ಜಾಗತಿಕವಾಗಿ ಅತ್ಯಂತ ಹೆಚ್ಚಿನ ಗೌರವ ಹಾಗೂ ಬೇಡಿಕೆಯಿದೆ:**

1. CNC ಮತ್ತು ಪ್ರೆಸಿಷನ್ ಮ್ಯಾಚಿಂಗ್: ವಾಯುಯಾನ ಮತ್ತು ವೈದ್ಯಕೀಯ ಉಪಕರಣಗಳಿಗೆ ಬೇಕಾದ ಅತ್ಯಂತ ಸೂಕ್ಷ್ಮ ಬಿಡಿಭಾಗಗಳನ್ನು ತಯಾರಿಸಲು ಕಂಪ್ಯೂಟರ್-ನಿಯಂತ್ರಿತ ಯಂತ್ರಗಳನ್ನು ನಿರ್ವಹಿಸುವ ವೃತ್ತಿ.
2. **ಇಂಡಸ್ಟ್ರಿಯಲ್ ಎಲೆಕ್ಟ್ರಿಷಿಯನ್:** ಬೃಹತ್ ಕಾರ್ಖಾನೆಗಳು, ಆಸ್ಪತ್ರೆಗಳು ಮತ್ತು ಐಟಿ ಡೇಟಾ ಸೆಂಟರ್‌ಗಳ ವಿದ್ಯುತ್ ನಿಯಂತ್ರಣ ವ್ಯವಸ್ಥೆಯನ್ನು ನೋಡಿಕೊಳ್ಳುವ ಜವಾಬ್ದಾರಿ.
3. **ಸ್ಪೆಷಲೈಸ್ಡ್ ವೆಲ್ಡಿಂಗ್:** ಸಮುದ್ರದಾಳದ ತೈಲ ಬಾವಿಗಳು ಅಥವಾ ಪರಮಾಣು ರಿಯಾಕ್ಟರ್‌ಗಳಂತಹ ಅತ್ಯಂತ ಅಪಾಯಕಾರಿ ಮತ್ತು ಸೂಕ್ಷ್ಮ ಜಾಗಗಳಲ್ಲಿ ಲೋಹಗಳನ್ನು ಬೆಸುಗೆ ಮಾಡುವ ಕಲೆ.
4. **ಇಂಡಸ್ಟ್ರಿಯಲ್ HVAC-R ಟೆಕ್ನಿಷಿಯನ್:** ಬೃಹತ್ ಕೈಗಾರಿಕೆಗಳು ಮತ್ತು ತಂತ್ರಜ್ಞಾನದ ಸರ್ವರ್ ರೂಮ್‌ಗಳನ್ನು ತಂಪಾಗಿರಿಸಲು ಬೇಕಾದ ದೈತ್ಯ ಹವಾನಿಯಂತ್ರಣ ವ್ಯವಸ್ಥೆಗಳ ನಿರ್ವಹಣೆ.

ಆಕಾಂಕ್ಷಿಗಳಿಗೆ ಇರುವ ಮಾರ್ಗಗಳು:

**ಈ ಕೌಶಲ್ಯಗಳನ್ನು ಪಡೆಯಲು ಇಂದು ಹಲವಾರು ಉತ್ತಮ ವೇದಿಕೆಗಳಿವೆ:** ಸರ್ಕಾರದ ITI (Industrial Training Institutes) ಮತ್ತು ಡಿಪ್ಲೊಮಾ ಕಾಲೇಜುಗಳು ಪ್ರಾಯೋಗಿಕ ತರಬೇತಿಗೆ ಉತ್ತಮ ಮುನ್ನುಡಿ. ಕೇಂದ್ರ ಸರ್ಕಾರದ ಕೌಶಲ್ ವಿಕಾಸ್ ಯೋಜನೆ (PMKVY) ಅಡಿಯಲ್ಲಿ ಅಲ್ಪಾವಧಿಯ ಉನ್ನತ ತರಬೇತಿ ಮತ್ತು ಪ್ರಮಾಣಪತ್ರಗಳನ್ನು ಪಡೆಯಬಹುದು.

ಪ್ರಮುಖ ಕೈಗಾರಿಕೆಗಳು ನೀಡುವ ಅಪ್ರೆಂಟಿಸ್‌ಶಿಪ್ ಪ್ರೋಗ್ರಾಂ'ಗಳು ನೇರ ಉದ್ಯೋಗದ ಅನುಭವವನ್ನು ನೀಡುತ್ತವೆ.

**ನಮ್ಮ ಜವಾಬ್ದಾರಿ:** ಪೋಷಕರು, ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರದ ಪಾತ್ರ : ಈ ಮುಂಬರುವ ಬಿಕ್ಕಟ್ಟನ್ನು ಎದುರಿಸಲು ನಮ್ಮ ಸಾಮಾಜಿಕ ಚಿಂತನೆ ಬದಲಾಗಬೇಕಿದೆ:

**ಪೋಷಕರ ಪಾತ್ರ:** ಮೊಟ್ಟಮೊದಲಿಗೆ ಪೋಷಕರು "ಕೇವಲ ಬಿಳಿ ಕಾಲರ್ ಉದ್ಯೋಗಗಳಷ್ಟೇ ಗೌರವಾನ್ವಿತ" ಎಂಬ ಹಳೆಯ ನಂಬಿಕೆಯಿಂದ ಹೊರಬರಬೇಕು. ಮಗುವಿನ ಆಸಕ್ತಿ ಕೈಕೆಲಸಗಳಲ್ಲಿದ್ದರೆ, ಅದನ್ನು ಕೀಳಾಗಿ ನೋಡದೆ ಪ್ರೋತ್ಸಾಹಿಸಬೇಕು. ಕೌಶಲ್ಯವಿರುವ ವೃತ್ತಿ ಬದುಕೂ ಕೂಡ ಉನ್ನತ ಆರ್ಥಿಕ ಭದ್ರತೆ ನೀಡುತ್ತದೆ ಎಂಬುದನ್ನು ಒಪ್ಪಿಕೊಳ್ಳಬೇಕು.

**ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ:** ಶಾಲಾ-ಕಾಲೇಜುಗಳ ಪಠ್ಯಕ್ರಮ ಕೇವಲ ಸೈದ್ಧಾಂತಿಕವಾಗುಳಿಯದೆ, ಪ್ರಾಯೋಗಿಕ ಜ್ಞಾನಕ್ಕೆ ಒತ್ತು ನೀಡಬೇಕು. ಶಾಲೆಗಳಲ್ಲೇ ಮೂಲಭೂತ ಕೈಕೆಲಸಗಳ (Vocational Training) ಪರಿಚಯ ಇರಬೇಕು. ಪದವಿ ಶಿಕ್ಷಣದ ಜೊತೆಗೆ ಕಡ್ಡಾಯ ಕೌಶಲ್ಯ ತರಬೇತಿಯನ್ನು ಜೋಡಿಸಬೇಕು.

ಸರ್ಕಾರದ ಗಮನ: ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಮೂಲಸೌಕರ್ಯಗಳನ್ನು ಆಧುನೀಕರಿಸಬೇಕು. ಉದ್ಯಮ ರಂಗದ ಇಂದಿನ ಅಗತ್ಯಕ್ಕೆ ತಕ್ಕಂತೆ ಪಠ್ಯಗಳನ್ನು ಪರಿಷ್ಕರಿಸಬೇಕು. ಕೌಶಲ್ಯ ತರಬೇತಿ ಪಡೆದ ಯುವಕರಿಗೆ ಸ್ವಂತ ಉದ್ಯಮ ಆರಂಭಿಸಲು ಸುಲಭ ಸಾಲ ಸೌಲಭ್ಯಗಳನ್ನು ಒದಗಿಸಬೇಕು ಮತ್ತು ಈ ವೃತ್ತಿಗಳಿಗೆ ಸಾಮಾಜಿಕ ಗೌರವ ತಂದುಕೊಡುವಂತಹ ಜಾಗೃತಿ ಮೂಡಿಸಬೇಕು.

ಭವಿಷ್ಯದ ದಿನಗಳಲ್ಲಿ ಆರ್ಥಿಕತೆಯ ವಿಭಜನೆ ಕೇವಲ "ಬ್ಲೂ ಕಾಲರ್ " ಮತ್ತು "ವೈಟ್-ಕಾಲರ್" ನಡುವೆ ಇರುವುದಿಲ್ಲ. ಬದಲಿಗೆ, "ಯಾವ ಕೆಲಸವನ್ನು ಕಂಪ್ಯೂಟರ್ ಮಾಡಬಲ್ಲದು" ಮತ್ತು "ಯಾವ ಕೆಲಸಕ್ಕೆ ಒಬ್ಬ ಮನುಷ್ಯ ಭೌತಿಕವಾಗಿ ಹಾಜರಿದ್ದು ತನ್ನ ಕೈಚಳಕವನ್ನು ತೋರಿಸಬೇಕಾಗುತ್ತದೆ" ಎನ್ನುವುದರ ನಡುವೆ ಇರಲಿದೆ. ಮುಂಬರುವ ಈ ಕೌಶಲ್ಯದ ಬಿಕ್ಕಟ್ಟಿನ ಸಂದರ್ಭದಲ್ಲಿ, ದೈಹಿಕ ಶ್ರಮ ಮತ್ತು ತಾಂತ್ರಿಕ ಕೌಶಲ್ಯಗಳನ್ನು ಗೌರವಿಸಿ ಮೈಗೂಡಿಸಿಕೊಳ್ಳುವ ಯುವ ಪೀಳಿಗೆಗೆ ಮಾರುಕಟ್ಟೆಯಲ್ಲಿ ನಿಶ್ಚಿತ ಉದ್ಯೋಗ ಭದ್ರತೆ ಹಾಗೂ ಅರ್ಹ ಗೌರವ ಸಿಗುವುದರಲ್ಲಿ ಸಂಶಯವಿಲ್ಲ. ನಮ್ಮ ಯುವಶಕ್ತಿಯನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಬೇಕಾದ ಜವಾಬ್ದಾರಿ ಈಗ ನಮ್ಮೆಲ್ಲರ ಮೇಲಿದೆ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

( ಸಂಗ್ರಹ : ವಿವಿಧ ಮೂಲಗಳಿಂದ)

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,